Registered with the Registrar of Newspapers in India Under No. 50622/86
'Prasada' Bi-Monthly, Vol. 32 Issue No. 4, July-August 2017

ನಿರ್ಮಾಣಗೊಳ್ಳಲಿರುವ ವೃತ್ತ ಮತ್ತು ಪುತ್ತಳಿಯ ನೀಲನಕ್ಷೆ

ಸದಸ್ಯತ್ವದ ವಿವರ
ದಶವಾರ್ಷಿಕ: 500 ರೂ. * ವಾರ್ಷಿಕ: 100 ರೂ. * ಬಿಡಿ ರೂ.: 10 ರೂ.
e-mail: jsspublications@gmail.com * www.jssonline.org

# ಪ್ರಸಾದ

ದ್ವೈಮಾಸಿಕ

ಸಂಪುಟ 32 ಸಂಚಿಕೆ 4 ಜುಲೈ–ಆಗಸ್ಟ್ 2017

## 102ನೆಯ ಜಯಂತಿ ಮಹೋತ್ಸವ ವಿಶೇಷ ಸಂಚಿಕೆ

ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

# ಪ್ರಸಾದ

ಸಂಪುಟ 32 ಸಂಚಿಕೆ 4 ಜುಲೈ-ಆಗಸ್ಟ್ 2017

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ**
**102ನೆಯ ಜಯಂತಿ ಮಹೋತ್ಸವದ ವಿಶೇಷ ಸಂಚಿಕೆ**

ಸಂಪಾದಕ
**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004



**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಲಿಂಗೈಕ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**


**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರ ಮಠ

ಶ್ರೀ ಎಸ್.ಪಿ. ಮಂಜುನಾಥ್

ಶ್ರೀ ಎಸ್. ನಂಜುಂಡಯ್ಯ

ಡಾ. ಎನ್.ಎಸ್. ತಾರಾನಾಥ

ಡಾ. ಓ.ಎಲ್. ನಾಗಭೂಷಣಸ್ವಾಮಿ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


---

ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ
ಮುಂತಾದ ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ.
ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು

# ಸಂಪಾದಕೀಯ

**ಆ**ಗಸ್ಟ್ 29 ರಾಜೇಂದ್ರ ಶ್ರೀಗಳ ಜನ್ಮದಿನ. ಪ್ರತಿವರ್ಷದ ಜುಲೈ-ಆಗಸ್ಟ್ ತಿಂಗಳ ಪ್ರಸಾದ ಸಂಚಿಕೆಯನ್ನು ಲಿಂ. ಜಗದ್ಗುರು ಡಾ. ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ ಮೀಸಲಾಗಿಸುವುದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯವಾಗಿದೆ. ರಾಜೇಂದ್ರ ಶ್ರೀಗಳು ಸುತ್ತೂರು ಜಗದ್ಗುರು ವೀರಸಿಂಹಾಸನ ಪೀಠದ 23ನೇ ಗುರುಗಳು. ಪರಮಪೂಜ್ಯರ ಕಾಲಮಾನದಲ್ಲಿ ಶ್ರೀಮಠ ಸಮಾಜಸೇವೆಗಾಗಿ ತನ್ನನ್ನು ಸಮರ್ಪಿಸಿಕೊಂಡ ರೀತಿ ಅನನ್ಯವಾದುದು. ಅನ್ನ, ಅರಿವು, ಅನುಭಾವ, ಆರೋಗ್ಯ, ದಾಸೋಹಕ್ಕಾಗಿ ಅವರು ತಮ್ಮ ತನುಮನ ಸವೆಸಿ, ಸೇವೆಗೈದ ಪರಿ ಅಚ್ಚರಿ ಮೂಡಿಸುವಂತಾದ್ದು. ಒಂದು ಬಹುದೊಡ್ಡ ಪೀಠದ ಅಧಿಪತಿ ಎಂದರೆ ಜನರು ನಿರೀಕ್ಷಿಸುವ ಯಾವುದೇ ಬಾಹ್ಯಾಡಂಬರಗಳಿಲ್ಲದೆ, ಸಾಮಾನ್ಯರ ನಡುವೆ ಸಾಮಾನ್ಯರಂತೆಯೇ ವ್ಯವಹರಿಸುತ್ತಿದ್ದ ಶ್ರೀ ರಾಜೇಂದ್ರ ಸ್ವಾಮಿಗಳ ಬದುಕಿನ ಕ್ರಮ ಸದಾಕಾಲಕ್ಕೂ ಸ್ಮರಣೀಯವಾದುದಾಗಿದೆ.

ನಾಡಿನ ಖ್ಯಾತ ಸಾಹಿತಿ ಕೆ. ವೀರಭದ್ರ ಅವರು ತಮ್ಮ ಕಾಲೇಜು ದಿನಗಳಲ್ಲಿ 'ಆನೆ ಕರೋಟಿ' ವಿದ್ಯಾರ್ಥಿನಿಲಯದಲ್ಲಿ ಆಶ್ರಯ ಪಡೆದಿದ್ದರು. ರಾಜೇಂದ್ರ ಶ್ರೀಗಳು ಆಗಾಗ್ಗೆ ಹಾಸ್ಟೆಲ್‌ಗಳಿಗೆ ಹೋಗಿ ವಿದ್ಯಾರ್ಥಿಗಳು ಇಷ್ಟಲಿಂಗಧಾರಣೆ ಮಾಡಿದ್ದಾರೋ ಇಲ್ಲವೋ ಎನ್ನುವುದನ್ನು ಪರೀಕ್ಷೆ ಮಾಡುತ್ತಿದ್ದರು. ಒಮ್ಮೆ ಹಾಸ್ಟೆಲಿನಲ್ಲಿ ಹೀಗೆ ತಪಾಸಣೆ ಮಾಡುತ್ತಿದ್ದಾಗ ವೀರಭದ್ರ ಅವರ ಬಳಿ ಬಂದು, ಎಲ್ಲಿ ನಿನ್ನ ಕರಡಿಗೆ ತೋರಿಸು ಎಂದರು. ವೀರಭದ್ರರು ಕರಡಿಗೆಯನ್ನು ಧರಿಸಿರಲಿಲ್ಲ. ಆ ಕಾರಣಕ್ಕೆ ಪೂಜ್ಯರ ದೃಷ್ಟಿಯನ್ನು ಎದುರಿಸಲಾರದೆ ನೆಲವನ್ನು ನೋಡುತ್ತಾ ನಿಂತರು.

ನೀನು ಒಬ್ಬ ಸಾಹಿತಿ (ಇವರು ವಿದ್ಯಾರ್ಥಿ ದೆಸೆಯಲ್ಲಿಯೇ ಕಥೆಗಳನ್ನು ಬರೆಯುತ್ತಿದ್ದರು). ನಾಲ್ಕು ಜನಕ್ಕೆ ಮಾದರಿಯಾಗಿ ಬದುಕಬೇಕಾದವನು. ನೀನೇ ಹೀಗೆ ಮಾಡಿದರೆ ಹೇಗೆ? ದೊಡ್ಡ ಸಾಹಿತ್ಯ ಬರೆಯುವುದು ದೊಡ್ಡದಲ್ಲ, ಅದಕ್ಕೆ ತಕ್ಕಂತೆ ದೊಡ್ಡದಾಗಿ ಬದುಕಬೇಕು. ಬಸವಣ್ಣನವರು ಇಷ್ಟಲಿಂಗವನ್ನು ಏಕೆ ಕೊಟ್ಟರು ಎನ್ನುವುದು ಇಲ್ಲಿರುವ ಎಲ್ಲರಿಗಿಂತ ನಿನಗೆ ಚೆನ್ನಾಗಿಯೇ ತಿಳಿದಿದೆ. ಆದರೂ ಏಕೆ ಅದನ್ನು ಧರಿಸಿಲ್ಲ ಎಂದು ಹೇಳುತ್ತಾ, ಅಡಿಗೆಯವರನ್ನು ಕರೆದು ನಾಳೆಯಿಂದ ಇವನಿಗೆ ಊಟ ಹಾಕಬೇಡ ಎಂದು ಹೇಳಿ ಹೊರಟುಹೋದರು.

ಕಡುಬಡತನದಿಂದ ಬಳ್ಳಾರಿ ಭಾಗದಿಂದ ಬಂದು ಇಲ್ಲಿ ಆಶ್ರಯ ಪಡೆದಿದ್ದ ವೀರಭದ್ರ ಇದರಿಂದ ಕಂಗಾಲಾದರು. ಹೋಟೆಲಿಗೆ ಹೋಗುವಷ್ಟು ಹಣವಿಲ್ಲ, ಇಲ್ಲಿ ಸಹಾಯ ಮಾಡುವ ಅಂತಹ ಪರಿಚಿತರು ಯಾರೂ ಇರಲಿಲ್ಲ. ಒಂದೆರಡು ದಿನಗಳು ಹೇಗೋ ನಿಭಾಯಿಸಿದರು. ಆದರೆ ಹಸಿವೆಂಬ ಹೆಬ್ಬಾವಿನ ಹಿಡಿತ ಹೆಚ್ಚಾಯಿತು. ದಿಕ್ಕು ತೋಚದಾಯಿತು. ಕೊನೆಗೆ 'ಅನ್ಯಥಾ ಶರಣಂ ನಾಸ್ತಿ' ಎಂದುಕೊಂಡು ಗುರುಗಳ ಬಳಿ ಹೋಗಿ ಕೈಮುಗಿದು ನಿಂತರು. ಗುರುಗಳು ಇವರತ್ತ ಪ್ರಶ್ನಾರ್ಥಕವಾಗಿ ನೋಡಿದರು. ವೀರಭದ್ರ ಗಳಗಳ ಅಳುತ್ತಾ ತನ್ನ ಸ್ಥಿತಿಯನ್ನು ನಿವೇದಿಸಿಕೊಂಡರು! ಇವರ ಮಾತುಗಳನ್ನು ಕೇಳಿಸಿಕೊಂಡ ಶ್ರೀಗಳವರ ಕಣ್ಣುಗಳಲ್ಲಿ ನೀರಹನಿ ಬಟ್ಟಾಡಿದವು.

ಮುಂದೆ ದೊಡ್ಡ ಸಾಹಿತಿಯಾಗುವ ನೀನು ಈಗಿನಿಂದಲೇ ಮತ್ತೊಬ್ಬರಿಗೆ ಮಾದರಿಯಾಗಿ ಬದುಕಬೇಕು ಎನ್ನುವುದು ನಮ್ಮ ಬಯಕೆ. ಅದಕ್ಕಾಗಿ ಹಾಗೆ ಹೇಳಿದೆವು ಅಷ್ಟೇ. ಮರುದಿನವೇ ಬಂದು ನಮ್ಮನ್ನು ಏಕೆ ನೋಡಲಿಲ್ಲ. ಈಗ ಮಠದಲ್ಲಿಯೇ ಪ್ರಸಾದ ಸ್ವೀಕರಿಸಿ, ನಾಳೆಯಿಂದ ಹಾಸ್ಟೆಲ್‌ಗೆ ಹೋಗು ಎಂದು ಹೇಳಿಕಳುಹಿಸಿದರು. ಈ ಘಟನೆಯನ್ನು ಕೇಳಿದಾಗ 'ತಂದೆ ಮಗನ ಗುಣಕ್ಕೆ ಮುನಿವನಲ್ಲದೆ ಪ್ರಾಣಕ್ಕೆ ಮುನಿಯನು' ಎನ್ನುವ ಮಾತು ನೆನಪಾಗುತ್ತದೆ. ರಾಜೇಂದ್ರ ಶ್ರೀಗಳ ಮಾತೃಹೃದಯ ಎಂತಹುದು ಎನ್ನುವುದಕ್ಕೆ ಇಂತಹ ಅನೇಕ ಘಟನೆಗಳನ್ನು ಉದಾಹರಿಸಬಹುದು. ಮುಂದೆ ಇದೇ ವಿದ್ಯಾರ್ಥಿ ಜೆಎಸ್‌ಎಸ್ ಸಂಸ್ಥೆಯಲ್ಲಿಯೇ ಪ್ರಾಧ್ಯಾಪಕರಾದರು. ರಾಜ್ಯಮಟ್ಟದ ಪ್ರಶಸ್ತಿ ಪುರಸ್ಕೃತ ಸಾಹಿತಿಯಾದರು. ಬಹುದೊಡ್ಡ ಭಾಷಾಂತರಕಾರರಾದರು.

ಪ್ರಸ್ತುತ ಸಂಚಿಕೆಯನ್ನು ಸಿದ್ಧಪಡಿಸುವಾಗ ಇದೇ ಕೆ. ವೀರಭದ್ರ ಅವರು ರಾಜೇಂದ್ರ ಶ್ರೀಗಳನ್ನು ಕುರಿತು ಬರೆದ 'ಸುತ್ತೂರ ಸುರಧೇನು' ಕೃತಿ ನೆನಪಾಯಿತು. ಗಾತ್ರದಲ್ಲೂ ಸೂತ್ರದಲ್ಲೂ ಇದೊಂದು ಮಹತ್ ಕಾದಂಬರಿ. ಈ ಹಿನ್ನೆಲೆಯಲ್ಲಿ ಕಾದಂಬರಿಯ ಆಯ್ದ ಭಾಗಗಳನ್ನು ಇಡೀ ಸಂಚಿಕೆಯಲ್ಲಿ ಅಳವಡಿಸುವುದು ಸೂಕ್ತವೆನಿಸಿತು. ಈ ಮೂಲಕವಾದರೂ ಅದು ಹೆಚ್ಚು ಜನರನ್ನು ತಲುಪಲಿ ಎನ್ನುವುದು ನಮ್ಮ ಪ್ರಮುಖ ಉದ್ದೇಶವಾಗಿದೆ. ಇಲ್ಲಿ ಕೊಟ್ಟಿರುವ ಉಪಶೀರ್ಷಿಕೆಗಳು ಮಾತ್ರ ನನ್ನವು; ಉಳಿದಂತೆ ಎಲ್ಲವೂ ವೀರಭದ್ರ ಅವರ ಬರವಣಿಗೆಯೆ.

ಈ ಮೂಲಕ ಮಹಾದಾಸೋಹಿಯೋರ್ವರ ಜೀವನದ ಅನಂತ ಆಯಾಮಗಳು ಸಾರ್ವಜನಿಕರ ಚಿಂತನ, ಮಂಥನ, ಮನನಗಳಿಗೆ ಕಾರಣವಾದರೆ ನನ್ನ ಅಲ್ಪಶ್ರಮ ಸಾರ್ಥಕ ಎನ್ನುವುದು ನನ್ನ ಯಾವತ್ತೂ ಭಾವನೆ.

**ಮಲೆಯೂರು ಗುರುಸ್ವಾಮಿ**
ಸಂಪಾದಕ

# ಗುರುವಾಣಿ

**ಶಾ**ಲಿವಾಹನ ಶಕ 1838ನೇ ನಳನಾಮ ಸಂವತ್ಸರ ಭಾದ್ರಪದ ಮಾಸ ಶುದ್ಧ ಪಾಡ್ಯ (29.8.1916) ದಕ್ಷಿಣ ಕರ್ನಾಟಕದ ಈ ಭಾಗದ ಜನತೆಯ ಭಾಗ್ಯದ ಬಾಗಿಲು ತೆರೆದ ಶುಭದಿನವಾಗಿದೆ. ಕಾರಣ, ಅಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಅವತರಿಸಿದ ದಿನ.

ಮಹಾವ್ಯಕ್ತಿಗಳು ಜನಿಸುವುದು, ಮಹಾಘಟನೆಯೊಂದು ಘಟಿಸುವುದು, ಹೊಸದೊಂದು ಆವಿಷ್ಕಾರ ನಡೆಯುವುದು, ಒಂದು ಸಿದ್ಧಾಂತ ರೂಪಿತವಾಗುವುದು ಕೇವಲ ಒಂದು ಸಾಧಾರಣ ಸಂಗತಿಯಾಗಿರುವುದಿಲ್ಲ. ಅದು 'ಭುವನದ ಭಾಗ್ಯ'ದಿಂದ ಉಂಟಾಗುವಂತಹುದು. ಒಂದು ಪಕ್ಷ ಅಂತಹದೊಂದು ಘಟನೆ ನಡೆಯದೆ ಹೋಗಿದ್ದರೆ ಜಗತ್ತಿನ ಬದುಕು ಏನಾಗುತ್ತಿತ್ತು ಎನ್ನುವ ಪ್ರಶ್ನೆಯೂ ಸಹಜವೇ. ಇಡೀ ಸೃಷ್ಟಿಯ ಹಿನ್ನೆಲೆಯಲ್ಲಿ, ಅದನ್ನು ವಿಶ್ಲೇಷಿಸಲು ಕಷ್ಟವಾದರೂ, ಮನುಕುಲದ ಉದ್ಧಾರದ ದೃಷ್ಟಿಯಿಂದ ನೋಡಿದರಂತೂ ಏನಾಗುತ್ತಿತ್ತು ಎನ್ನುವುದನ್ನು ಸ್ಪಷ್ಟವಾಗಿಯೇ ಊಹಿಸಬಹುದು. ನಮ್ಮ ಋಷಿಮುನಿಗಳು, ಸಾಧಕರು, ತ್ಯಾಗಜೀವಿಗಳು ಇಲ್ಲದೇ ಹೋಗಿದ್ದರೆ ಮನುಷ್ಯ ಮನುಷ್ಯನಾಗಿ ಉಳಿಯದೆ ಅವನೊಂದು ಪಶುವಾಗಿರುತ್ತಿದ್ದ; ರಾಕ್ಷಸಪ್ರವೃತ್ತಿಯನ್ನು ಬೆಳೆಸಿಕೊಂಡು ತನ್ನ ನಾಶಕ್ಕೆ ತಾನೇ ಕಾರಣನಾಗುತ್ತಿದ್ದ. ಕತ್ತಲೆಯಿಂದ ಬೆಳಕಿನೆಡೆಗೆ ನಡೆಯುವ ಈ ನಿರಂತರವಾದ ಪಯಣದ ಹಿಂದೆ ಮಹಾನ್ ಚೇತನಗಳ ತ್ಯಾಗ ಬಲಿದಾನಗಳು ಇರುವುದನ್ನು ಮರೆಯುವ ಹಾಗಿಲ್ಲ. ಮನುಷ್ಯನ ಪಂಚೇಂದ್ರಿಯಗಳಿಗೆ ದಕ್ಕುವಂಥ ಭೋಗಭಾಗ್ಯಗಳನ್ನು ಸುಲಭವಾದ ಗ್ರಹಿಸಬಹುದು. ಆದರೆ ಶಾಶ್ವತವಾದ ಆಂತರಿಕ ಸಂಪತ್ತು ಯಾವುದು ಎಂದು ಗ್ರಹಿಸಬೇಕಾದರೆ, ಮತ್ತು ಅದನ್ನು ತನ್ನದಾಗಿಸಿಕೊಳ್ಳಬೇಕಾದರೆ, ಮಹಾವ್ಯಕ್ತಿಗಳ ಮಾರ್ಗದರ್ಶನ, ಪ್ರೋತ್ಸಾಹ ಬೇಕಾಗುತ್ತದೆ. ಇಂತಹ ಭಾಗ್ಯಕ್ಕೆ ಭಾಜನರಾಗಬೇಕಾದರೂ ಅದಕ್ಕೊಂದು ಅರ್ಹತೆ, ಅವಕಾಶ, ಹಾಗೆ ಅನುಸಂಧಾನ ಮಾಡುವ ಆತ್ಮಶಕ್ತಿಯ ಅಗತ್ಯ ಇರುತ್ತದೆ. ಈ ಅನುಸಂಧಾನದ ಪ್ರಕ್ರಿಯೆಯೇ ಧರ್ಮ ಮತ್ತು ಸಂಸ್ಕೃತಿಗಳ ಚರಿತ್ರೆಯಾಗಿದೆ.

ಸ್ವಾತಂತ್ರ್ಯಪೂರ್ವದ ಕಾಲಘಟ್ಟದಲ್ಲಿಯೇ ಇಂತಹ ಒಂದು ಐತಿಹಾಸಿಕ ಪ್ರಕ್ರಿಯೆಗೆ ಚಾಲನೆ ಕೊಟ್ಟು ಅದನ್ನು ಪೋಷಿಸಿ ಬೆಳೆಸಲು ಅಹರ್ನಿಶಿ ಶ್ರಮಿಸಿದವರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳು ಎನ್ನುವುದು ಸರ್ವವಿದಿತ. ಆದ್ದರಿಂದಲೇ ಅವರು ಜನಿಸಿದ್ದು ನಾಡವರ

ಭಾಗ್ಯವೆನ್ನುವುದರಲ್ಲಿ ಏನೂ ಉತ್ಪ್ರೇಕ್ಷೆಯಿಲ್ಲ. ಈ ಸೃಷ್ಟಿಯಲ್ಲಿನ ಅನೇಕ ಘಟನೆಗಳು ನಮ್ಮ ಪಾರ್ಶ್ವಿಕ ದೃಷ್ಟಿಗೆ ಒಂದು ತೆರನಾಗಿ ಗೋಚರವಾದರೆ, ಅವುಗಳನ್ನು ಪೂರ್ಣದೃಷ್ಟಿಯಿಂದ ಪರಿಭಾವಿಸಿದಾಗ ಅವು ಮತ್ತೊಂದು ರೀತಿಯಲ್ಲಿಯೇ ಕಂಡುಬರುತ್ತವೆ. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರು ಸುತ್ತೂರು ಕ್ಷೇತ್ರಕ್ಕೆ ಬಂದು ಕಪಿಲೆಯ ಬಳಿ ಧ್ಯಾನಮಗ್ನರಾದದ್ದು, ಯುದ್ಧ ಮಾಡಲು ಬಂದ ಚೋಳ ಚಕ್ರವರ್ತಿ ಇವರ ದಿವ್ಯ ಪ್ರಭಾವಕ್ಕೆ ಒಳಗಾಗಿಯೇ ಶಸ್ತ್ರತ್ಯಾಗ ಮಾಡಿ, ಶಾಂತಿಯ ಸಂದೇಶವನ್ನು ಆಲಿಸಿದ್ದು, ಶ್ರೀ ಶಿವರಾತ್ರೀಶ್ವರರು ಇಲ್ಲಿ ನೆಲೆಸಿ ಶ್ರೀಮಠದ ಆದಿಗುರುಗಳಾದದ್ದು, ಬಳಿಕ ರಾಜಗುರುಗಳಾದದ್ದಷ್ಟೇ ಅಲ್ಲದೆ, ಭಕ್ತರ ಮನೋರಾಜ್ಯದ ಗುರುಗಳೂ ಆದದ್ದು, ಇವೆಲ್ಲವೂ ಒಂದು ಮಹಾನ್ ಇತಿಹಾಸದ ಮುಂಬೆಳಗು. ಶ್ರೀಮಠದ ಕರ್ಣಧಾರತ್ವವನ್ನು ವಹಿಸಿದ ಪರಂಪರೆಯ ಪೂಜ್ಯರುಗಳು ಮಠದ ಸೇವಾವ್ಯಾಪ್ತಿಯನ್ನು ತಮ್ಮದೇ ರೀತಿಯಲ್ಲಿ ವಿಸ್ತರಿಸಿದ್ದು, ಮಲೆಯ ಮಹದೇಶ್ವರರಂಥವರು ಬಂದು ಇಲ್ಲಿ ಸ್ವತಃ ಕಾಯಕ ಮಾಡಿ ಕಾಯಕತತ್ವಕ್ಕೆ ಹೊಸ ಭಾಷ್ಯ ಬರೆದದ್ದು, ರಾಜೇಂದ್ರ ಶ್ರೀಗಳು ಶ್ರೀಮಠದ ಉತ್ತರಾಧಿಕಾರಿಯಾದದ್ದು, ಅಧ್ಯಯನಕ್ಕಾಗಿ ಅವರು ಕಾಶಿಗೆ ಹೋಗಿ ಹಿಂದಿರುಗಿ ಸೇವಾಕ್ಷೇತ್ರದತ್ತ ಮುಖ ಮಾಡಿದರು. ಈ ಒಂದೊಂದೂ ಖಂಡದೃಷ್ಟಿಯಿಂದ ಸಾಧಾರಣ ಘಟನೆಗಳಂತೆ ಅಥವಾ ಆಕಸ್ಮಿಕಗಳಂತೆ ತೋರಿದರೂ, ಪೂರ್ಣದೃಷ್ಟಿಯಿಂದ ವೀಕ್ಷಿಸಿದಾಗ ಈ ಒಂದೊಂದರ ಹಿಂದೆಯೂ ಅಗೋಚರವಾದ ಅಂತಸ್ಸಂಬಂಧ, ಅಥವಾ ಪೂರ್ವಯೋಜಿತ ವೆನ್ನಬಹುದಾದ ಸಾತತ್ಯವಿರುವುದು ಅಚ್ಚರಿಯನ್ನುಂಟುಮಾಡುತ್ತದೆ. ಅಲ್ಲಿಂದ ಮುಂದಿನ ಸುತ್ತೂರು ಶ್ರೀಕ್ಷೇತ್ರದ ಇತಿಹಾಸ ಕನ್ನಡನಾಡಿನ ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಚರಿತ್ರೆಯಲ್ಲಿ ಈಗಾಗಲೇ ದಾಖಲಾಗಿದೆ.

ಈ ಎಲ್ಲವನ್ನೂ ಸಾವಧಾನವಾಗಿ ಸ್ಮರಿಸಿದಾಗ ಎಲ್ಲರ ಮನಸ್ಸು ಒಂದು ಅನಿರ್ವಚನೀಯ ಆನಂದದಿಂದ ತುಂಬಿಹೋಗುತ್ತದೆ. ಕಾರಣ, ಎಲ್ಲರೂ ನಡೆಯುವ ದಾರಿಯುದ್ದಕ್ಕೂ ಪ್ರತಿಯೊಬ್ಬರನ್ನು ಶ್ರೀ ಶಿವರಾತ್ರಿ ರಾಜೇಂದ್ರ ಶ್ರೀಗಳವರು ಕೈ ಹಿಡಿದು ನಡೆಸುತ್ತಿರುವ ಹಾಗೆ ಅಂತರಂಗಕ್ಕೆ ಭಾಸವಾಗುತ್ತದೆ. ಹಾಗೆಯೇ ಅಂತಹ ಮಹಾನ್ ಗುರುಗಳನ್ನು ಪಡೆದ ಧನ್ಯತಾಭಾವ ಅಂತರಂಗವನ್ನು ಆವರಿಸಿ, ಬದುಕಿಗೆ ಮತ್ತಷ್ಟು ಸ್ಫೂರ್ತಿ ತುಂಬುತ್ತದೆ. ಅವರ ಜಯಂತಿಯ ಆಚರಣೆ ಎಲ್ಲರ ಭಾವಕೋಶಗಳನ್ನು ಮಡಿಯಾಗಿಸಿ ಕೊಳ್ಳುವ, ಕ್ರಿಯಾಕ್ಷೇತ್ರವನ್ನು ಸಶಕ್ತವಾಗಿಸಿಕೊಳ್ಳುವ, ಸೂಕ್ಷ್ಮರೂಪದಲ್ಲಿರುವ ಅವರ ಸಾತ್ವಿಕ ಶಕ್ತಿಯನ್ನು ಆವಾಹನೆ ಮಾಡಿಕೊಳ್ಳುವ ಪರಮ ಪವಿತ್ರ ಕಾರ್ಯವಾಗುತ್ತದೆ.

**ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ನವಮನ್ವಂತರದ ಅರುಣೋದಯ

**ಅಂ**ದು – ೨೮-೮-೧೯೧೬.

ಸ್ವಲ್ಪ ಸಮಯವಾಯಿತು.

ಶಿವಮಂತ್ರ ಮಹಿಮೆಗೆ ಸಂಬಂಧಿಸಿದ ಮುಖ್ಯಾಂಶಗಳನ್ನು ಆ ಗ್ರಂಥದಿಂದ ಆಯ್ದು, ಮುತ್ತಿನಂಥ ಲಿಪಿಯಲ್ಲಿ ಬರೆದುಕೊಳ್ಳುವುದರಲ್ಲಿ ತಲ್ಲೀನರಾಗಿದ್ದ ಶ್ರೀಗಳವರಿಗೆ – ತಮ್ಮ ಎದುರುಗಡೆಯಲ್ಲಿ ಯಾರೋ ನಿಂತುಕೊಂಡಿರುವಂತೆ ಭಾಸವಾಗಿ ತಲೆ ಎತ್ತಿ ನೋಡಿದರು–

ವಿನಯವೇ ಕೈಕಟ್ಟಿಕೊಂಡು ನಿಂತಂತೆ ಶ್ರೀ ಮಲ್ಲಿಕಾರ್ಜುನದೇವರು, ಅಡ್ಡಪಂಚೆಯನ್ನು ಮಂಡಿಯ ಮೇಲಕ್ಕೆ ಮಡಚಿ ಸಿಕ್ಕಿಸಿಕೊಂಡು, ನಡುವಿಗೆ ವಸ್ತ್ರವನ್ನು ಬಿಗಿದು ಕಟ್ಟಿಕೊಂಡು, ತಲೆಗೆ ಪಾವಡವನ್ನು ಸುತ್ತಿಕೊಂಡು, ಬಿಲ್ಲಿನಂತೆ ಬಾಗಿ ನಿಂತಿದ್ದಾರೆ, ಶ್ರೀಗಳವರ ಪಾದಪದ್ಮಗಳ ಮೇಲೆ ತಮ್ಮ ಭಕ್ತಿಯನ್ನು ನೋಟದ ಮೂಲಕ ಬಿತ್ತರಿಸುತ್ತ.

ಭಕ್ತಿಯೇ ಕೈಜೋಡಿಸಿ ನಿಂತಂತೆ ಶ್ರೀಮತಿ ಮರಮ್ಮಣ್ಣಿ, ತುಂಬುಗರ್ಭಿಣಿಯನ್ನು ಶ್ರೀಗಳವರು ನೋಡುತ್ತಲೇ ಸುಪ್ರಸನ್ನತೆ ಹೃದಯಾಂತರಾಳದಲ್ಲಿ ಚಿಮ್ಮಿ ಕಣ್ಣುಗಳ ಮೂಲಕ ಹೊಮ್ಮುತ್ತಿರಲು –

"ನನ್ನ ಮನಸ್ಸು ಗುರುದರ್ಶನ ಮಾಡಬೇಕು ಅಂತಿದೆ. ಬನ್ನಿ ದರ್ಶನ ಮಾಡಿಕೊಂಡು ಆಶೀರ್ವಾದ ಪಡೆದು ಬರೋಣ ಬನ್ನಿ ಅಂತಂದ್ಲು ಬುದ್ದಿ. ಅದಕ್ಕೇ..." – ಹೀಗೆ ಬಂದು ತಮ್ಮ ಕಾಯಕಕ್ಕೆ ಅಡ್ಡಿ ತಂದೊಡ್ಡಿದಂತಾಯ್ತೇನೋ ಎಂಬ ಭೀತಿಯಿಂದ ಅರ್ಧೋಕ್ತಿಯಲ್ಲಿ ಮಲ್ಲಿಕಾರ್ಜುನದೇವರು ಹೇಳಲು –

"ನೀವು ಇಂದು ಬಂದುದೇ ಒಳ್ಳೇದಾಯಿತು."

– ಎಂದು ಹೇಳಿ, ಒಂದು ಕ್ಷಣ ಕಣ್ಣುಗಳನ್ನು ಮುಚ್ಚಿಕೊಂಡು, ನಂತರ ಕಣ್ತೆರೆದು ಮರಮ್ಮಣ್ಣಿಯವರನ್ನೇ ನೋಡುತ್ತ ಶ್ರೀಗಳವರು –

"ನೋಡು ತಾಯೀ, ನಾವೊಂದು ಕೇಳ್ತೇವೆ, ನೀನು ನಡೆಸಿಕೊಡ್ತೀನಿ ಅಂದ್ರೆ, ಕೇಳ್ತೇವೆ."

– ಎಂದರು, ಮುಗುಳು ನಗೆಯಿಂದ.

---

ಈ ವಿಶೇಷ ಸಂಚಿಕೆ ಸಾಹಿತಿ ಕೆ. ವೀರಭದ್ರ ಅವರ **"ಸುತ್ತೂರ ಸುರಧೇನು"** ಕಾದಂಬರಿಯ ಆಯ್ದ ಭಾಗಗಳನ್ನು ಒಳಗೊಂಡಿದೆ.

"ಅದೇನೋ ಕೇಳಿ ಬುದ್ದಿ. ನೀವು ನಡೆಸಿಕೊಡಬೇಕು ಅಂತ ಕೇಳ್ಬೇಕೇ? ನೀವು ಪಾದದಿಂದ ತೋರಿಸಿದ್ದನ್ನು, ನಾನು ತಲೆ ಮೇಲೆ ಹೊತ್ತುಕೊಳ್ಳೋಳು..."

"ನಾಳೆ ನೀನು ಗಂಡು ಮಗುವಿನ ತಾಯಿಯಾಗ್ತೀಯ."

"ತಮ್ಮ ಪ್ರಸಾದ ಬುದ್ದೀ."

"ಗುರುಗಳ ಪ್ರಸಾದ ತಾನೇ?!"

"ಹೌದು ಬುದ್ಧೀ !"

"ಹಾಗಾದರೆ ಗುರುಪ್ರಸಾದವನ್ನು ಗುರುವಿಗೇ ಕೊಟ್ಟುಬಿಡ್ತೀಯಾ ?"

"......"

"ಕೊಟ್ಟುಬಿಡ್ತೀಯಾ ಅಂದ್ರೆ ನಮಗೇ ಅಂತ ಅಲ್ಲ. ಇಡೀ ಲೋಕಕ್ಕೆ ಕೊಟ್ಟು ಬಿಡ್ತೀಯಾ ಶಂಕರಮ್ಮಾ !"

"......"

"ನೀನು ಲೋಕಕ್ಕೆ ಪ್ರಸಾದ ಕೊಡಬೇಕು ಶಂಕ್ರಮ್ಮಾ ! ನಿನ್ನ ಹೆಸರಿಗೆ ತಕ್ಕಂತೆ ನೀನು ಜಗನ್ಮಾತೆಯಂತೆ ಲೋಕಕ್ಕೇ ನಿನ್ನ ಕಂದನ್ನ ಕರುಣಿಸಬೇಕು.... ಹೇಳು ತಾಯೀ ಯಾಕೆ ಸುಮ್ಮನಿದ್ದೀಯೆ.... ಕೊಡುವುದಕ್ಕಾಗಲ್ಲ ಅಂತಿದ್ರೆ, ಹಾಗಂತ ಹೇಳಿಬಿಡು."

ಶಂಕ್ರಮ್ಮ ನಿಲ್ಲಲಾರದೆ ನಿಧಾನವಾಗಿ ಕುಳಿತು, ಕುಳಿತಿರಲಾಗದೆ, ಉದ್ದಕ್ಕೂ ಮಗ್ಗುಲಾಗಿ ನಮಸ್ಕಾರ ಮಾಡಿಬಿಟ್ಟರು.... ಗರ್ಭಸ್ಥ ಶಿಶುವೂ ಸದ್ಗುರುವಿಗೆರಗಿದಂತಾಯಿತು.

ಮಲ್ಲಿಕಾರ್ಜುನದೇವರು ಸಹಾ ಧರ್ಮಪತ್ನಿಯನ್ನನುಸರಿಸಿದರು. ಉದ್ದಂಡ ನಮಸ್ಕರಿಸಿ, ತುಂಬು ಬಸಿರಿಯನ್ನು ಅನಿರ್ವಚನೀಯ ಸಂತಸದಿಂದ ಮೆಲ್ಲಗೆ ಎತ್ತಿ ಕುಳ್ಳಿರಿಸಿ–

"ಆಗಲಿ ಬುದ್ದೀ. ಮಗು ಹುಟ್ಟುತ್ಲೇ ತಂದೊಪ್ಪಿಸುತ್ತೇವೆ."

"ಮಗುವಿಗೆ ಐದು ವರ್ಷ ತುಂಬುವ ತನಕ ನಿಮ್ಮ ಬಳಿಯೇ ಇರಲಿ. ಐದು ವರ್ಷ ತುಂಬಿದ ದಿನವೇ ಮಗುವನ್ನು ನಮಗೆ ತಂದು ಒಪ್ಪಿಸಬೇಕು."

"ಅಪ್ಪಣೆ ಬುದ್ದೀ, ತಾವು ಹೇಳಿದಂತೆ ಮಾಡುತ್ತೇವೆ."

ಮಾತೇ ಮರೆತಂತಾಗಿದ್ದ ಮರಮ್ಮಣ್ಣಿಯವರೂ ಎಚ್ಚೆತ್ತುಕೊಂಡು ಪತಿಯನ್ನು ಅನುಸರಿಸಿ – ಏನೋ ಹೇಳಲು ತವಕಿಸಿದರು, ತಡವರಿಸಿದರು –

ಗರ್ಭಸ್ಥ ಶಿಶು ಕದಲಿದಂತಾಯಿತು.

ಅದರ ಕಣಗಿಲೆಹೂವಿನ ದಳದ ಬಣ್ಣದ ಪಾದಗಳು ತಾಯ ಗರ್ಭವನ್ನು ತಾಕಿದಂತಾಗಿ ನಾಭಿಯಿಂದ ದೇಹಾದ್ಯಂತ ತಣ್ಣನೆಯ ಮಿಂಚು ಸಂಚರಿಸಿದಂತಾಯಿತು –

"ಮಗುವಿಗೆ ಕಾಲು ಬರುತ್ಲೇ... ನಡೆದಾಡುವುದಕ್ಕೆ ತೊಡಗುತ್ಲೇ, ವರ್ಷ ತುಂಬುತ್ತಲೇ ನಿತ್ಯ ರಾತ್ರಿ ತಲೆಸ್ನಾನ ಮಾಡಿಸಿ, ಧೂಪಹಾಕಿ, ಹಾಲೂಡಿಸಿ, ತಂದು ತಮಗೆ ಒಪ್ಪಿಸುತ್ತೇನೆ ಬುದ್ಧೀ. ರಾತ್ರಿ ನಿಮ್ಮ ಪಕ್ಕವೇ ಮಗು ಇರಲಿ ಅಂತ ನನಗೆ ಆಸೆ..."

– ಎಂದುಬಿಟ್ಟರು ಮರಮ್ಮಣ್ಣಿ! ಮಗುವೇ ಮರಮ್ಮಣ್ಣಿಯವರ ಮುಖದಿಂದ ಮಾತನಾಡಿದಂತಾಯಿತು – ಶ್ರೀಗಳವರಿಗೆ !

ಕುಳಿತಲ್ಲೇ ಒಳಗೆ ಉಕ್ಕೇರಿದ ಅಮಿತಾನಂದಕ್ಕೆ ಕಂಪಿಸಿದರು !

ಹೆಂಡತಿಯನ್ನು ಎಡತೋಳಿನಿಂದ ಬಳಸಿ, ಆಕೆಯ ಬಲಗೈಯನ್ನು ತಮ್ಮ ಬಲಗೈಯಿಂದ ಹಿಡಿದುಕೊಂಡು, ನಿಧಾನವಾಗಿ ನಡೆಸಿಕೊಂಡು, ಮನೆಯತ್ತ ಬರುತ್ತ ಮಲ್ಲಿಕಾರ್ಜುನದೇವರು ಹೆಜ್ಜೆ ಹೆಜ್ಜೆಗೂ ಸಂತೋಷ, ಸಂಭ್ರಮ, ಆಶ್ಚರ್ಯ ಅನುಭವಿಸುತ್ತ, ಮತ್ತೆ ಅನುಮಾನ, ಚಿಂತೆ, ದುಃಖವನ್ನೂ ಅನುಭವಿಸುತ್ತ –

'ಶಂಕ್ರೂ ನಿಜಕ್ಕೂ ಮಗೂನ ಗುರುಗಳಿಗೆ ಇಷ್ಟು ಸಲೀಸಾಗಿ ಅರ್ಪಿಸಲು ಒಪ್ಪಿಬಿಟ್ಟಳೇ?!'

– ಎಂದು ಕ್ಷಣ ಆಶಂಕೆ.

'ಆಗಲಿ ಎಂದು ಒಪ್ಪಿಕೊಳ್ಳುವಾಗ ದುಃಖ ಆಗಲಿಲ್ಲವೇ ?'

– ಎಂದು ಮರುಕ್ಷಣ ಮರುಕ.

'ತಾನು ಹೇಳಿದಂತೆ, ನಾಳೆ ಮಗೂಗೆ ವರ್ಷ ತುಂಬಿ ನಡಿಗೆ ಕಲಿತಾಗ ತಾನೇ ಮೀಯಿಸಿ, ರಾತ್ರಿ ಗುರು ರಕ್ಷಣೆಗೆ ನಿತ್ಯ ಒಪ್ಪಿಸ್ತಾಳೆಯೇ !?'

– ಎಂದು ಇನ್ನೊಂದು ಕ್ಷಣ ಭೀತಿ ತುಂಬಿದ ಆತಂಕ.

'ಗಂಡಸಾದ ನನಗೇನೇ ಒಪ್ಪಿಕೊಳ್ಳುವಾಗ ಕರುಳು ಕತ್ತರಿಸಿದಂತಾಯ್ತಲ್ಲಾ. ಇನ್ನು ಹೆಂಗರುಳು ಎಷ್ಟು ದುಃಖಿಸ್ತಾ ಇದೆಯೋ...'

– ಎಂದು ಮರುಗಳಿಗೆ ಸಹಾನುಭೂತಿ –

ಹೀಗೆ ನಾನಾ ಭಾವಗಳ ತುಮುಲದಿಂದ, ತಡೆಯಲಾರದೆ ಹೆಂಡತಿಯನ್ನು –

"ಶಂಕ್ರೂ.... ನಿನಗಿಂತ ಮುಂಚೆ, ನಾನೇ ಆಗ್ಲಿ ಬುದ್ದಿ ಅಂತ ಮಾತು ಕೊಟ್ಟುಬಿಟ್ಟೆ. ನಿನ್ನನ್ನ ಒಂದು ಮಾತು ಕೇಳ್ಬೇಕಾಗಿತ್ತು. ತಪ್ಪು ಮಾಡಿಬಿಟ್ಟೆ..."

– ಎಂದು ಅದುವರೆಗೂ ಒಳಗೇ ಸುಳಿದಾಡುತ್ತಿದ್ದ ಕಣ್ಣೀರು ಚಿಲ್ಲನೆ ಚಿಮ್ಮಿತು.

ಮರಮ್ಮಣ್ಣಿ ಮಾತಿಲ್ಲದೆ, ಮೌನವಾಗಿ ಮನೆಯ ಮೆಟ್ಟಿಲು ಹತ್ತಿದರು. ತಲೆಬಾಗಿಲಲ್ಲಿಯೇ ಕಾತರದಿಂದ ನಿಂತಿದ್ದ ತಾಯಿ–ಅತ್ತೆಯವರನ್ನು ಕಾಣುತ್ತಲೇ, ಗಳಗಳ ಅತ್ತುಬಿಟ್ಟರು !

ಮಲ್ಲಿಕಾರ್ಜುನದೇವರು ತಟ್ಟನೆ –

"ಇದೇನು ಶಂಕ್ರೂ ಸಂತೋಷದಿಂದ ಮನಸಾರೆ ಒಪ್ಪಿಗೆ ಕೊಟ್ಟು, ಈಗ ಅಳ್ತಾರೇನೇ?" – ಎಂದಾಗ.....

"ಗಂಡಸಾದ ನೀವು ದಾರೀಲಿ ಬರ್‍ತಾ ಕಣ್ಣೀರು ಹಾಕಿದಿರಲ್ಲಾ ! ಅಯ್ಯೋ ಇವರದೆಂಥಾ ಹೆಂಗರುಳು. ಇಂಥ ಹೆಂಗರುಳಿನೋರು, ನಾಳೆ ಮಗೂನ ಒಪ್ಪಿಸಿ ಹೇಗಿರಬಲ್ಲರು ಅಂತ ನೆನೆದುಕೊಂಡೆ, ಅದ್ಕೇ ಈ ಕಣ್ಣೀರು."

– ಎಂದು ಮರಮ್ಮಣ್ಣಿಯವರು ಹೇಳಿದ್ದನ್ನು ಕೇಳಿ, ಮಲ್ಲಿಕಾರ್ಜುನದೇವರ ತಾಯಿ ಬಸಮ್ಮಯ್ಯನವರು –

"ಮಗಾ, ಅವನು ನೋಡೋಕೆ ಹೊರಗೆ ಮಹಾ ಕಠಿಣಾತ್ಮನಂತೆ ಕಾಣಿಸ್ತಾನೆ. ಆದರೆ ಒಳಗೆ ಅವನು ಬೆಣ್ಣೆಯಂಥ ಮನದೋನು. ನಿಂಗೊತ್ತಿಲ್ಲೇನು ? – ಯಾರಾದರೂ ಮನೇಲಿ ಧಾನ್ಯ ಮುಗಿದೋಗ್ಯದೆ, ವಸಿ ಧಾನ್ಯ ಕೊಡಿ ದೇವ್ರು ಅಂತ ಇವನ್ನ ಕೇಳಿದರೆ ಹ್ಯಾಗಾಡ್ತಾ ನಂತೀಯ! ಮುಖ ಸಿಂಡರಿಸಿಕೊಂಡು – ಹೋಗತ್ತ, ಧಾನ್ಯ ಇಲ್ಲ ದವಸ ಇಲ್ಲಾ ಹೋಗೋಗ್ ಅಂತಾನೆ ! ಆದರೆ ಆ ಬಂದ ಆಸಾಮಿ ಮುಖ ಕೆಳಗೆ ಮಾಡ್ಕೊಂಡು ನಿಂತಿರೋದು ಕಾಣುತ್ಲೇ – 'ಹೂಂ.... ಹೋಗಯ್ಯಾ– ಹೋಗಿ ಚೀಲ ತತ್ತಾ ಹೋಗು' ಅಂತ, ಅವ್ನು ತಂದ ಚೀಲಕ್ಕೆ ಧಾನ್ಯ ತುಂಬಿಸಿ ಕಳಿಸ್ತಾನೆ!" – ಎಂದು ಸೊಸೆಗೆ ಹೇಳಿ, ಮಗನ ಕಡೆಗೆ ನೋಡಿ –

"ಅಲ್ವೇನೋ ಮಲ್ಲಿಕಾರ್ಜುನಾ! ಅದ್ಯಾಕೆ ಕಣ್ಣೀರು ಹಾಕಿದ್ಯೋ!?"

"ಇವಳ್ನ ಕೇಳ್ದೆ ಒಪ್ಪಿಕೊಂಡುಬಿಟ್ಟೆ. ಇವಳಿಗೆಷ್ಟು ದುಃಖ ಆಯ್ತೋ ಅಂತ ನೆನಸ್ಕೊಂಡು ಕಣ್ಣೀರು ಬಂತು ಕಣವ್ವಾ!"

"ಹ್ಞಾ .... ಇದೀಗ ಸರಿಹೋಯ್ತಪ್ಪಾ ! ಹೆಂಡ್ತಿಗೆ ದುಃಖ ಆಯ್ತೂಂತ ನೀನು–ನಿನಗೆ ದುಃಖ ಆಯ್ತೂಂತ ನಿನ್ ಹೆಣ್ತಿ – ಇದ್ರೆ ಗಂಡ-ಹೆಂಡತಿ ಹೀಗಿರಬೇಕ್ರಪ್ಪ!"

– ಎಂದು ದುಃಖಮಿಶ್ರಿತ ಹಾಸ್ಯದಿಂದ ಬಸಮ್ಮಯ್ಯನವರು ಹೇಳಿದರು.

ಇದಾವುದರ ಕಡೆಗೂ ಗಮನಹರಿಸದೆ ಮಲ್ಲಾಜಮ್ಮನವರು, ಅದುವರೆಗೂ ಏನೋ ಕಣ್ಣು ಮುಚ್ಚಿಕೊಂಡು, ಸೆರಗಿನ ಮರೆಯಲ್ಲಿ ಬೆರಳೆಣಿಸುತ್ತ, ಗುಣಿಸುತ್ತ, ಮನಸ್ಸಿನಲ್ಲಿ ಮಣಮಣ ಎನ್ನುತ್ತ – ಕಣ್ತೆರೆದು –

"ಶಂಕ್ರೂ ಆಯಾಸ ಮಾಡ್ಕೋಬೇಡ. ಚಿಕ್‌ಬಸವ್ವಾ, ನಾಳೇನೇ ಹೆರಿಗೇ ಆಗೋಗುತ್ತೆ. ಎಲ್ಲ ಅಣಿ ಮಾಡಿಕೊಳ್ಳೋಣ, ನಡಿ"

– ಎಂದು ಎಚ್ಚರಿಸಿದರು.

ಮರುದಿನ –

ಅಂದು ಶಾಲಿವಾಹನ ಶಕ ೧೮೩೮ನೇ ನಳನಾಮ ಸಂವತ್ಸರದ ಭಾದ್ರಪದ ಮಾಸ ಶುದ್ಧ ಪಾಡ್ಯ – ೨೯-೮-೧೯೧೬ರಂದು ಸುಮುಹೂರ್ತದಲ್ಲಿ ಶ್ರೀ ಮಲ್ಲಿಕಾರ್ಜುನ ಶ್ರೀಮತಿ ಶಂಕರಮ್ಮ ದಂಪತಿಗಳಿಗೆ ಸುಪುತ್ರರತ್ನ ಜನನವಾಯಿತು ! ಈ ಶುಭ ವಾರ್ತೆ ಕೇಳಿ –

ರುದ್ರಮುಖಿ ಶ್ರೀ ಪಟ್ಟದ ಶಿವರಾತ್ರಿ ಮಹಾಸ್ವಾಮಿಗಳವರ ಮನಸ್ಸು 'ಶಿವಸುಖಿ'ದಲ್ಲಿ ಓಲಾಡಿತು.

ರುದ್ರಮುಖಿಗಳು ಶಿವಸುಖಿಗಳಾದರು !

## ರಾಜದೃಷ್ಟಿಗೆ ಬಿದ್ದ ಬಾಲಕ ರಾಜೇಂದ್ರರು

ಸೂರ್ಯೋದಯವಾಗಿದೆ.

ಚಂದ್ರಮಂಡಲದ ಮೇಲೆ ಸೂರ್ಯಪ್ರಕಾಶ ಪ್ರತಿಫಲಿಸಿ ಆಹ್ಲಾದಕಾರಿ ಬೆಳದಿಂಗಳನ್ನು ಹೊಮ್ಮಿಸಿದಂತೆ – ಜಗುಲಿಯ ಮೇಲೆ ನಿಂತ ಬಾಲಕ ರಾಜೇಂದ್ರನ ಮುಖಮಂಡಲದ ಮೇಲೆ ಸೂರ್ಯನ ಕಿರಣಗಳು ಲಾಸ್ಯವಾಡುತ್ತ ಚೇತೋಹಾರಿ ತೇಜಸ್ಸನ್ನು ಹೊಮ್ಮಿಸುತ್ತಿದ್ದವು.

ಹಣ್ಣಾದ ಚಿಕ್ಕ ಕೆಂಪು ಮೆಣಸಿನಕಾಯಿಯಂಥ ಕೊಕ್ಕಿನ, ವೀಳ್ಯದೆಲೆಗಳಂಥ ಹಸಿರು ರೆಕ್ಕೆಗಳನ್ನಗಲಿಸಿಕೊಂಡು, ಪುಟ್ಟ ಪುಟ್ಟ ತೆಂಗಿನ ಗರಿಗಳಂಥ ಪುಕ್ಕಗಳ ಗಿಳಿವಿಂಡು ನಾದದ ಹನಿಗಳನ್ನು ಸಿಂಪಡಿಸುತ್ತ ದಕ್ಷಿಣ ದಿಕ್ಕಿನತ್ತ ಹಾರಿಹೋಗುತ್ತಿತ್ತು.

ಶಂಖಗಳಿಗೆ ರೆಕ್ಕೆಗಳು ಮೂಡಿ ಹಾರುತ್ತಿವೆಯೋ ಎಂಬಂತೆ ಬೆಳ್ಳಕ್ಕಿಗಳ ಜೋಡಿ ಸಾಲು ಸಾಗಿ ಹೋಗುತ್ತಿತ್ತು.

ನೀಲಾಕಾಶದ ಒಡಲಾಳದಲ್ಲಿ ಗಾಳಿಯ ಅಲೆಗಳ ಮೇಲೆ ರೆಕ್ಕೆ ಬಿಚ್ಚಿ ಅಲ್ಲೊಂದು ಇಲ್ಲೊಂದು ಹದ್ದು ಗಸ್ತು ತಿರುಗುತ್ತಿತ್ತು.

ಎಡಗಡೆ ತುಸುದೂರದಲ್ಲಿ ಶಿಲ್ಪಿ ಸಿದ್ಧಲಿಂಗಸ್ವಾಮಿಗಳ ಮಠದ ಬಳಿಯಿರುವ ಅರಳಿಮರದ ಎಲೆಗಳ ಮೊತ್ತದೊಳಗಡೆ ಅಡಗಿ ಕುಳಿತ ಕೋಗಿಲೆ ಇದ್ದಕ್ಕಿದ್ದಂತೆ ಕುಹೂ ಎಂದಿತು.....

ರಸ್ತೆ ಬದಿಯ ಮರಗಳಿಂದ, ಮನೆಗಳ ಸೂರುಗಳಿಂದ ಗುಬ್ಬಚ್ಚಿಗಳ ದಂಡು ಪುರ್ರನೆ ಹಾರಿ ಬಂದು ನೆಲಕ್ಕಿಳಿದು, ಕತ್ತು ಕೊಂಕಿಸುತ್ತ, ಕಂಡುಬಂದ ಕಾಳುಗಳನ್ನು ಹೆಕ್ಕ ತೊಡಗಿದುವು....

ಹಸುಗಳು ಗುಂಪಾಗಿ ಗೋಮಾಳದತ್ತ ಹೋಗುತ್ತಿವೆ....

ಹಾಲಿನ ಕೆನೆಯ ತುಣುಕಿಗೆ ಪುಟ್ಟ ಪುಟ್ಟ ರೆಕ್ಕೆಗಳು ಮೂಡಿದುವೋ ಎಂಬಂತೆ ಬಿಳಿ ಬಣ್ಣದ ಪುಟ್ಟ ಚಿಟ್ಟೆ ರೆಕ್ಕೆಗಳನ್ನು ಒಂದುಮಾಡುತ್ತ, ಎರಡಾಗಿಸುತ್ತ, ಒಂದಾಗಿಸುತ್ತ, ಎರಡಾಗಿ ಸುತ್ತ, ಅವ್ಯಕ್ತ, ಅಗೋಚರ ಅಂಕುಡೊಂಕು ಗೆರೆಗಳನ್ನು ಗಾಳಿಯಲ್ಲಿ ಸೃಜಿಸುತ್ತ, ಇಲ್ಲಿ ಕುಳಿತಂತೆ ಮಾಡುತ್ತ, ಕುಳಿತುಕೊಳ್ಳದೆ ತಟ್ಟನೆ ಎಗರುತ್ತ, ಅತ್ತ ಇತ್ತ

ತೊನೆದಾಡುತ್ತಿರುವುದನ್ನೇ ರಾಜೇಂದ್ರ ಮಗ್ನನಾಗಿ ನೋಡುತ್ತಿದ್ದುದರಿಂದ, ತನ್ನ ಎದುರುಗಡೆ ಅರಮನೆಯತ್ತಣಿಂದ ಬಂದ ಕಾರಿನೊಳಗಿನ ಜರಿ ಪೇಟಧಾರಿ, ವಜ್ರಕರ್ಣಕುಂಡಲಧಾರಿ, ಮಖಮಲ್ ಮುಚ್ಚುಕೋಟಿನ ಮೇಲೆ ಗಜ್ಜುಗ ಗಾತ್ರದ ಮುತ್ತಿನ ಹಾರ ಧರಿಸಿದ, ತಂಪು ಕನ್ನಡಕದೊಳಗಿಂದ ಕಮಲ ದಳದಂಥ ಕಣ್ಣುಗಳಿಂದ ತನ್ನತ್ತ ಪ್ರಶಂಸಾ ಪೂರ್ಣ ನೋಟ ಬೀರುತ್ತಿರುವವರನ್ನು ಗಮನಿಸಲೇ ಇಲ್ಲ! ಅವರು –

ಆಳುವ ಮಹಾಸ್ವಾಮಿಗಳವರು.

ಶ್ರೀಮನ್ಮಹಾರಾಜರು.

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು!

ಕ್ಷಣಮಾತ್ರದಲ್ಲೇ –

ಕ್ಷೀರದಲ್ಲಿ ಮೀಯಿಸಿದ ಹವಳದ ಪುಟ್ಟ ಸ್ತೂಪದಂತೆ ಜಗುಲಿಯ ಮೇಲೆ ಪಶುಪಕ್ಷಿಗಳತ್ತ ತನ್ಮಯ ನೋಟ ಬೀರುತ್ತ ನಿಂತಿರುವ ಬಾಲಕ ರಾಜೇಂದ್ರನ ವಿಶಾಲವೂ ಆಯತಾಕಾರವೂ ಆದ ಲಲಾಟದ ಮೇಲೆ ಸುಶೋಭಿಸುತ್ತಿರುವ ಧವಳಾಯಮಾನ ತ್ರಿಪುಂಡ್ರ ರೇಖೆಗಳು –

ಮಿಂಚನ್ನು ಇಂಚಿಂಚು ಕತ್ತರಿಸಿ ಕಾರ್ಮೋಡದ ಅಂಚಿನಂಥ ಹುಬ್ಬುಗಳಡಿಯಲ್ಲಿ ತೆತ್ತಿಸಿದಂತೆ ಫಳಫಳಿಸುತ್ತಿರುವ ನೇತ್ರದ್ವಯಗಳನ್ನು –

ಸಿಂಹನಾಸಿಕವನ್ನು ಹೋಲುವ ಮಾಟಾದ ನೀಳಾದ ನಾಸಿಕವನ್ನು –

ಕಣಿಗಲೆ-ಗುಲಾಬಿ ಹೂವಿನ ಪಕಳೆಗಳನ್ನು ಸುರುಳಿ ಸುತ್ತಿ ಅಂಟಿಸಿದಂಥ ಅಧರಗಳನ್ನು–

ದೃಢತೆಯ ಸಂಕೇತದಂತಹ ಕಪೋಲಗಳ ಕೂಡು ಸ್ಥಲ – ಗಲ್ಲವನ್ನು – ಕ್ಷಣಮಾತ್ರದಲ್ಲಿ – ಅನೇಕ ದಿನಗಳಿಂದ ತಾವು ಗಮನಿಸುತ್ತಿದ್ದ ಈ ಮಂಗಳಮಯ ಮುದ್ದು ಮುಗ್ಧ ಮುಖ ಮಂಡಲವನ್ನು ಅಂದು ಕಣ್ತುಂಬ ತುಂಬಿಕೊಂಡು, ಮನದಾಳಕ್ಕಿಳಿಸಿಕೊಳ್ಳುತ್ತ, ಮುಗುಳುನಗೆ ಯಿಂದ ನಿತ್ಯದಂತೆ ಚಾಮುಂಡೇಶ್ವರಿ ದರ್ಶನಾರ್ಥ ಆಳುವ ಮಹಾಸ್ವಾಮಿಗಳವರ ಕಾರು ಶರವೇಗದಲ್ಲಿ ಚಾಮುಂಡಿಬೆಟ್ಟದತ್ತ ತೂರಿ ಹೋದುದನ್ನು – ಪ್ರಕೃತಿಯ ಜೀವಂತ ಗಾತ್ರಗಳಲ್ಲಿ ತಲ್ಲೀನನಾಗಿರುವ ರಾಜೇಂದ್ರ ಗಮನಿಸಲಿಲ್ಲ!

ಅರಮನೆಗೆ ಹೋದ ಬಳಿಕ – ಶ್ರೀಮನ್ಮಹಾರಾಜರು ತಾವು ಅಂತರಂಗದಲ್ಲಿ ತುಂಬಿ ಕೊಂಡ ತೇಜಸ್ವೀ ಬಾಲಕನ ಚಿತ್ರವನ್ನು ಚಿತ್ರಿಸಿ "ಯಾರೀ ತೇಜಸ್ವಿ?" ಎಂದು ಆಪ್ತ ಕಾರ್ಯ ದರ್ಶಿಯನ್ನು ಪ್ರಶ್ನಿಸಲು –

"ನಂಜನಗೂಡಿಗೆ ಅನತಿದೂರದಲ್ಲಿ, ಕಪಿಲಾ ತೀರದಲ್ಲಿ ಸುತ್ತೂರಿನಲ್ಲಿ ಹತ್ತು ಶತಮಾನ ಗಳ ಹಿಂದೆ – ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ಚೋಳರಾಜರ ನಮ್ರ ಪ್ರಾರ್ಥನೆ, ಗಂಗರಾಜರ ಗೌರವಪೂರ್ಣ ಅರಿಕೆ, ಸದ್ಭಕ್ತರ ಸದಿಚ್ಛೆಯ ಬಿನ್ನಹ-

ಇವುಗಳಿಗೆ ಓಗೊಟ್ಟು ತಮ್ಮ ತಪೋಭೂಮಿಯನ್ನಾಗಿಸಿಕೊಂಡು ಸುತ್ತೂರಿನಲ್ಲಿ ಸ್ಥಾಪಿಸಿದ ವೀರಸಿಂಹಾಸನ ಸಂಸ್ಥಾನ ಮಠಕ್ಕೆ ಸೇರಿದ ಗುರುಪರಂಪರೆಯ ಬಾಲಕರೇ ಅವರು.

"ಓ ಹೋ ಹಾಗೋ"

– ಎಂದು ಅತ್ಯಭಿಮಾನದಿಂದ ತೆಳು ತೆರೆಯ ಮರೆಯಲ್ಲಿ ಆಸೀನರಾಗಿರುವ ಮಹಾರಾಣಿ ಯವರತ್ತ ಸಂಭ್ರಮದಿಂದ ನೋಡಿದರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರು.

"ಈಗಿರುವವರು ಪಟ್ಟದ ಶ್ರೀ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರು, ಇಪ್ಪತ್ತೆರಡನೆಯ ಜಗದ್ಗುರುಗಳವರು....

"ಮಹಾಪ್ರಭೂ, ತಾವೀಗ ಅಪ್ಪಣೆಕೊಡಿಸಿದ ಈ ಬಾಲಕ ಬಹುಶಃ ಭಾವೀ ಜಗದ್ಗುರು...."

ಆಳುವ ಮಹಾಸ್ವಾಮಿಗಳವರು ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರೂ ಹಾಗೂ ಪಟ್ಟದ ರಾಣಿ ಡೊವೇಜರ್ ಮಹಾರಾಣಿಯವರೂ ಮಂತ್ರಮುಗ್ಧರಾದರು....

## ಗುರುವಿನಿಂದ ದತ್ತವಾದ ಗುರುತರ ಹೊಣೆ

ಅಂದು ಶ್ರೀ ಪಟ್ಟದ ಶಿವರಾತ್ರಿ ಮಹಾಸ್ವಾಮಿಗಳವರ ಅನುಜ್ಞೆಯನ್ನು ಶಿರಸಾವಹಿಸಿ ಕಾರ್ಯಪ್ರವೃತ್ತರಾದ ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯ ವಿದ್ಯಾರ್ಥಿನಿಲಯಕ್ಕಾಗಿ ಸೂಕ್ತವಾದ ನಿವೇಶನಕ್ಕೆ, ಮಾರಾಟಕ್ಕಿದ್ದರೆ ಕ್ರಯಕ್ಕಾದರೂ ಸರಿಯೆ ಕಟ್ಟಡವೊಂದರ ಹುಡುಕಾಟದಲ್ಲಿದ್ದರು. ಶ್ರೀಗಳವರ ಆಶೀರ್ವಾದದ ಫಲವೋ ಎಂಬಂತೆ, ಮೈಸೂರಿನ ವಾಣಿವಿಲಾಸ ರಸ್ತೆಯಲ್ಲಿ (ಈಗಿನ ಮಹಾತ್ಮ ಗಾಂಧಿ ರಸ್ತೆ) ನಿವೇಶನವೇ ದೊರೆಯಿತು. ವಿದ್ಯಾರ್ಥಿನಿಲಯಗಳಿಗೆ ಮಾದರಿ ಎನಿಸುವಂಥ ಕಟ್ಟಡವನ್ನು ಹಗಲಿರುಳೂ ಮೇಲ್ವಿಚಾರಣೆ ಯಲ್ಲಿ ತೊಡಗಿ ನಿರ್ಮಿಸಿಯೇಬಿಟ್ಟರು.

ಆ ಉಚಿತ ವಿದ್ಯಾರ್ಥಿನಿಲಯದ ಎದುರಿನಲ್ಲಿಯೇ –

ಮೂಲತೋ ಬ್ರಹ್ಮರೂಪಾಯ<br>
ಮಧ್ಯತೋ ವಿಷ್ಣುರೂಪಿಣೆ ।<br>
ಅಗ್ರತೋ ಶಿವರೂಪಾಯ<br>
ವೃಕ್ಷರಾಜಾಯ ನಮೋನಮಃ ॥

ಎಂದು ಸ್ತುತಿಸಲ್ಪಡುತ್ತಿರುವ ವೃಕ್ಷರಾಜ ವಟವೃಕ್ಷ – ಅರಳಿಮರ ತಣ್ಣನೆಯ ನೆಳಲನ್ನು ಸದಾ ನೀಡುತ್ತಲೇ ಇದೆ.

ಕ್ಯಾತನಹಳ್ಳಿಯಲ್ಲಿಯೂ ಮಠವೊಂದನ್ನು ಕಟ್ಟಿಸಿ ಶ್ರೀಗಳವರ ಸನ್ನಿಧಾನಕ್ಕೆ ಧಾವಿಸಿ ಬಂದು ಅತ್ಯಾನಂದದಿಂದ ವಿಷಯವನ್ನು ಅರುಹಿ –

"ಬುದ್ಧೀ ಸಂಸ್ಕೃತ ಪಾಠಶಾಲೆ ನಡೆಸಲು, ವಿದ್ಯಾರ್ಥಿಗಳ ವಸತಿಗೂ ನಿಲಯ ಸಿದ್ಧ ವಾಗಿದೆ. ದಯೆಯಿಟ್ಟು ತಮ್ಮ ಅಮೃತ ಹಸ್ತದಿಂದ ಪ್ರಾರಂಭೋತ್ಸವ ನೆರವೇರಿಸಬೇಕು ಬುದ್ಧೀ."

ಶ್ರೀಗಳವರು ತಮಗಾದ ಸಂತೋಷವನ್ನು ಕೇವಲ ಎಳೆ ಮುಗುಳು ನಗೆಯ ಮೂಲಕ ಹೊರಹೊಮ್ಮಿಸಿ –

"ಶ್ರೀ ಶಿವರಾತ್ರೀಶ್ವರರ ಕೃಪೆ, ನಿನ್ನ ನಿಷ್ಕಾಮ ಸೇವೆಯ ಪರಿಣಾಮವಿದು. ನೀನೊಬ್ಬ ಆದರ್ಶ ಶ್ರೀಮಂತ. ನಿನಗೆ ಮಂಗಳವಾಗಲಿ."

"ಬುದ್ದೀ ನಿಲಯಕ್ಕೆ ತಮ್ಮ ಪವಿತ್ರ ಹೆಸರನ್ನಿಡಬೇಕೆಂಬ ಮಹದಾಸೆ. ದಯಮಾಡಿ ಅನುಮತಿ ಕೊಡಿ."

"ನೋಡು ಸಿದ್ಧಲಿಂಗಯ್ಯ, ನಮ್ಮ ಹೆಸರನ್ನೋ, ಶ್ರೀ ಶಿವರಾತ್ರೀಶ್ವರರ ಹೆಸರನ್ನೋ ಇಡುವುದಕ್ಕಿಂತ ನಿನ್ನ ಹೆಸರಿನಲ್ಲಿಯೇ ವಿದ್ಯಾರ್ಥಿನಿಲಯ ಚಿರಕಾಲ ನಡೆಯಲಿ. ಏಕೆಂದರೆ ನೀನು ಲೌಕಿಕ ವ್ಯಕ್ತಿಯಾದರೂ, ನಿನ್ನ ಅಂತರಂಗದ ಭಕ್ತಿ, ನಿನ್ನ ಪರೋಪಕಾರ ಬುದ್ಧಿ, ನಿನ್ನ ನಿಷ್ಕಾಮ ಸೇವೆ – ಇನ್ನಿತರ ಶ್ರೀಮಂತರಿಗೆ ಸ್ಫೂರ್ತಿದಾಯಕವಾಗಲಿ. ನಿನ್ನಂತೆ ಇನ್ನಿತರ ಶ್ರೀಮಂತ ಭಕ್ತರು ಅಲ್ಲಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿ – ಸಮಾಜಸೇವೆಗೆ ಮನಸ್ಸು ಮಾಡಲಿ. ನಾಡಿನಲ್ಲಿ ಅಜ್ಞಾನ ವ್ಯಾಪಿಸಿದೆ. ಅದರ ನಿವಾರಣೆಯಾದರೆ ನಾಡು ಸುಭಿಕ್ಷವಾಗುತ್ತದೆ. ಜನ ಸುಸಂಸ್ಕೃತರಾಗುತ್ತಾರೆ. ನಿನ್ನ ಹೆಸರಿನಲ್ಲಿಯೆ "ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆ" ಎಂದು ಪ್ರಾರಂಭಿಸೋಣ."

ಸಿದ್ಧಲಿಂಗಯ್ಯನವರು ಮೌನವಾಗಿಯೇ ಇದ್ದರು.

"ನೋಡು ಕತ್ತಲಿರುವ ಕಡೆ ನೀನೊಂದು ದೀಪ ಹಚ್ಚುತ್ತೀಯೆ. ಇನ್ನಿತರರೂ ಸಹ ಮುತ್ತಿರುವ ಕತ್ತಲನ್ನು ಹೊಡೆದೋಡಿಸಲು ತಮ್ಮ ತಮ್ಮ ಹಣತೆಗಳನ್ನು ತಂದು ಆ ದೀಪದಿಂದ ಬೆಳಕನ್ನು ಪಡೆದು ಕೊಂಡೊಯ್ದು ಅಲ್ಲಲ್ಲಿನ ಕತ್ತಲನ್ನು ಹೊಡೆದೋಡಿಸಿ ಎಲ್ಲ ಕಡೆ ಖಂಡಿತ ಬೆಳಕು ಮಾಡುತ್ತಾರೆ. ಇದಕ್ಕೆ ನೀನು ಒಪ್ಪಿಕೋ."

"ತಮ್ಮ ಪವಿತ್ರ ನಾಮವಿದ್ದರೆ ಇನ್ನೂ ಹೆಚ್ಚಿನ ಬೆಳಕು ಹರಡುತ್ತದಲ್ಲಾ ಬುದ್ದೀ..."– ಮಧ್ಯದಲ್ಲಿಯೇ ತಡೆದು –

"ನಾನಾಗಲೇ ಹೇಳಿದೆನಲ್ಲಾ. ನಮ್ಮ ಹೆಸರನ್ನೋ ಅಥವಾ ಶ್ರೀ ಶಿವರಾತ್ರೀಶ್ವರರ ಹೆಸರನ್ನೋ ಇಟ್ಟರೆ–ಮಠದವರು ವಿದ್ಯಾರ್ಥಿನಿಲಯ ಸ್ಥಾಪಿಸಿದ್ದಾರೆ. ಇನ್ನಿತರ ಮಠಗಳವರು ಸ್ಥಾಪಿಸಬಹುದು – ಎಂಬ ಭಾವನೆ ಉಳ್ಳವರಲ್ಲಿ ಉಂಟಾಗಿ ಅವರು ನಿರೀಕ್ಷೆಯಲ್ಲಿ ಕಾಲಕಳೆದುಬಿಡುತ್ತಾರೆ. ನಿನ್ನ ಹೆಸರಿಟ್ಟರೆ, ನಿನ್ನಂತಹ ಇನ್ನಿತರರಲ್ಲಿ ಹುಮ್ಮಸ್ಸು, ಉತ್ಸಾಹ, ಸೇವಾಪರಾಯಣಾ ಬುದ್ಧಿ ತಲೆದೋರುತ್ತದೆ. ಜೊತೆಗೆ ತಮಗೂ ಕೀರ್ತಿಪ್ರಸಿದ್ಧಿಗಳು ಬರುತ್ತವೆ – ಎಂಬ ಆಸೆಯಾದರೂ ಮೂಡಿಯೇ ಮೂಡುತ್ತಲ್ಲ...."

ಸಿದ್ಧಲಿಂಗಯ್ಯನವರು ಅಂಗೀಕಾರವೆಂಬಂತೆ ಮೌನವಾಗಿಯೇ ಶ್ರೀಗಳವರಿಗೆ ದೀರ್ಘದಂಡ ನಮಸ್ಕಾರ ಮಾಡಿದರು.

"ಅದು ಸರಿ. ವಿದ್ಯಾರ್ಥಿನಿಲಯದ ಉಸ್ತುವಾರಿಯನ್ನು, ಸಂಸ್ಕೃತ ಪಾಠಶಾಲೆಯ ಆಗುಹೋಗುಗಳನ್ನು ಯಾರು ನೋಡಿಕೊಳ್ಳೋರು ?"

"ಬುದ್ದೀ, ನನ್ನದೊಂದು ವಿನಂತಿ. ತಾವು ತಪ್ಪಾಗಿ ತಿಳಿಯದಿದ್ದರೆ– ಚಿಕ್ಕ ಬುದ್ಯೋರನ್ನೇ ಇದನ್ನು ನೋಡಿಕೊಳ್ಳುವುದಕ್ಕೆ ಹೇಳಿಬಿಡಿ. ತಾವು ಆಗಾಗ ಬಂದು ಮಾರ್ಗದರ್ಶನ ಮಾಡುತ್ತಿರಿ ಬುದ್ದಿ..."

ಮೈಸೂರಿನಿಂದ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರರನ್ನು ಸುತ್ತೂರಿಗೆ ಬರಮಾಡಿಕೊಳ್ಳ ಲಾಯಿತು. ಬಂದವರೇ ಬಾಲ್ಯದಿಂದಲೂ ತಾವು ಮರೆಯಲ್ಲಿ ನಿಂತುಕೊಳ್ಳುತ್ತಿದ್ದ, ಆ ಕಂಭದ ಮರೆಯಲ್ಲಿಯೇ, ಶ್ರೀಗಳವರ ಬೆನ್ನ ಹಿಂದೆ ಮರೆಯಾಗಿ ನಿಂತರು.

ವಿದ್ಯಾರ್ಥಿನಿಲಯದಲ್ಲಿಯೇ ಚಿಕ್ಕ ಬುದ್ಯೋರ ಕಾರ್ಯಕಲಾಪಗಳಿಗಾಗಿ ವಿಶಾಲ ಕೋಣೆಯೊಂದನ್ನು ನಿಗದಿಪಡಿಸಲಾಯಿತು. ಸಿದ್ಧಲಿಂಗಯ್ಯನವರು ಕೊಡಮಾಡುವ ಐವತ್ತು ಸಾವಿರ ರೂಪಾಯಿಗಳ ಮೊತ್ತದಿಂದ ಬರುವ ಬಡ್ಡಿ ಹಣವನ್ನು ಹೇಗೆ ಹೇಗೆ ವಿನಿಯೋಗಿಸ ಬೇಕು, ಪ್ರತಿಯೊಂದಕ್ಕೂ ಹೇಗೆ ಲೆಕ್ಕಪತ್ರಗಳನ್ನು ಸಿದ್ಧಪಡಿಸಿಡಬೇಕು ; ತೀರಾ ಬಡ ಹುಡುಗರನ್ನೇ ನಿಲಯಕ್ಕೆ ಸೇರಿಸಿಕೊಳ್ಳಬೇಕು, ಅವರ ವ್ಯಾಸಂಗದ ಬಗ್ಗೆ ಹೇಗೆ ನಿಗಾ ವಹಿಸ ಬೇಕು ಮುಂತಾದ ಅತ್ಯಗತ್ಯ ಸೂಚನೆ ಸಲಹೆಗಳನ್ನು ನೀಡಲಾಯಿತು.

ಸನ್ ಸಾವಿರದ ಒಂಭೈನೂರ ಮೂವತ್ತಮೂರನೇ ವರ್ಷದಲ್ಲಿ ಶ್ರೀ ಪಟ್ಟದ ಶಿವರಾತ್ರಿ ಮಹಾಸ್ವಾಮಿಗಳವರ ಅಮೃತಹಸ್ತದಿಂದ ಜ್ಯೋತಿ ಬೆಳಗಿಸುವುದರ ಮೂಲಕ "ಕ್ಯಾತನಹಳ್ಳಿ ಸಾಹುಕಾರ್ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆ" ಮತ್ತು ಉಚಿತ ವಿದ್ಯಾರ್ಥಿನಿಲಯ ಪ್ರಾರಂಭವಾಯಿತು.

ಸುಡು ಬೇಸಿಗೆಯಲ್ಲಿ ತಂಗಾಳಿ ಬೀಸಿದಂತಾಯಿತು.

ಜ್ಯೋತಿಯ ಬೆಳಕು ಕತ್ತಲಿರುವ ಕಡೆಗೆ ಧಾವಿಸಿತು.

ಬೆಳಕು ಪಡೆಯಲು ನಾಮುಂದು ತಾಮುಂದೆಂದು ವಿದ್ಯಾಕಾಂಕ್ಷಿಗಳು ಬರತೊಡಗಿದರು.

## ಕೊನರಿದ ಕಾಶಿಯ ಕನಸು

ಗಾಳಿಯನ್ನು ಸೀಳಿಕೊಂಡು ರೈಲು ರಭಸದಿಂದ ನುಗ್ಗುತ್ತಾ; ಆಗಾಗ ಇಂಜಿನ್ನಿನ ನೆತ್ತಿ ಯಿಂದ ದಟ್ಟ ಕಪ್ಪು ಹೊಗೆಯನ್ನು ಹೊರಹೊಮ್ಮಿಸುತ್ತ, ಮಧ್ಯೆ ಮಧ್ಯೆ ಕಿಡಿಗಳನ್ನು ಚಿಮ್ಮುತ್ತ, ಸುಟ್ಟ ಕಲ್ಲಿದ್ದಲಿನ ವಾಸನೆಯನ್ನು ಹರಡುತ್ತ ಹಳಿಗಳ ಮೇಲೆ ಉರುಳುರುಳಿ ಓಡುತ್ತಿತ್ತು.

ಕಿಟಕಿಯಾಚೆ, ಹತ್ತಿರದ ಮರಗಳು ವೇಗವಾಗಿ ಹಿಂದಕ್ಕೆ ಸರಿದು ಹೋಗುತ್ತಿವೆ.

ದೂರದ ಮರಗಳು ಜೊತೆಗೆ ಸಾಗಿಬರುತ್ತಿವೆ.

ರೈಲು ಧಡ್ ಧಡಕ್ ಎಂದು ಶಬ್ದಿಸುತ್ತ ಓಡುತ್ತಿದೆ. 'ಶ್ರೀ ಶಿವರಾತ್ರೀಶಾ ! ಶಿವರಾತ್ರೀಶ' – ಎಂದು ತಾವು ಜಪಿಸಿದರೆ, ರೈಲು ಚಕ್ರಗಳೂ 'ಶಿವರಾತ್ರೀಶಾ ! ಶಿವರಾತ್ರೀಶಾ '– ಎನ್ನುತ್ತಿವೆ,

'ನಮಃ ಶಿವಾಯಃ ! ನಮಃ ಶಿವಾಯ' – ಎಂದರೆ ಅವೂ ಸಹ 'ನಮಃ ಶಿವಾಯ ನಮಃ ಶಿವಾಯ !' ಎನ್ನುತ್ತಿವೆ !

ಕುರುಚಲು ಗಿಡಗಳಿಗೆ ಬಾಯಿಹಚ್ಚಿದ್ದ ಮೇಕೆಗಳು ಕೆಲವು ತಲೆ ಎತ್ತಿ ಓಡುತ್ತಿರುವ ರೈಲನ್ನು ನೋಡಿ ಮತ್ತೆ ಹಸಿರು ಮುಕ್ಕುವುದರಲ್ಲಿ ಮಗ್ನವಾಗುತ್ತಿವೆ.

ಅಷ್ಟು ದೂರದ ಗುಡ್ಡದ ಮೇಲೆ ಬಿಳಿ, ಕಂದು, ಗೋದಿ ಬಣ್ಣದ ಕಪಿಲೆಗಳು ಮೇಯುತ್ತಿವೆ.

ದನಗಾಹಿಗಳು ಕುರಿ ಕಾಯುವ ಹೈದರು, ನಿರುಂಬಳವಾಗಿ, ಎರಡು ಭುಜಗಳ ಮೇಲೆ ಹಾದು ಬಂದ ಕೋಲುಗಳ ಮೇಲಿನ ಕೈಯೊಂದನ್ನು ಚಾಚಿ, ಕಿಟಕಿಯೊಳಗೆ ಕಂಡುಬಂದ ಪಯಣಿಗರತ್ತ ಕೈ ಬೀಸಿ ಬೀಸಿ ನಗುತ್ತಿದ್ದಾರೆ....

ಎರಡು ಹಗಲು, ಎರಡು ರಾತ್ರಿ ಪರ್ಯಂತ ತಮಿಳು ಮಾತನಾಡುವ, ತೆಲುಗು ಮಾತನಾಡುವ, ಒರಿಯಾ ಭಾಷೆಯವರ ಪ್ರಾಂತಗಳ ಮೂಲಕ ಸಾಗಿ ಬಂದಿದೆ ರೈಲು.

ಬೋಗಿಯಲ್ಲಿನ ಜನ ತಮ್ಮ ತಮ್ಮ ನಿಲ್ದಾಣ ಬರುತ್ತಲೆ ಇಳಿದು ಹೋದರೆ, ಕೆಲವರು ಹೊಸತಾಗಿ ಬೋಗಿಯೊಳಕ್ಕೆ ಬರುತ್ತಲೇ ಇದ್ದರು.

ದೂರಪ್ರಯಾಣ ಮಾಡುತ್ತಿದ್ದವರು ಈ ಎರಡು ದಿನ ಬೆಳಗಾಗುತ್ತಲೆ, ತಮ್ಮೆದುರಿಗೆ ಕಿಟಕಿಯ ಪಕ್ಕ ಕುಳಿತ, ಅಂತರ್ಮುಖಿಯಾಗಿದ್ದ, ಮುದ್ದು ಮುಗ್ಧ, ತೇಜಸ್ವೀ ಮುಖದ ತರುಣ ಸ್ವಾಮೀಜಿಯವರನ್ನು ನೋಡಿ ಕೆಲವರು ಕುಳಿತಲ್ಲಿಂದಲೇ ಕೈಮುಗಿದು ನಮಸ್ಕರಿಸಿದರು. ಕೆಲವರು ವೃದ್ಧರು, ಪ್ರೌಢರು ಎದ್ದು ಮುಖಮಾರ್ಜನ ಮಾಡಿ ಬಂದು ಸ್ವಾಮೀಜಿಯವರ ಪಾದಗಳಿಗೆ ನಮಸ್ಕರಿಸಿದರು. ಮಾರುದ್ದ ಹೊತ್ತೇರಿದ ಮೇಲೆ, ತಾವು ತಂದ ಬುತ್ತಿಯ ಗಂಟು ಬಿಚ್ಚಿ, ಭಕ್ತಿಯಿಂದ ತಿಂಡಿ-ತಿನಿಸನ್ನು ತಂದು ಸ್ವಾಮೀಜಿಯವರಿಗೆ ಕೊಡಲು ಬಂದರು. ಸ್ವಾಮೀಜಿಯವರು ತಾವು ಉಪವಾಸ ವ್ರತ ಕೈಗೊಂಡವರೆಂಬಂತೆ ತಲೆಯಾಡಿಸಿದರು. ತಮ್ಮ ಪ್ರಸಾದ ಸ್ವೀಕೃತವಾಗಲಿಲ್ಲವಲ್ಲ ಎಂದು ಮುಖ ಸಣ್ಣದು ಮಾಡಿಕೊಂಡವರನ್ನು – ಮುಗುಳು ನಗೆಯಿಂದ ನೋಡಿ, ತಾವು ನಿಲ್ದಾಣವೊಂದರಲ್ಲಿ ಕೊಂಡ ಬಾಳೆಯ ಹಣ್ಣನ್ನು ಕೈಗೆತ್ತಿಕೊಂಡು, ಸುಲಿದು ಇಷ್ಟಿಷ್ಟು ಹಣ್ಣಿನ ತುಣುಕುಗಳನ್ನು ತಾವೇ ಅವರಿಗೆ ನೀಡಿದರು. ಅವರು ಹರ್ಷಭರಿತರಾಗಿ, ಬೊಗಸೆಯೊಡ್ಡಿ, ಫಲ ಪ್ರಸಾದ ಪಡೆದು, ಕಣ್ಣಿಗೊತ್ತಿಕೊಂಡು ಪರಮಾತ್ಮನ ಅನುಗ್ರಹದ ಅಮೃತ ಫಲ ದೊರೆತಷ್ಟು ಆನಂದದಿಂದ ನಲಿದರು.

ಈ ಎರಡು ದಿನಗಳಿಂದ, ಅರ್ಧನಿಮೀಲಿತ ನೇತ್ರರಾಗಿ, ಅಂತರ್ಮುಖಿಗಳಾಗಿ ತಮ್ಮೊಳಗಾಗಿ, ತಮ್ಮ ಮನೋರಂಗದಲ್ಲಿ –

ಈಗಾಗಲೇ ಗುರುಗಳವರಿಗೆ ನಾನು ಮೈಸೂರಲ್ಲಿಲ್ಲದಿರುವುದು ಗೊತ್ತಾಗಿರುತ್ತದೆ. ಎಂಥ ಕೋಪದಿಂದ ರುದ್ರಾವತಾರ ತಾಳಿರುವರೋ, ಎಂಥ ದುಃಖದಿಂದ ಕುಗ್ಗಿಹೋಗಿರುವರೋ, ಏನೆಲ್ಲ ಪರಿತಾಪದಲ್ಲಿ ಬೇಯುತ್ತಿರುವರೋ....

ನಿಲಯದ ವಿದ್ಯಾರ್ಥಿಗಳು ಎಷ್ಟು ಚಡಪಡಿಸುತ್ತಿರುವರೋ....

ಪಾಠಶಾಲೆಯ ಗುರುವೃಂದ ಏನೆಂಥ ತಲ್ಲಣಕ್ಕೊಳಗಾಗಿರುವರೋ...

ಶ್ರೀ ನಿರ್ವಾಣಸ್ವಾಮಿಗಳು – ಪಾಪ ಎಷ್ಟು ಮರುಗಿದರೋ... ನನ್ನ ಬಗ್ಗೆ ಎಷ್ಟು ಕಿನಿಸುಗೊಂಡರೋ, ಎಂಥ ಮುನಿಸು ಅವರನ್ನು ಕುದಿಸಿತೋ.... ಅಯ್ಯೋ, ನನ್ನನ್ನು ಬಿಟ್ಟು ತಾವೊಬ್ಬರೇ ಹೊರಟುಹೋದರಲ್ಲಾ.... ನನ್ನನ್ನೂ ಕರೆದೊಯ್ದಿದ್ದರೆ ನಾನೂ ಅವರಂತೆ ವಿದ್ಯಾರ್ಜನೆ ಮಾಡುತ್ತಿರಲಿಲ್ಲವೇ... ನಾನೂ ಉದ್ಧಾರವಾಗುತ್ತಿರಲಿಲ್ಲವೇ.... ಎಷ್ಟೊಂದು ಸ್ವಾರ್ಥಿಗಳು ರಾಜೇಂದ್ರಸ್ವಾಮಿಗಳು – ಎಂದು ಏನೆಲ್ಲ ಉಸಿರು ಹಾಕಿದರೋ.... ತಮ್ಮ ಗುರುಗಳಿಗೆ ನಾನು ಹೀಗೆ ಕಾಶಿಗೆ ಹೊರಟಿದ್ದನ್ನು ಈಗಾಗಲೇ ತಿಳಿಸಿಬಿಟ್ಟಿರಬಹುದು. ಅವರು ಸುತ್ತೂರಿಗೆ ಕೂಡಲೇ ವಿಷಯ ತಿಳಿಸಿರಬಹುದು. ಸುತ್ತೂರಿನಿಂದ ಹಿರಿಯ ಗುರುಗಳು ಮೈಸೂರಿಗೆ ಧಾವಿಸಿ ಬಂದಿರಬಹುದು. ನಮಃ ಶಿವಾಯ ಮಠಕ್ಕೆ – ವಿದ್ಯಾರ್ಥಿನಿಲಯಕ್ಕೆ – ಕುಂದೂರು ಮಠಕ್ಕೆ– ಕಂದನನ್ನು ಕಳೆದುಕೊಂಡ ಗೋಮಾತೆಯಂತೆ ಅಲೆದಾಡಿ ಹುಡುಕಾಡಿ ನಾನಿಲ್ಲದೇ ಇರುವುದನ್ನು ಕಂಡು ಎಂಥ ದುಃಖಕ್ಕೀಡಾಗಿರಬಹುದು...

ಕ್ಯಾತನಹಳ್ಳಿಗೆ ಜನರನ್ನು ಕಳಿಸಿ, ನನ್ನ ಆತ್ಮೀಯ ಶ್ರೀ ಶಿವಪ್ರಭುಸ್ವಾಮಿಗಳನ್ನು ಬರಮಾಡಿಕೊಂಡಿರಬಹುದು. ಅವರು ಇವರಿಗಿಂತ ಹೆಚ್ಚಾಗಿ ದುಃಖದಲ್ಲಿ ಮುಳುಗಿರುತ್ತಾರೆ.... ಅಳುತ್ತ ಕುಳಿತುಬಿಟ್ಟಿರುತ್ತಾರೆ....

ಅಯ್ಯೋ ! ಎಂಥ ಕೆಲಸವಾಗಿಬಿಟ್ಟಿತು....

ನನ್ನಿಂದಾಗಿ, ಅವರಿಗೆಲ್ಲ ಎಂಥ ಕಷ್ಟ ಎಡತಾಕಿತಲ್ಲಾ....

ನಿಲಯದಲ್ಲಿ ಆ ವಿದ್ಯಾರ್ಥಿ ಜ್ವರದಿಂದ ಬಳಲುತ್ತಿದ್ದನಲ್ಲಾ. ಅವನಿಗೆ ರವೆಗಂಜಿ ಮಾಡಿಸಿ ಕುಡಿಸುತ್ತಿದ್ದೆ.... ಅಡುಗೆಯವನು ರವೆಗಂಜಿ ಮಾಡಿಕೊಟ್ಟನೋ ಇಲ್ಲವೋ.... ಶಿವರಾತ್ರೀಶಾ.... ಆ ಮಗೂನ ನೀನೇ ಕಾಪಾಡು ತಂದೆಯೇ....

ಕಣ್ತುಂಬಿ ಬಂದುವು. ಕಣ್ಣೀರು ದಬದಬ ಉರುಳಿತು.

ತಟ್ಟನೆ ಕಾವಿ ಅಂಗವಸ್ತ್ರದಿಂದ ಕಣ್ಣುಗಳನ್ನೊತ್ತಿಕೊಂಡರು – ನೋಡಿದವರಿಗೆ 'ಪಾಪ ! ಇಂಜಿನ್ನಿನ ಇಜ್ಜಲುಪುಡಿ ಕಣ್ಣಿಗೆ ಬಿದ್ದಿರಬೇಕು' – ಎಂಬ ಭಾವ ಬರುವ ಹಾಗೆ ಕಣ್ಣುಜ್ಜಿಕೊಂಡರು.

ಮತ್ತೆ ಮನಸ್ಸು ಸ್ಥಿಮಿತಕ್ಕೆ ಬಂದಮೇಲೆ –

ನಾನು ಹೇಳದೇ ಕೇಳದೇ ಹೊರಟುಬಂದರೆ, ಸುತ್ತೂರಿನಲ್ಲಿ, ವಿದ್ಯಾರ್ಥಿನಿಲಯದಲ್ಲಿ ಏನೆಲ್ಲ ಆಗಬಹುದು ಎಂದು ಊಹಿಸಿಯೇ ಇದ್ದೆ. ಹೀಗೆಲ್ಲಾ ಆಗುತ್ತೆ ಎಂದು ಗೊತ್ತಿದ್ದೂ, ವಿಚಲಿತನಾಗದೆ, ಮನಸ್ಸು ಬದಲಿಸದೆ, ದೃಢ ನಿರ್ಧಾರ ಮಾಡಿಯೇ ಬಂದವನಲ್ಲವೇ ! ಮತ್ತೆ ಈಗೇಕೆ ಅದನ್ನೆಲ್ಲಾ ನೆನೆಸಿಕೊಂಡು ಮನಸ್ಸು ಚಂಚಲಮಾಡಿಕೊಳ್ಳಬೇಕು ?

ಗುರಿ ಮುಟ್ಟಬೇಕು, ಬಯಸಿದ್ದನ್ನು ಸಾಧಿಸಬೇಕು. ಮಧ್ಯದಲ್ಲಿಯೇ ಕೈಚೆಲ್ಲಿ, ಹಿಂದೆ ಸರಿದರೆ, ಮುಂದೆ ಜೀವನದಲ್ಲಿ ಸಾಧಿಸಬೇಕೆಂದು ಕನಸು ಕಂಡಿರುವುದನ್ನೆಲ್ಲಾ ಸಾಧಿಸಲಾಗುತ್ತದೆಯೆ ?

ತಾವು ದೊಡ್ಡ ವಿದ್ವಾಂಸರಾಗಬೇಕು, ತಾವು ಆರ್ಜಿಸಿದ ಜ್ಞಾನಸಂಪತ್ತನ್ನು ಎಲ್ಲರಿಗೂ ಹಂಚಬೇಕು. ಒಂದು ಪೀಠದ ಜಗದ್ಗುರು ಎಂದು ಪಟ್ಟಾಧಿಕಾರ ವಹಿಸಿಕೊಂಡ ಮೇಲೆ – ಎಲ್ಲರಿಗೆ ಒಳಿತನ್ನು ಮಾಡಬೇಕು –

ಜನರ ಅಜ್ಞಾನವನ್ನು ತೊಡೆಯಬೇಕು.

ಅಜ್ಞಾನವೇ ದಾರಿದ್ರ್ಯಕ್ಕೆ ಮೂಲ.

ದಾರಿದ್ರ್ಯ ತೊಲಗಿದರೆ, ಸಮಾಜದಲ್ಲಿ ಸುಖಶಾಂತಿಗಳು ನೆಲೆಗೊಳ್ಳುತ್ತವೆ. ವ್ಯಕ್ತಿ ವ್ಯಕ್ತಿಗಳ ದಾರಿದ್ರ್ಯ ನಿವಾರಣೆಯಾದರೆ, ಮುಂದುವರಿಯಲು ಸಾಧ್ಯ. ಆ ಮೂಲಕ ಸಮಾಜ ಸಮೃದ್ಧಿ ಗೊಂಡು ಪ್ರಗತಿಹೊಂದಲು ಸಾಧ್ಯ.

ದಾರಿದ್ರ್ಯ ತೊಲಗಬೇಕೆಂದರೆ, ಜನ ಜ್ಞಾನಿಗಳಾಗಬೇಕು ; ಜ್ಞಾನಿಗಳಾಗಬೇಕು ಎಂದರೆ ಎಲ್ಲರೂ ವಿದ್ವಾಂಸರಾಗಬೇಕೆಂದೇನೂ ಅಲ್ಲ. ಜೀವನದಲ್ಲಿ ಅಸೂಯೆ, ಮತ್ಸರ, ದ್ವೇಷಗಳಿಲ್ಲ ದಂತೆ, ಎಲ್ಲರೂ ತನ್ನಂತೆ, ತಾನು ಸುಖವಾಗಿದ್ದರೆ ಎಲ್ಲರೂ ಸುಖವಾಗಿರುತ್ತಾರೆ ಎಂಬ ಭಾವ ಸಲ್ಲದು ; ಎಲ್ಲರೂ ಸುಖವಾಗಿದ್ದರೆ, ಆ ಎಲ್ಲರಲ್ಲಿ ತಾನೂ ಒಬ್ಬನಾಗುತ್ತೇನೆ – ಎಂಬ ಮನಸ್ಸು ಎಲ್ಲರಿಗೂ ಬರಬೇಕು. ಹಾಗೆ ಅಂಥ ಮನಸ್ಸು ಬರಬೇಕಾದರೆ, ಬೋಧಿಸಬೇಕು, ತಿಳಿವಳಿಕೆ ನೀಡಬೇಕು... ಈ ತಿಳಿವಳಿಕೆ, ಬರಬೇಕಾದರೆ ವಿದ್ಯೆ, ಜ್ಞಾನಾರ್ಜನೆ ಅತ್ಯಂತ ಅಗತ್ಯ. ನೀತಿ, ನಿಯಮ, ಭಗವದ್ಭಕ್ತಿ ಎಲ್ಲರಲ್ಲೂ ಮೂಡಬೇಕು.

ಏನೆಲ್ಲ ಅನ್ನಿಸಿಕೆಗಳು !

ತಾವು ದೃಢ ನಿರ್ಧಾರದಿಂದಲೇ ಕಾಶಿಗೆ ಹೊರಟಿರುವುದಲ್ಲವೆ ?

ಕಾಶಿಗೆ ಹೋದಮೇಲೆ, ಗುರುಗಳಿಗೆ ದೀರ್ಘವಾಗಿ ಪತ್ರ ಬರೆದು, ಕ್ಷಮಾದಾನ ಬೇಡುವುದು, ಖಂಡಿತ ಗುರುಗಳು ಸಂತಸಗೊಳ್ಳುತ್ತಾರೆ.

ಆದರೆ, ಆದರೆ, ತಮ್ಮನ್ನು ಒಂದು ವಾರವೂ ಅಗಲಿರಲಾರದಂಥ ಗುರುಗಳು, ನಾಲ್ಕಾರು ವರ್ಷ – ನಾಲ್ಕಾರು ವರ್ಷವೋ ಹತ್ತಾರು ವರ್ಷವೋ – ಯಾರಿಗೆ ಗೊತ್ತು – ತಾವು ವಿದ್ವಾಂಸರಾಗಲು, ಎಷ್ಟು ವರ್ಷಗಳಾಗುತ್ತವೋ ! ಅಷ್ಟು ದೀರ್ಘಕಾಲ ಗುರುಗಳು ನನ್ನನ್ನು ಅಗಲಿರಬಲ್ಲರೇ ?

ಸಾಧ್ಯವಿಲ್ಲವೆಂದೇ ಅನ್ನಿಸಿತು.

ವಿಷಯ ತಿಳಿಯುತ್ತಲೇ, ಅವರೇ ಕಾಶಿಗೆ ಧಾವಿಸಿ ಬಂದೇ ಬರುತ್ತಾರೆ ಎನ್ನಿಸಿತು.

ಭಯವಾಯಿತು, ಚಿಂತೆಯಾಯಿತು, ಏನು ಮಾಡಬೇಕೆಂಬುದು ತೋಚದಾಯಿತು.

ಹ್ಞಾ.... ಕಾಶಿಗೆ ಹೋಗುತ್ತಲೇ ಶ್ರೀ ಗೌರೀಶಂಕರ ಸ್ವಾಮೀಜಿಯವರ ಸಮಕ್ಷಮ ಎಲ್ಲ ಹೇಳಿಕೊಂಡುಬಿಡಬೇಕು. ನನ್ನನ್ನು ನಿಮ್ಮಂತೆ ಮಾಡುವ ತನಕ – ಯಾರು ಬಂದು ವಿನಂತಿಸಿಕೊಂಡರೂ ನನ್ನನ್ನು ನಡುನೀರಲ್ಲಿ ಕೈಬಿಟ್ಟಂತೆ ಹಿಂದಕ್ಕೆ ಕಳಿಸಿಕೊಡಬಾರದು – ಎಂದು. ಹಾಗೇನಾದರೂ ಕಳಿಸಿಕೊಡಲು ಸಿದ್ಧರಾದರೆ, ನಾನಿನ್ನು ಜೀವಸಹಿತ ಉಳಿಯಲಾರೆ ಎಂದು ಹೇಳಿ ಈಗಲೇ ಒಪ್ಪಿಸಿಬಿಡಬೇಕು.

ಒಳ್ಳೆಯ ಕಾರ್ಯಕ್ಕೆ ಹಟತೊಟ್ಟರೆ ಅದೇನೂ ಅವಿಧೇಯತೆಯಲ್ಲವಲ್ಲ ! ಒಂದು ವೇಳೆ ಹಿರಿಯ ಜಗದ್ಗುರುಗಳು ಕಾಶಿಗೆ ಬಂದರೂ, ನಾನು ವಿದ್ಯೆ ಪಡೆದೇ ಬರುವುದು, ಅಲ್ಲಿಯ ವರೆಗೆ ಬರುವುದೇ ಇಲ್ಲ ! ಎಂದು ಹಟತೊಟ್ಟರೆ, ಗುರುಗಳೂ ಸಹ ನನ್ನ ವಿದ್ಯಾಕಾಂಕ್ಷೆಯನ್ನು ಮನಗಂಡು ಒಪ್ಪಿಯೇ ಒಪ್ಪಿಕೊಳ್ಳುತ್ತಾರೆ – ಎಂದು ದೃಢ ನಿರ್ಧಾರವನ್ನು ಮತ್ತೊಮ್ಮೆ ದೃಢೀಕರಿಸಿಕೊಂಡರು !

ಕಾಶಿ, ಕಾಯಿಸಿ ಕಾಯಿಸಿ ಕಾಶಿ ಬಂದೇಬಿಟ್ಟಿತು !

ಅಲ್ಲಿ ಇಲ್ಲಿ ಅವರಿವರನ್ನು ವಿಚಾರಿಸುತ್ತ, ಜಂಗಮವಾಡಿಯಲ್ಲಿರುವ ಶ್ರೀ ಗೌರೀಶಂಕರ ಸ್ವಾಮೀಜಿಯವರ ವಾಸಗೃಹದ ಹೊಸಿಲ ಮುಂದೆ ಬಂದು ನಿಂತರು, ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು !

### ಗೌರೀಶಂಕರದಿಂದ ಹರಿದುಬಂದ ಸೇವಾಗಂಗೆ

ಶ್ರೀ ಗೌರೀಶಂಕರ ಸ್ವಾಮೀಜಿಯವರು ಒಂದು ಕ್ಷಣ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರನ್ನು ನೆಟ್ಟ ನೋಟದಿಂದ ನೋಡಿದರು –

ತರುಣ ಶ್ರೀಗಳವರ ಹೃದಯ ಸಾಗರದಲ್ಲಿ ಕರುಣೆಯ ಅಲೆಗಳು ವಿಜೃಂಭಿಸುತ್ತಿವೆ.... ಕರ್ತೃತ್ವಶಕ್ತಿ ಬಡಬಾಗ್ನಿಯಂತೆ ಜಾಜ್ವಲ್ಯಮಾನವಾಗಿ ಪ್ರಕಾಶಿಸುತ್ತಿದೆ.... ಮಾನವೀಯತೆಯ ರತ್ನರಾಶಿ ದೇದೀಪ್ಯಮಾನವಾಗಿ ತೊಳಗಿ ಬೆಳಗುತ್ತಿದೆ...

ಲೋಕಕಾರುಣ್ಯ, ಕರ್ತೃತ್ವಶಕ್ತಿ, ಮಾನವೀಯತೆಗಳು ಮುಪ್ಪುರಿಗೊಂಡು ಮೇರೆ ಮೀರಿ ದಶದಿಕ್ಕುಗಳಿಗೆ ವ್ಯಾಪಿಸಲು ಹವಣಿಸುತ್ತಿವೆ... ಅವಕಾಶಕ್ಕಾಗಿ ಕಾತರಿಸುತ್ತಿವೆ....

ಶ್ರೀ ಗೌರೀಶಂಕರ ಸ್ವಾಮಿಗಳು ಅಮಿತ ಸಂತಸದಿಂದ ಶ್ರೀ ಶಿವರಾತ್ರಿ ರಾಜೇಂದ್ರರನ್ನು ಮನದಣಿಯೆ ನೋಡಿ, ಮುಗುಳ್ನಕ್ಕು ಹೇಳತೊಡಗಿದರು –

"ನಿಮ್ಮ ಹಂಬಲ ಸಾಧುವಾದುದು. ಕಾಶಿಯಲ್ಲಿ ವ್ಯಾಸಂಗ ಮಾಡಬೇಕೆಂಬ ನಿಮ್ಮ ತೀವ್ರ ಆಕಾಂಕ್ಷೆ ಸ್ತುತ್ಯರ್ಹ. ಪಾಂಡಿತ್ಯ ಗಳಿಸುವುದು ಮಹತ್ತರ ಸಾಧನೆಯೂ ಹೌದು. ಆದರೆ ಅದಕ್ಕಿಂತಲೂ ಮಹತ್ತರವಾದುದನ್ನು ನೀವು ಸಾಧಿಸಲೆಂದೇ ಜನ್ಮಿಸಿದವರು ! ನಿಮ್ಮಿಂದ ಲೋಕ ಅನನ್ಯವಾದುದನ್ನು ಅಪೂರ್ವವಾದುದನ್ನು ನಿರೀಕ್ಷಿಸುತ್ತಿದೆ....

ಶ್ರೀ ಶಿವರಾತ್ರಿ ರಾಜೇಂದ್ರರು ತ್ರಿಕರಣಗಳನ್ನು ಹುರಿಗೊಳಿಸಿಕೊಂಡು ಶ್ರೀ ಗೌರೀಶಂಕರ ಸ್ವಾಮಿಗಳವರು ಹೇಳುತ್ತಿರುವುದನ್ನು ಕೇಳುತ್ತ, ಕೇಳುಕೇಳುತ್ತಿರುವಂತೆಯೇ ಮನನ

ಮಾಡಿಕೊಳ್ಳುತ್ತ, ಗ್ರಹಿಸಿದ್ದನ್ನು ವಿವೇಕದ ನಿಕಷಕ್ಕೆ ಒಡ್ಡುತ್ತ, ಕುತೂಹಲದಿಂದ ಮುಂದೆ ಹೇಳುವುದನ್ನು ಕೇಳಿಸಿಕೊಳ್ಳುತ್ತಿರುವರು –

"ನೋಡಿ ನಮ್ಮ ದೇಶದಲ್ಲಿ ಸಾವಿರಾರು ವರ್ಷಗಳಿಂದ ಅಸಂಖ್ಯಾತ ಜನ ವಿದ್ಯೆಯಿಂದ ವಂಚಿತರಾಗಿ ದುಡಿಮೆಯ ಪಶುಗಳಾಗಿ, ಗುಲಾಮರಂತೆ ಬದುಕುತ್ತಾ ಬಂದಿದ್ದಾರೆ. ಈ ದೇಶದಲ್ಲಿ ಸಣ್ಣಪುಟ್ಟ ಸಂಸ್ಥಾನಗಳು ಸೇರಿ ಸುಮಾರು ಐದುನೂರು ಆರುನೂರು ಸಂಸ್ಥಾನಗಳಿವೆ. ರಾಜರು, ರಾಜಾಧಿರಾಜರು, ಸಾಮ್ರಾಟರು ಆಳುತ್ತ ಬಂದಿದ್ದಾರೆ. ಆದರೆ ಒಂದನ್ನು ಗಮನಿಸಿ – ಯಾವ ರಾಜನೂ ವರ್ಣಾಶ್ರಮದ ನಾಲ್ಕನೆಯ ವರ್ಗ ಶೂದ್ರರ – ಅಪಾರ ಜನಸಂಖ್ಯೆಯ ಶೂದ್ರರ ದಲಿತರ ವಿದ್ಯೆಗಾಗಿ ಏನೊಂದೂ ಮಾಡಿಲ್ಲ. ಏನಿದ್ದರೂ 'ಗುರುಕುಲ'ಗಳಿಗೆ ಬೆಂಬಲ ನೀಡುತ್ತಾ ಬಂದರು. ಗುರುಕುಲಗಳು ಈ ಶೂದ್ರರಿಗೆ ವಿದ್ಯೆ ಹೇಳಿಕೊಡುವುದು ನಿಷಿದ್ಧವೋ ಎಂಬಂತೆ ನಡೆದುಕೊಂಡುಬಂದಿವೆ. ಶೂದ್ರರು – ಸ್ತ್ರೀಯರು – ಬ್ರಾಹ್ಮಣವರ್ಗದ ಸ್ತ್ರೀಯರಾದರೂ ಸರಿಯೇ – ಅವರು ವೇದಾಧ್ಯಯನ ಮಾಡಕೂಡದು, ಯಾಗ ಯಜ್ಞಗಳಲ್ಲಿ ಭಾಗವಹಿಸ ಕೂಡದು. ಅಷ್ಟೇಕೆ – ಕಿವಿಯಿಂದ ಕೇಳಲೂ ಬಾರದು. ಕೇಳಿದರೆ ಅಂಥವರ ಕಿವಿಗಳಿಗೆ ಕಾದ ಸೀಸ ಹುಯ್ಯಬೇಕು. ವೇದಮಂತ್ರಗಳನ್ನು ಅಂಥವರು – ಎಂದರೆ ಶೂದ್ರರು ಪಠಿಸಿದರೆ, ಪಠಿಸುವುದಿರಲಿ – ಉಚ್ಚರಿಸಿದರೂ ಸಾಕು, ಅವರ ನಾಲಗೆಗಳನ್ನು ಕತ್ತರಿಸಬೇಕು – ಎಂಬಂತಹ ಕ್ರೂರ ನಿಯಮಗಳನ್ನು ರೂಪಿಸಿತು ಈ ಸಮಾಜ....

"ಈ ಅಮಾನವೀಯ ನಿಯಮಗಳು ಜಾರಿಗೆ ಬರುವ ಮುನ್ನ ವೇದಕಾಲದಲ್ಲಿ ಎಲ್ಲ ಸಮಂಜಸವಾಗಿತ್ತೆನ್ನಬಹುದು. ವೇದಕಾಲದಲ್ಲಿ ಸ್ತ್ರೀಗೆ ಪುರುಷನಿಗಿರುವಷ್ಟೇ ಸ್ವಾತಂತ್ರ್ಯ, ಹಕ್ಕುಬಾಧ್ಯತೆಗಳಿದ್ದುವು. ಆ ಕಾಲದ ಗಾರ್ಗಿ, ಮೈತ್ರೇಯಿ, ಗೋದಾ, ಅತ್ರೇಯಿ, ಲೋಪಾಮುದ್ರ ಮುಂತಾದ ಸ್ತ್ರೀರತ್ನರು ಜಗದ್ವಂದ್ಯರಾಗಿದ್ದರು. ಕಾಲಕ್ರಮೇಣ ಸ್ತ್ರೀಯರು ಹತ್ತಿಕ್ಕಲ್ಪಟ್ಟರು, ಗೃಹಬಂಧನಕ್ಕೊಳಗಾದರು ! 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' – ಎಂದು ಘೋಷಿಸಲಾಯಿತು ! ಸ್ತ್ರೀಯರು ಸಿಡಿದೇಳಬಹುದೆಂದು ಅವರನ್ನು ಪತಿವ್ರತಾಶಿರೋಮಣಿ ಗಳಾಗಿರಬೇಕು, ಅವರನ್ನು ಗೃಹಲಕ್ಷ್ಮಿ, 'ಗೃಹಿಣೀಗೃಹಮುಚ್ಯತೇ' – ಎಂದೆಲ್ಲ ಕೀರ್ತಿಸಿ – ನಿಜಕ್ಕೂ ಶೋಷಿಸಿ – ಭೋಗದ ವಸ್ತುಗಳನ್ನಾಗಿ, ಆಸ್ತಿಯಲ್ಲಿ ಪಾಲು ಪಡೆಯಬಹುದಾದ ವಸ್ತುಗಳಲ್ಲೊಬ್ಬಳನ್ನಾಗಿ ಮಾಡಿತು, ಸಮಾಜ ! ಅನಿವಾರ್ಯವಾಗಿ ಸ್ತ್ರೀಸಮುದಾಯ ಮೂಕಪಶುಗಳಂತಾಯಿತು....

"ಶೂದ್ರರು, ಇನ್ನೂ ಕೆಳಸ್ತರದವರು ಕೇವಲ ದುಡಿಮೆಗಾರರಾಗಿ, ಮೇಲ್ವರ್ಗದವರ ಸುಖೋಪಭೋಗಗಳಿಗಾಗಿ ಗುಲಾಮರಂತೆ, ವ್ಯಕ್ತಿತ್ವವಿಲ್ಲದವರಾಗಿ, ವಿದ್ಯಾವಿಹೀನರಾಗಿ, ಗಾಣದ ಎತ್ತುಗಳಂತೆ ಬಾಳಬೇಕಾಯಿತು...

"ಸಾವಿರಾರು ವರ್ಷಗಳಿಂದ ಈ ಶೂದ್ರರು ಕೇವಲ ತೊತ್ತುಗಳಂತೆ ಬದುಕಿದರೆ ? – ಎಂದರೆ ಊಹುಂ.... ಅವರಲ್ಲೂ – ಕೆಲವರಿಗಾದರೂ ತರ್ಕ ತಲೆ ಎತ್ತುತ್ತಿತ್ತು ....

ತಮ್ಮ ಸ್ಥಿತಿಗತಿಗಳ ಕುರಿತು ಚಿಂತನೆ ನಡೆಸುತ್ತಿದ್ದರು. ಪ್ರತಿಭಟನೆಯ ದನಿ ಎತ್ತಿದ್ದುಂಟು. ಆದರೆ ಆ ಕೂಡಲೇ ಆ ಪ್ರತಿಭಟನೆಯ ಧ್ವನಿಯನ್ನು ಹುಟ್ಟಡಗಿಸಿಬಿಡುತ್ತಿದ್ದರು. ಇಂಗ್ಲಿಷ್‌ನಲ್ಲಿ ಒಂದು ಮಾತಿದೆ. "Power and wisdom go always hand in hand." ಅಂದರೆ ಶಕ್ತಿ ಮತ್ತು ಬುದ್ಧಿಮತ್ತೆಯು ಬುದ್ಧಿಮತ್ತೆ ಎನ್ನುವುದಕ್ಕಿಂತ – ಯುಕ್ತಿ– ಊಹುಂ, ಯುಕ್ತಿ ಎನ್ನುವುದಕ್ಕಿಂತ ಕುಯುಕ್ತಿ ಎಂಬುದೇ ಸರಿ ! – ಕ್ಷತ್ರಿಯರ ಶಕ್ತಿ ಮತ್ತು ಪುರೋಹಿತಶಾಹಿಯ ಕುಯುಕ್ತಿ ಸದಾ ಕೈ ಕೈ ಜೋಡಿಸಿ, ಪರಸ್ಪರ ಪೂರಕ, ಸಹಾಯಕವಾಗಿ, ಪರಸ್ಪರ ರಕ್ಷಣೆ ಮಾಡಿಕೊಳ್ಳುತ್ತಿದ್ದರು.

ಅಸಂಖ್ಯಾತ ಶೂದ್ರರು ಒಮ್ಮೆ ಏನಾದರೂ ಪ್ರತಿಭಟಿಸಿದರೆ, ದಂಗೆ ಎದ್ದುಬಿಟ್ಟರೆ, ಈ ಇಬ್ಬರ ಅಸ್ತಿತ್ವದ ಬುಡಕ್ಕೇ ಕೊಡಲಿ ಪೆಟ್ಟು ಬೀಳುತ್ತಿತ್ತು. ಆದರೆ ಶೂದ್ರ ವರ್ಗದ ಅಜ್ಞಾನವನ್ನು, ಮೌಢ್ಯವನ್ನು ಆಧಾರ ಮಾಡಿಕೊಂಡು 'ಕರ್ಮ ಸಿದ್ಧಾಂತ' ಎಂಬುದನ್ನು ರೂಪಿಸಿ, ಅವರ ಬೆರಳನ್ನು ಅವರ ಕಣ್ಣಿಗೇ ತಿವಿದರು !

ಈ ಅವೈಜ್ಞಾನಿಕ, ಸ್ವಾರ್ಥಸಾಧನವಾದ 'ಕರ್ಮಸಿದ್ಧಾಂತ'ದಿಂದ ನಮ್ಮ ಜನಶಕ್ತಿಯನ್ನು, ನಮ್ಮ ಜನರ ಬುದ್ಧಿಮತ್ತೆಯನ್ನು, ನಮ್ಮ ಜನರ ಪ್ರತಿಭಾಪಟುತ್ವವನ್ನು ತಳಮಟ್ಟ ಹತ್ತಿಕ್ಕಿ ಅಟ್ಟಹಾಸ ಮಾಡುತ್ತಲೇ ಬಂದರು ಸ್ವಾರ್ಥಿಗಳು !

ಪಾಪ ! ಈ ನಾಲ್ಕನೇ ಸ್ತರದ ಜನವೂ ಸಹ, – 'ನಿಜ ! ನಾವು ಹೀಗಿರೋದು ನಮ್ಮ ಹಿಂದಿನ ಜನ್ಮದ ಕರ್ಮ. ನಮ್ಮ ಹಣೇ ಬರೆಹ ! ಈ ಜನ್ಮದಲ್ಲಿ ನಮ್ಮ ಕರ್ಮವನ್ನು ನೀಗಿಕೊಂಡರೆ, ಮುಂದಿನ ಜನ್ಮದಲ್ಲಾದರೂ ಸುಖಪಡಬಹುದು' ಈ ರೀತಿಯಾಗಿ ತಮ್ಮನ್ನು ತಾವೇ ಮರುಳುಮಾಡಿಕೊಳ್ಳತೊಡಗಿದರು....

"ನೋಡಿ ಸ್ವಾಮೀಜೀ, ಈ ಕರ್ಮಸಿದ್ಧಾಂತವನ್ನು ಜನತೆಯ ಮನಸ್ಸಿನಾಳದಲ್ಲಿ ಹೇಗೆ ಬಿತ್ತಿದರೆಂದರೆ, ಹೇಳತೊಡಗಿದರೆ – ಅದೇ ಒಂದು ಉದ್ಗ್ರಂಥವಾಗುತ್ತದೆ. ಇರಲಿ – ಮುಂದೇನಾಯಿತು ನೋಡಿ ....

"ಪರಕೀಯರ ದಾಳಿಗೆ ಮೇಲಿಂದ ಮೇಲೆ ನಮ್ಮ ದೇಶ ತುತ್ತಾಯಿತು. ಒಟ್ಟಿನಲ್ಲಿ ನಮ್ಮಲ್ಲಿನ ಅನೈಕ್ಯಮತ್ಯವೇ ನಮ್ಮನ್ನೀ ಸ್ಥಿತಿಗೆ ತಂದಿಟ್ಟಿದೆ.

"ಆದರೆ ಒಂದು ಮಹತ್ತರ ಕ್ರಾಂತಿ ಈ ದೇಶದಲ್ಲಿ ನಡೆಯಿತು. ಅದೂ ನಮ್ಮ ಕರ್ನಾಟಕದಲ್ಲಿ, ಎಂಟುನೂರು ವರ್ಷಗಳ ಹಿಂದೆ ನಡೆಯಿತು. ಜಗತ್ತಿನಲ್ಲಿ ಎಷ್ಟೋ ಕ್ರಾಂತಿಗಳು ನಡೆದಿವೆ. ಆದರೆ ಅವೆಲ್ಲ ಬಹುತೇಕ ರಕ್ತಕ್ರಾಂತಿಗಳು. ಅಂದು ನಮ್ಮ ಕರ್ನಾಟಕದಲ್ಲಿ ನಡೆದ ಕ್ರಾಂತಿ – ಹಲವು ಮುಖಗಳ ಕ್ರಾಂತಿ ಪರಿವರ್ತನೆಯ ಕ್ರಾಂತಿ ; ಅದುವರೆಗಿನ ಜನತೆಯ ಹೀನಸ್ಥಿತಿಯನ್ನು ಉನ್ನತ ಸ್ಥಿತಿಗೇರಿಸಿದ ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ರಾಜಕೀಯ ಕ್ರಾಂತಿ ! ಈ ಕ್ರಾಂತಿಯ ನಾಯಕ ಬಸವಣ್ಣನವರು.

ಒಂದು ವಿಷಯವನ್ನು ನಾವು ಮುಖ್ಯವಾಗಿ ಗಮನಿಸಬೇಕು.

ಬಸವಣ್ಣ ಮತ್ತು ಆತನ ಅನುಯಾಯಿಗಳಾದ ಶರಣರು – ಮೊಟ್ಟಮೊದಲ ಕ್ರಾಂತಿ ಎಸಗಿದ್ದು ಯಾವುದು ಗೊತ್ತೇ ? ಅಕ್ಷರ ಕ್ರಾಂತಿ ! ಸಾವಿರಾರು ವರ್ಷಗಳಿಂದ ಅಜ್ಞಾನದಲ್ಲಿ, ಮೌಢ್ಯದಲ್ಲಿ, ಕರ್ಮಸಿದ್ಧಾಂತದ ಪಂಜರದಲ್ಲಿ ನರಳುತ್ತಿದ್ದ ಅಸಂಖ್ಯಾತ ಕೆಳಸ್ತರದ ಜನರಿಗೆ ವಿದ್ಯೆ ಲಭಿಸುವಂತಾದುದೇ ಮೊಟ್ಟಮೊದಲು ಶಿವಶರಣರು ಮಾಡಿದ ಕ್ರಾಂತಿ.

ಅಸಂಖ್ಯಾತ ವಚನಕಾರರನ್ನು ಗಮನಿಸಿ – ಡೋಹರ, ಮೇದಾರ, ಅಂಬಿಗ, ಚಮ್ಮಾರ, ಕಮ್ಮಾರ, ಮಡಿವಾಳ ಮುಂತಾದ ತೀರಾ ಕೆಳಸ್ತರದವರು ವಚನಗಳನ್ನು ರಚಿಸಿದ್ದಾದರೂ ಹೇಗೆ ? – ವಿದ್ಯೆಯ ಬೆಳಕು ಪಡೆದಿದ್ದರಿಂದಲೇ.

ಪುರುಷರಿಗೆ ಸರಿಮಿಗಿಲಾಗಿ ಅನೇಕ ಕೆಳಸ್ತರದ ಸ್ತ್ರೀಯರೂ ಸಹ ಅಮೋಘವಾದ, ಅನರ್ಘ್ಯವಾದ ವಚನಗಳನ್ನು ರಚಿಸಿದ್ದಾರೆ ! ಅದುವರೆಗೆ ಗಗನ ಕುಸುಮವಾದ ಸ್ತ್ರೀ-ಪುರುಷ ಸಮಾನತೆ, ಅಭಿವ್ಯಕ್ತಿ ಸ್ವಾತಂತ್ರ್ಯಗಳನ್ನು ಸ್ತ್ರೀಯರಿಗೆ ವಿದ್ಯೆಯ ಮೂಲಕವೇ ಒದಗಿಸಿ, ಬೌದ್ಧಿಕ ಕ್ರಾಂತಿ ಮಾಡಿದ್ದು ಬಸವಣ್ಣನವರ ಪ್ರಪ್ರಥಮ ಮಹತ್ತರ ಕ್ರಾಂತಿ !

ಕೆಳಸ್ತರದ ಸ್ತ್ರೀ ಪುರುಷರಿಗೆ ವಿದ್ಯೆ ಲಭಿಸಿದರೆ ಅವರು ಎಂಥ ವಿಚಾರಶೀಲರಾಗಬಹುದು, ಎಂಥ ಕರ್ತೃತ್ವಶಾಲಿಗಳಾಗಬಹುದು, ಎಂಥ ಧೀಮಂತರಾಗಬಹುದು ಎಂಬುದನ್ನು ಬಸವಣ್ಣನವರು ತೋರಿಸಿಕೊಟ್ಟರು !

ಆದರೆ ದುರ್ದೈವ !

ಈ ಮಹಾನ್ ಕ್ರಾಂತಿಪುರುಷ ಅಸ್ತಮಿಸುತ್ತಲೇ, ಮತ್ತೆ ಪುರೋಹಿತಷಾಹಿ ಅಟ್ಟಹಾಸ ಮಾಡತೊಡಗಿತು. ಜೊತೆಗೆ ಪರಕೀಯರ ನಿರಂತರ ದಾಳಿಗಳಿಗೆ ಈ ದೇಶ ತುತ್ತಾಗಿ, ಈ ದುರ್ದೆಸೆ ಮತ್ತೆ ಪ್ರಾಪ್ತವಾಗಿದೆ....

ಈಗ ಮತ್ತೆ ಬಸವಣ್ಣನವರಂತೆ ಅಪಾರ ಸಂಖ್ಯೆಯ ಅನಕ್ಷರಸ್ಥ, ಅಜ್ಞಾನ ಮೌಢ್ಯಗಳಲ್ಲಿ ತೊಳಲಾಡುತ್ತಿರುವ ಜನರನ್ನು ಉದ್ಧಾರಮಾಡುವುದು ಅತ್ಯಗತ್ಯ.

ಈ ಒಂದು ಮಹಾಮಣಿಹ ನಿಮಗಾಗಿ ಕಾಯುತ್ತಿದೆ.

ನೀವು ಒಂದು ಮಹಾನ್‌ಪೀಠದ ಜಗದ್ಗುರುಗಳಾಗಿದ್ದೀರಿ. ನೀವೊಬ್ಬರೇ ವಿದ್ವಾಂಸರಾದರೆ ಸಾಕೆ ? ಯೋಚಿಸಿ ನೋಡಿ.

ನೀವೊಂದು ದೀಪವಾಗಿ ಬೆಳಗಬೇಕೆನ್ನುತ್ತೀರೋ ? ಅಥವಾ ನಿಮ್ಮಿಂದ ಸಹಸ್ರಾರು ದೀಪಗಳು ಬೆಳಗಬೇಕೆನ್ನುತ್ತೀರೋ ? ಆಲೋಚನೆ ಮಾಡಿ ನೋಡಿ.

ಈ ದೇಶದ ಏಳು ಲಕ್ಷ ಹಳ್ಳಿಗಳಲ್ಲಿ ಬಡತನ-ಅಜ್ಞಾನಗಳು ತಾಂಡವಿಸುತ್ತವೆ. ಮೊದಲು ಈ ದೇಶದಲ್ಲಿ ನಮ್ಮ ಕರ್ನಾಟಕದಲ್ಲಿ ವಿದ್ಯಾ ಜ್ಯೋತಿ ಬೆಳಗಲಿ. ಅದು ನಿಮ್ಮಿಂದಲೇ ಬೆಳಗಲಿ.

ಗ್ರಾಮಾಂತರದ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ, ಆಧುನಿಕ ವಿದ್ಯೆಯನ್ನು ಪಡೆಯುವಂತೆ ಮಾಡಿ, ಸ್ವಾವಲಂಬಿಗಳನ್ನಾಗಿ ಮಾಡಿ. ವಿಚಾರಶೀಲರನ್ನಾಗಿ ಮಾಡಿ, ಭಾವೀ

ಭಾರತದ ಸತ್ಪ್ರಜೆಗಳನ್ನಾಗಿ ಮಾಡಿ. ಅದು ನೀವು ಮನಸ್ಸು ಮಾಡಿದರೆ ನಿಮ್ಮಿಂದ ಖಂಡಿತ ಸಾಧ್ಯವಾಗುತ್ತದೆ. ನಿಮ್ಮಲ್ಲಿ ಆ ಮಹತ್ತರ ಶಕ್ತಿ ನಿಕ್ಷಿಪ್ತವಾಗಿದೆ, ನಿಧಿಯಾಗಿ ಅಡಗಿದೆ. ಆ ಶಕ್ತಿಯನ್ನು ವಿಜೃಂಭಿಸುವಂತೆ ಮಾಡಿ... ಬಡಜನತೆಗೆ ಬೆಳಕು ನೀಡಿ. ಸಮಸ್ತ ಯುವಜನತೆಗೆ ಧೀಶಕ್ತಿಯನ್ನು ಕರುಣಿಸಿ..."

– ನಿರಂತರ ಗಂಗಾಪ್ರವಾಹದಂತೆ, ಶ್ರೀ ಗೌರೀಶಂಕರ ಸ್ವಾಮಿಗಳವರು ತಮ್ಮ ವಿಚಾರವಾಹಿನಿಯನ್ನು ಶ್ರೀ ಶಿವರಾತ್ರಿ ರಾಜೇಂದ್ರರ ವಿಶಾಲ ಮನೋಪಾತ್ರದಲ್ಲಿ ಓತಪ್ರೋತವಾಗಿ ಹರಿಯಬಿಟ್ಟರು.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ತರುಣ ಮನಸ್ಸು ಸಾವಿರಾರು ವರ್ಷಗಳ ಹಿಂದಕ್ಕೆ ಹರಿದು ಹೋಗಿ, ಶ್ರೀ ಗೌರೀಶಂಕರ ಸ್ವಾಮಿಗಳವರು ಚಿತ್ರಿಸಿದ ದಾರುಣ, ಕರುಣಾಜನಕ ಚಿತ್ರವನ್ನು ತನ್ನಲ್ಲಿ ಅಂಕಿತಗೊಳಿಸಿಕೊಂಡಿತು.

ಬಸವಣ್ಣನವರ ಕಾಲದ ಮಹೋನ್ನತ ಕ್ರಾಂತಿಯ ಕಾಂತಿ ಅಂತರಂಗದಲ್ಲೆಲ್ಲ ಪ್ರಶಾಂತವಾಗಿ ವ್ಯಾಪಿಸಿ, ನಿದನಿದಾನವಾಗಿ ಪ್ರಖರವಾಯಿತು.

"ಸ್ವಾಮೀಜಿಯವರೇ" – ಎಂದು ಶ್ರೀ ಗೌರೀಶಂಕರ ಸ್ವಾಮಿಗಳವರು ಮಾತನಾಡಲು ತೊಡಗುತ್ತಲೇ –

ಶ್ರೀ ರಾಜೇಂದ್ರ ಸ್ವಾಮಿಗಳವರು ಫಲಭರಿತ ಮಾಮರದಂತೆ ಝೋಂಪಿಸಿ, ತಮ್ಮೆದುರಿಗೆ ಗಂಭೀರ ಭಂಗಿಯಲ್ಲಿ ಕುಳಿತಿರುವ ಸ್ವಾಮಿಗಳವರ ಪದದ್ವಯಗಳಿಗೆ ಆನತಮಸ್ತಕರಾಗುತ್ತಿರು ವುದನ್ನು ಮನಗಂಡು ತಟ್ಟನೆ, ಅವರನ್ನು ತಡೆದು–

"ಆದಿ ಜಗದ್ಗುರು ಶಿವರಾತ್ರೀಶ್ವರರು ನಿಮ್ಮನ್ನು ಕೈಬಿಡುವುದಿಲ್ಲ. ನಾನೂ ಇಲ್ಲೊಬ್ಬರಿಗೆ ಮಾತು ಕೊಟ್ಟಿದ್ದೇನೆ. ನನ್ನ ಇಲ್ಲಿನ ಕರ್ತವ್ಯ ಮುಗಿಯುತ್ತಲೇ, ಮೈಸೂರಿಗೆ ಬರುತ್ತೇನೆ. ನಿಮ್ಮ ಜೊತೆಗಿರುತ್ತೇನೆ. ಶುಭಮಸ್ತು."

## ಹಸಿವಿಗನ್ನವನಿಕ್ಕಿದ ವಸುಧೆಯ ಗಾರುಡಿಗ

ಶ್ರೀ ಶಿವರಾತ್ರಿ ರಾಜೇಂದ್ರರ ಮನಸ್ಸಿನಲ್ಲಿ ತಳಮಳ, ಕಳವಳ, ಖಿನ್ನತೆಗಳು ತುಂಬಿ, ಮುಖದಲ್ಲಿ ವಿಷಣ್ಣಭಾವ ಅಡರಿಕೊಂಡಿರುತ್ತಿತ್ತು – ಚಿಂತನೆಯ ಫಲವಾಗಿ !

ಸಂಸ್ಕೃತ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ ಕುರಿತು ಯೋಚನೆ – ಮುಂದೆ ಇವರು ಸಮಾಜದಲ್ಲಿ ಏನು ಮಾಡಬೇಕು ? ಕೆಲವರು ಮಠದ ಸ್ವಾಮಿಗಳಾಗಬಹುದು. ತಾವು ಸಂಸ್ಕೃತದಲ್ಲಿ ಗಳಿಸಿದ ಪಾಂಡಿತ್ಯದಿಂದ ಬೋಧನೆ ಮಾಡುತ್ತಿರಬಹುದು ಅಥವಾ ಒಬ್ಬರೋ ಇಬ್ಬರೋ ಸಂಸ್ಕೃತ ಪಂಡಿತರಾಗಿ ಉಪಾಧ್ಯಾಯರಾಗಬಹುದು. ಎಲ್ಲರೂ ಉಪಾಧ್ಯಾಯರು, ಮಠಾಧಿಪತಿಗಳಾಗಲು ಸಾಧ್ಯವೇ ? ಪೌರೋಹಿತ್ಯ ಮಾಡಲು ಸಾಧ್ಯವೇ ? ಇವರ ಭವಿಷ್ಯ ಏನು ? ಇವರ ಜೀವನ ನಿರ್ವಹಣೆ ಎಂತು ?

ನಮ್ಮ ದೇಶ ಸಂಪೂರ್ಣವಾಗಿ ಬ್ರಿಟಿಷರ ಆಡಳಿತಕ್ಕೊಳಪಟ್ಟಿದೆ. ಬ್ರಿಟಿಷರು ಇಂಗ್ಲಿಷ್ ವಿದ್ಯಾಭ್ಯಾಸವನ್ನು ದೇಶಾದ್ಯಂತ ಜಾರಿಗೆ ತಂದಿದ್ದಾರೆ. ಇದಕ್ಕಾಗಿ ಶಾಲಾ ಕಾಲೇಜುಗಳನ್ನು ಸ್ಥಾಪಿಸಿದ್ದಾರೆ. ಪಟ್ಟಣವಾಸಿಗಳಿಗೆ, ನಗರವಾಸಿಗಳಿಗೆ, ಪ್ರೌಢಶಾಲೆ – ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಲು ಸಾಧ್ಯವಾಗಿದೆ. ಆದರೆ ಹಳ್ಳಿಗಾಡಿನ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಅನುಕೂಲಗಳೆಲ್ಲಿ ? ಹಳ್ಳಿಗಳಲ್ಲಿ ಪ್ರೌಢಶಾಲೆಗಳೆಲ್ಲಿ ? ಬೆರಳೆಣಿಕೆಯಷ್ಟು ಅನುಕೂಲಸ್ಥರ ಮಕ್ಕಳು ಪಟ್ಟಣ – ನಗರಗಳಿಗೆ ಬಂದು ಆಧುನಿಕ ವಿದ್ಯಾಭ್ಯಾಸವನ್ನು ಪಡೆಯಬಹುದು. ಆದರೆ ಗ್ರಾಮಾಂತರಪ್ರದೇಶದ ಅಸಂಖ್ಯಾತ ಮಕ್ಕಳ ಗತಿ ಏನು ? ಅವರ ಭವಿಷ್ಯವೇನು ? ಅವರ ಬದುಕು – ಸಾವಿರಾರು ವರ್ಷಗಳಿಂದ ಈ ದೇಶದಲ್ಲಿರುವ ಸೇವಾವೃತ್ತಿಯಲ್ಲಿಯೇ, ವಿದ್ಯಾವಿಹೀನರಾಗಿ ಕುಲಕಸುಬುಗಳಲ್ಲಿಯೇ ಕಳೆಯಬೇಕೆ ? ವ್ಯವಸಾಯ, ಕುಲಕಸುಬುಗಳು, ಗುಡಿಕೈಗಾರಿಕೆಗಳು, – ಇವುಗಳನ್ನೇ ಅವಲಂಬಿಸಿ ಪುರಾತನ ಜೀವನ ಶೈಲಿಯಲ್ಲಿಯೇ – ಗೂಟಕ್ಕೆ ಕಟ್ಟಿದ ಎಮ್ಮೆಗಳಂತೆ ಜೀವಿಸಬೇಕೆ ? ಇವರಲ್ಲಿರುವ ಪ್ರತಿಭೆ, ಕರ್ತೃತ್ವಶಕ್ತಿ, ರಚನಾತ್ಮಕ ಬುದ್ಧಿಮತ್ತೆ ಅರಳುವ ಅವಕಾಶವೇ ಇಲ್ಲವೇ ? ಮೊದಲ ಜಾಗತಿಕ ಯುದ್ಧವಾದ ಮೇಲೆ ಜಗತ್ತಿನ ಅನೇಕ ದೇಶಗಳು ಪ್ರಗತಿಪಥದಲ್ಲಿ ಧಾವಿಸುತ್ತಿವೆ. ನಮ್ಮ ದೇಶ ಹೀಗೇ ಇರಬೇಕೇ ? ನಮ್ಮ ದೇಶದ ತರುಣರು ಜೀತದಾಳುಗಳಂತೆ ಗಾಣದ ಕೋಣಗಳಂತೆ ಹೇರು ಹೊರುವ ಗಾರ್ದಭಗಳಂತೆ, ಉಳ್ಳವರ ಸೇವಕರಾಗಿಯೇ ಬಾಳಬೇಕೇ ?

ಇವರಿಗೆ ವಿದ್ಯೆ ಕಲಿಯುವ ಸದವಕಾಶಗಳನ್ನು ಕಲ್ಪಿಸಿದರೆ ಎಂತೆಂಥ ಪ್ರತಿಭೆಗಳು ಉಜ್ವಲವಾಗಿ ಬೆಳಗಲಿಕ್ಕಿಲ್ಲ !

ಏನಾದರೂ ಮಾಡಬೇಕು – ಇವರಿಗಾಗಿ ನಾನು ಏನಾದರೂ ಮಾಡಬೇಕು.... ಅದಮ್ಯ ವಿದ್ಯಾಕಾಂಕ್ಷೆಯಿಂದ ಬಡತನದ ಬೇಗೆಯಲ್ಲಿ ಬೇಯುತ್ತಿದ್ದರೂ, ಕೆಲವರಾದರೂ ವಿದ್ಯಾರ್ಥಿಗಳು ವಾರಾನ್ನದಿಂದ, ಅವರಿವರ ಸಹಾಯದಿಂದ, ಯಾರಯಾರದೋ ಮನೆಗಳ ಜಗುಲಿಯ ಮೇಲೆ ವಾಸಿಸುತ್ತ, ಬೀದಿ ದೀಪದ ಬೆಳಕಿನಲ್ಲಿ ಓದುತ್ತಿರುವುದಾಗಿ ಕಾಲೇಜಿನಲ್ಲಿ ಓದುತ್ತಿರುವ ಕೆಲವು ಯುವಕರು ತಮಗೆ ಹೇಳಿದ್ದನ್ನು ಕೇಳಿ ಶ್ರೀ ಶಿವರಾತ್ರಿ ರಾಜೇಂದ್ರರು ಅಂಥವರಿಗಾಗಿ ಮರುಗಿದರು, ಅವರ ದೃಢ ಚಿತ್ತಕ್ಕಾಗಿ ಮನದಲ್ಲೇ ಅವರನ್ನು ಮೆಚ್ಚಿಕೊಂಡರು, ಅವರನ್ನು ಅಭಿನಂದಿಸಿದರು. ತುಂಬ ಜಾಣರಾದ ಕೆಲವು ವಿದ್ಯಾರ್ಥಿಗಳು ಫೀಜು ಕಟ್ಟಲಾರದೆ ಮಧ್ಯ ದಲ್ಲಿಯೇ ವಿದ್ಯಾಭ್ಯಾಸವನ್ನು ತುಂಡರಿಸಿ ತಮ್ಮ ತಮ್ಮ ಊರುಗಳಿಗೆ ಹೋದರು ಎಂಬ ದಾರುಣ ವಾರ್ತೆಯನ್ನು ಕೇಳಿ ಮಮ್ಮಲ ಮರುಗಿದರು, ಚಿಂತಿಸಿದರು ; ಅವರ ಪ್ರಗತಿಯ ಕುರಿತು ಚಿಂತನೆ ನಡೆಸತೊಡಗಿದರು.

ಆದ್ದರಿಂದಲೇ ಅವರ ಮನಸ್ಸಿನಲ್ಲಿ ಕಳವಳ, ತಳಮಳ, ಮುಖದಲ್ಲಿ ವಿಷಣ್ಣಭಾವ, ಖಿನ್ನತೆಗಳು ಆವರಿಸಿದುವು.....

ಈ ಕಳವಳ, ತಳಮಳ, ವಿಷಣ್ಣಭಾವ, ಖಿನ್ನತೆಗಳು ಎಲ್ಲ – ನಡೆದ ಒಂದು ಅನಿರೀಕ್ಷಿತ ಘಟನೆಯಿಂದ ತೊಲಗಿ ಹೋಗಿ, ಮನದಲ್ಲಿ ವಜ್ರದಂಥ ದೃಢ ನಿರ್ಧಾರ ಏರ್ಪಟ್ಟಿತು –

ಒಂದು ದಿನ ಸಂಸ್ಕೃತ ಪಾಠಶಾಲೆಯ – ಉಚಿತ ವಿದ್ಯಾರ್ಥಿನಿಲಯದ ಕಾರ್ಯನಿಮಿತ್ತ ಎಲ್ಲಿಗೋ ಹೋಗಿದ್ದ ಶ್ರೀ ಶಿವರಾತ್ರಿ ರಾಜೇಂದ್ರರು ಹಿಂತಿರುಗಿ ಬಂದಾಗ – ಸಂಸ್ಕೃತ ಪಾಠಶಾಲೆಯ ಎದುರುಗಡೆಯಲ್ಲಿರುವ ಅರಳಿಮರದ ಸುತ್ತುಕಟ್ಟೆಯ ಮೇಲಿನ ಗಣಪತಿಯ ಪುಟ್ಟ ದೇವಾಲಯದ ಮುಂದೆ ಯಾರೋ ಒಬ್ಬ ತರುಣ ಮುಲುಕುತ್ತ ಮಲಗಿದ್ದುದನ್ನು ಕಂಡರು. ಒಳಹೋದರು. ಎಷ್ಟೋ ಹೊತ್ತು ನಿಲಯದ ಕೆಲಸದಲ್ಲಿ ಮಗ್ನರಾಗಿಬಿಟ್ಟರು. ಇದ್ದಕ್ಕಿದ್ದಂತೆ ತಟ್ಟನೆ ನೆನಪಿಗೆ ಬಂದಿತು –

ಧಿಡಗ್ಗನೆ ಎದ್ದವರೇ ಹೊರಗೋಡಿ ಬಂದರು. ಅರಳಿಮರದ ಸುತ್ತುಕಟ್ಟೆಯತ್ತ ನೋಡಿದರು. ಆ ತರುಣ ಸಣ್ಣದಾಗಿ ಅಳುತ್ತ, ನಡುಗುತ್ತ, ಬಿದ್ದಲ್ಲಿಯೇ ನರಳುತ್ತ ಬಿದ್ದಿರುವುದು ಕಂಡು 'ಛೆ ! ಎಂಥ ಕೆಲಸವಾಯಿತು ! ಆಗಲೇ ಅವನನ್ನ ಒಳಗೆ ಕರೆದುತರಬೇಕಾಗಿತ್ತು' – ಎಂದು ಕರುಳು ಕತ್ತರಿಸಿದಂತಾಗಿ, ಅಲ್ಲಿಗೆ ಧಾವಿಸಿ ಹೋಗಿ, ಅವನ ಹಣೆ ಮುಟ್ಟಿದರು – ಕಾದ ಹೆಂಚಾಗಿತ್ತು. ಕೂಡಲೇ ಒಂದಿಬ್ಬರು ವಿದ್ಯಾರ್ಥಿಗಳನ್ನು ಕೂಗಿ ಕರೆದು, ಅವನನ್ನು ಜಾಗರೂಕತೆಯಿಂದ, ನಡೆಸಿಕೊಂಡು ನಿಲಯದ ಒಂದು ಕೋಣೆಯಲ್ಲಿ ಮಲಗಿಸಲು ಹೇಳಿದರು. ಕೂಡಲೇ ಅಡುಗೆ ಶಿವಣ್ಣನಿಗೆ ರವೆಗಂಜಿ ಮಾಡಲು ಹೇಳಿದರು, ಮೊದಲು ಒಂದು ಬಟ್ಟಲಲ್ಲಿ ತಣ್ಣೀರು ತರ ಹೇಳಿದರು.

ತಣ್ಣೀರಲ್ಲಿ, ತಾವು ಹೊದ್ದ ಕಾವಿ ವಸ್ತ್ರದ ತುದಿಯನ್ನು ಹಿಡಿ ಮಾಡಿ ಮುಳುಗಿಸಿ, ಹೆಚ್ಚಿನ ನೀರನ್ನು ಹಿಂಡಿ, ಒದ್ದೆಬಟ್ಟೆಯಿಂದ ಅವನ ಹಣೆ ಕಣ್ಣು ಮುಖಗಳನ್ನು ಮೃದುವಾಗಿ ಒರೆಸಿದರು. ಅವನ ಹಣೆಯ ಮೇಲೆ ತಮ್ಮ ಹಸ್ತವಿರಿಸಿ, ನೇವರಿಸಿದರು. ಒದ್ದೆಬಟ್ಟೆ ಹಾಕಿದರು. ಒದ್ದೆಬಟ್ಟೆ ಬದಲಾಯಿಸಿದರು.

ರವೆಗಂಜಿ ಬರುತ್ತಲೇ, ಇಬ್ಬರು ವಿದ್ಯಾರ್ಥಿಗಳ ಆಸರೆಯಲ್ಲಿ ಅವನನ್ನು ಏಳಿಸಿ, ಕುಳ್ಳಿರಿಸಿ, ಬಿಸಿ ಬಿಸಿ ಗಂಜಿಯನ್ನು ತಾವೇ ಕುಡಿಸಿದರು. ಹಳೇ ಅಗ್ರಹಾರದಲ್ಲಿರುವ ವೈದ್ಯರೊಬ್ಬರನ್ನು ಕರೆತರಲು ಕಳಿಸಿದ ವಿದ್ಯಾರ್ಥಿ ವೈದ್ಯರೊಂದಿಗೆ ಬಂದ. ವೈದ್ಯರು ಪರೀಕ್ಷಿಸಿ ಔಷಧಿ ಕೊಟ್ಟರು – ಮತ್ತೆ ತಮ್ಮ ಜೊತೆಯಲ್ಲಿ, ಕರೆತರಲು ಬಂದ ವಿದ್ಯಾರ್ಥಿಯನ್ನು ಹಿಂದಿಟ್ಟುಕೊಂಡು ಹೋಗಿ, ತಮ್ಮಲ್ಲಿದ್ದ ಸೀಸೆಯಲ್ಲಿ ಗುಲಾಬಿ ಬಣ್ಣದ ಔಷಧಿ ದ್ರವವನ್ನು ಕಳಿಸಿಕೊಟ್ಟರು.

ಗಂಜಿ ಕುಡಿಸಿ, ಸ್ವಲ್ಪ ಹೊತ್ತಾದ ಮೇಲೆ, ಔಷಧಿ ಕುಡಿಸಿ, ಮತ್ತಿಷ್ಟು ಉಳಿದ ಗಂಜಿಯನ್ನು ಕುಡಿಸಿ, ಚಾಪೆಯ ಮೇಲೆ ಮಲಗಿಸಿದರು. ಆ ಕೋಣೆಯಲ್ಲಿದ್ದ ಒಂದು ಕಂಬಳಿಯನ್ನು ಹೊದಿಸಿದರು. ಪಕ್ಕದಲ್ಲಿಯೇ ಕುಳಿತರು – ಆಗಾಗ ಅವನ ಬೆವರುವ

ಹಣೆಯನ್ನು ತಾವು ಧರಿಸಿದ ಕಾವಿಬಟ್ಟೆಯಿಂದ ಒರೆಸುತ್ತ, ಅವನ ಬೆನ್ನು, ತಲೆ ನೇವರಿಸುತ್ತ ಕುಳಿತೇ ಇದ್ದರು....

ಎಷ್ಟೋ ಹೊತ್ತಾದ ಮೇಲೆ, ಆ ತರುಣನ ಮೈಯೆಲ್ಲಾ ಬೆವರಿತು. ಏದುಸಿರು ಇಲ್ಲದಾಗಿತ್ತು. ನಿದಾನವಾಗಿ ಕಣ್ಣರಳಿಸಿ ನೋಡಿದ – ಎದುರಿಗೆ ಸ್ವಾಮೀಜಿಯವರನ್ನು ಕಂಡು ಧಿಗ್ಗನೆ ಎದ್ದು ಕುಳಿತ, ಶಿರಬಾಗಿ ಅವರ ಪಾದಗಳಿಗೆ ನಮಸ್ಕರಿಸಿದ. ಶ್ರೀ ಪಾದಗಳ ಮೇಲೆ ಬಿಸಿ ಕಣ್ಣೀರು ಉದುರಿತು. ಕೂಡಲೇ ಶ್ರೀಗಳವರು –

"ಛೇ ಹುಚ್ಚಪ್ಪಾ ! ಇಷ್ಟಕ್ಕೆಲ್ಲಾ ಅಳ್ತಾರೈ ? ಜ್ವರ ಬಿಟ್ಟುಹೋಯ್ತು. ಹುಷಾರಾಗಿ ದೀಯೆ. ಅಳಬೇಡ."

ಅಳುತ್ತ ಅಳುತ್ತ ಅವನು 'ನನ್ನ ಪುಸ್ತಕಗಳು' – ಎಂದು ಬಿಕ್ಕಿದ. ಅವನೊಂದಿಗೆ ಒಳಗೆ ತರಿಸಿಟ್ಟಿದ್ದ ಅವನ ಚಿಕ್ಕ ಬಟ್ಟೆಗಂಟನ್ನು ಅವನ ಮುಂದಿರಿಸಿ, ಬಿಚ್ಚಿ ನೋಡಿದರು – ಎರಡು ಪಠ್ಯಪುಸ್ತಕಗಳು, ಒಂದು ನೋಟುಬುಕ್ಕು, ಒಂದು ಹರಿದ ಅಂಗಿ – ಇಷ್ಟೆ !

"ನಾನು ಅಮ್ಮನ್ನ ನೋಡಬೇಕು. ನಾ ಊರಿಗೆ ಹೋಗ್ಬೇಕು..."

ಅವನು ಮಧ್ಯೆ ಮಧ್ಯೆ ಅಳುತ್ತ ಹೇಳಿದ್ದಿಷ್ಟು –

ಅವನ ತಂದೆ ತೀರಿಕೊಂಡಿದ್ದರು. ತೀರಾ ಬಡತನ. ಈಗ ತಾಯಿ ಹಳ್ಳಿಯಲ್ಲಿ ಸಾಹುಕಾರನೊಬ್ಬನ ಮನೆಯಲ್ಲಿ ಕಸ-ಮುಸುರೆ ಕೆಲಸ, ಅಲ್ಲಿ ಇಲ್ಲಿ ಕೂಲಿ ಕೆಲಸ ಮಾಡಿ ಸಂಸಾರ ನಿರ್ವಹಿಸುತ್ತಿದ್ದಾಳೆ. ಶಾಲೆಯಲ್ಲಿನ ಮೇಷ್ಟ್ರು, ನೀನು ಬುದ್ಧಿವಂತ, ನೀನು ಚೆನ್ನಾಗಿ ಓದು, ಮೈಸೂರಿಗೆ ಹೋಗು. ಮುಂದೆ ಬರ್‍ತೀಯೆ ಎಂದು ಪ್ರೋತ್ಸಾಹಿಸಿದ್ದರು. ತಾಯಿ, ಬಡವರಾದ ನಮಗೆ ವಿದ್ಯೆ ಯಾಕೆ ಮಗೂ ? ಮೈಸೂರಿನಲ್ಲಿ ಓದೋದಂದ್ರೆ ಆಗದ – ಹೋಗದ ಮಾತು. ಬೇಡ ಕೂಸು' ಎಂದು ಅಂಗಲಾಚಿದ್ದರೂ ಹಟಮಾಡಿ ಬಂದುಬಿಟ್ಟ. ಮೂರು-ನಾಲ್ಕು ಮನೆಯವರು ವಾರಾನ್ನಕ್ಕೆ ಒಪ್ಪಿದರು. ಒಬ್ಬರು ತಮ್ಮ ಮನೆಯ ಹೊರ ಕೋಣೆ ಯಲ್ಲಿರಲು ಅವಕಾಶ ಮಾಡಿಕೊಟ್ಟರು.

ಆದರೆ ಅವರಿಗೆ ದೂರದ ಊರಿಗೆ ವರ್ಗಾ ಆಯಿತು. ನಿರಾಶ್ರಿತನಾದ. ಕಂಡಕಂಡವರ ಮನೆ ಜಗುಲಿಯ ಮೇಲೆ ಕಾಲ ಕಳೆದ. ಬೀದಿದೀಪದ ಬೆಳಕಿನಲ್ಲಿ ಓದು. ಯಾರೋ ಕಳ್ಳ ತನ್ನ ಹೊದಿಕೆಯನ್ನು ಕದ್ದುಬಿಟ್ಟ. ಒಂದು ವಾರಾನ್ನದ ಮನೆ ತಪ್ಪಿಹೋಯ್ತು. ವಾರದಲ್ಲಿ ಮೂರು ದಿನ ಉಪವಾಸ, ಒಮ್ಮೊಮ್ಮೆ ಕಳ್ಳೆಕಾಯಿ, ನಲ್ಲಿ ನೀರು ! ಒಮ್ಮೊಮ್ಮೆ ಕಾಸಿದ್ದಾಗ ಕಳ್ಳೆ-ಪುರಿ, ನಲ್ಲಿ ನೀರು, ಈಗ ಎರಡು ದಿನಗಳಿಂದ ಏನೂ ಇಲ್ಲ...

"ನಾನಿಲ್ಲಿರೊಲ್ಲ, ನನಗಿನ್ನು ಓದು ಸಾಕು, ನಮ್ಮಮ್ಮನ್ನ ನೋಡ್ಬೇಕು. ನಿನ್ನೆ ಕನಸಿನಲ್ಲಿ ಅಮ್ಮ – ಅಮ್ಮ–"

– ಹೋ ಎಂದು ಅತ್ತ – ಅಳುತ್ತ, "ತೀರಿಕೊಂಡ್ಲು !" – ಎಂದ.

ದಯವಿಟ್ಟು ನನ್ನ ಊರಿಗೆ ಕಳಿಸಿಕೊಡಿ. ನಾನು ಅಮ್ಮನ್ನ ನೋಡ್ಬೇಕು.

– ಶ್ರೀಗಳವರ ಕಣ್ಣುಗಳಲ್ಲಿ ನೀರು ಉಕ್ಕಿ ಹರಿಯಿತು. ಎದುರುಗಡೆಯಿದ್ದ ವಿದ್ಯಾರ್ಥಿಗಳಿಬ್ಬರೂ ಅಳಲು ತೊಡಗಿದರು.

"ಏಯ್ ಬೇಗ ಹೋಗಿ, ಒಂದು ಜಟ್ಕಾ ತಗೊಂಡ್ಬಾ ಹೋಗು"

– ಆ ತರುಣನಿಗೆ ಹಣ ಕೊಟ್ಟು, "ನೀನು ಮತ್ತೆ ಮೈಸೂರಿಗೆ ಬಂದು ಓದು. ನಾವು ನಿನಗೆ ಸಹಾಯ ಮಾಡ್ತೀವಿ" ಎಂದುದಕ್ಕೆ ಅವನು ತಲೆಯಾಡಿಸಿದ.

ಷಾಪಸಂದ್ ಬರುತ್ತಲೆ, ಹಲವಾರು ವಿದ್ಯಾರ್ಥಿಗಳು ಹೊರ ಬಂದರು.

ಶ್ರೀಗಳವರು ಅವನ ಜೊತೆಗೆ ಅದೇ ಇಬ್ಬರು ವಿದ್ಯಾರ್ಥಿಗಳನ್ನು ಕಳಿಸಿದರು. ಅವರು ಷಾಪಸಂದ್‌ನಲ್ಲಿ ಕುಳಿತುಕೊಳ್ಳುತ್ತಲೆ, ಹುಡುಗರೆಲ್ಲ

'ಓಹೋ ! ಮದುವೆಗಂಡು ನೋಡ್ರೋ !'

– ಎಂದು ಸಂತೋಷದಿಂದ ಕೇಕೆಹಾಕಿದರು.

ಆ ಕಾಯಿಲೆ ತರುಣನೂ ನಕ್ಕ !.....

ಆ ದಿನ ರಾತ್ರಿ ಶ್ರೀಗಳವರು ಪೂಜಾಗೃಹ ಪ್ರವೇಶಿಸಿದವರು ಮಧ್ಯರಾತ್ರಿಯಾದರೂ ಹೊರಬರಲಿಲ್ಲ. ಸಾಂಗವಾಗಿ ಪೂಜೆ ಮುಗಿಸಿಯೂ, ಹಾಗೆಯೇ ಇಷ್ಟಲಿಂಗವನ್ನು ನೋಡುತ್ತಾ, ಚಿತ್ರಿತ ವ್ಯಕ್ತಿಯಂತೆ ಕುಳಿತೇ ಇದ್ದರು. ತದೇಕಚಿತ್ತದಿಂದ, 'ಶಿವರಾತ್ರೀಶಾ ! ಶಿವರಾತ್ರೀಶಾ!' – ಎಂದು ನಾಮಸ್ಮರಣೆ ಮಾಡುತ್ತಲೇ ಇದ್ದರು....

"ಸಂಸ್ಕೃತ ಪಾಠಶಾಲೆ – ಉಚಿತ ವಿದ್ಯಾರ್ಥಿನಿಲಯದ ಹೊಣೆ ಹೊತ್ತಂದಿನಿಂದಲೇ ಶ್ರೀ ರಾಜೇಂದ್ರ ಸ್ವಾಮಿಗಳವರಿಗೆ ಬಡತನ ಮತ್ತು ದಾರಿದ್ರ್ಯಗಳ ನೇರ ಪರಿಚಯ ಅವರಿಗಾದುದೆನ್ನಬೇಕು. ಅವರದು ಬಹು ಸೂಕ್ಷ್ಮ ಮನಸ್ಸು. ಅವರು ತರುಣರೇ ಆಗಿದ್ದರೂ ಅಂದರೆ ಇನ್ನೂ ಚಿಕ್ಕ ವಯಸ್ಸಿನವರೇ ಆಗಿದ್ದರೂ ಅವರ ಹೃದಯದ ತುಂಬ ದಯೆ, ಕರುಣೆ ಮತ್ತು ವಾತ್ಸಲ್ಯಗಳೇ ತುಂಬಿದ್ದುವು. ಬಡವ ಮತ್ತು ನಿರ್ಗತಿಕ ವಿದ್ಯಾರ್ಥಿಗಳೆಂದರೆ ಅವರ ಮನಸ್ಸು ತುಡಿಯುತ್ತಿತ್ತು. ಅಂಥವರಿಗಾಗಿ ಅವರು ಏನು ತ್ಯಾಗ ಮಾಡಲೂ ಸಿದ್ಧರಿದ್ದರು. ಇದನ್ನೆಲ್ಲಾ ನಾನು ಅಲ್ಲಿದ್ದುಕೊಂಡು ಅವರು ವಿದ್ಯಾರ್ಥಿಗಳ ಕ್ಷೇಮಪಾಲನೆಯನ್ನು ನೋಡಿ ಕೊಳ್ಳುತ್ತಿದ್ದ ರೀತಿಯಿಂದಲೇ ಅರ್ಥಮಾಡಿಕೊಳ್ಳುತ್ತಿದ್ದೆ.

"ಕ್ಯಾತನಹಳ್ಳಿ ಪಾಠಶಾಲೆಯಲ್ಲಿ ಪರಿಸ್ಥಿತಿ ಬಿಗಡಾಯಿಸಿದ್ದರಿಂದ, ಕಿರಿಯ ಶ್ರೀಗಳವರನ್ನು ಹಾಗೂ ಶ್ರೀ ಶಿವಪ್ರಭುಸ್ವಾಮಿಗಳನ್ನು – ಇವರ ವಿದ್ಯಾಭ್ಯಾಸಕ್ಕಾಗಿ ಹಿರಿಯ ಶ್ರೀಗಳವರು ಬೇರೊಂದು ಬಾಡಿಗೆ ಮನೆ ಗೊತ್ತುಮಾಡಿ, ಅಲ್ಲಿರಿಸಿದ್ದರು. ಇವರಿದ್ದ ಕಡೆಗೆ ಊಟಕ್ಕೆ ಬರುವ ವಿದ್ಯಾರ್ಥಿಗಳಿಗೇನೂ ಕಡಿಮೆಯಾಗಲಿಲ್ಲ. ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಮೇಲೆ ಹೆಚ್ಚಿನ ಹೊರೆ ಬಿದ್ದಿತು. ಆದರೆ ಇದನ್ನೆಲ್ಲ ತಿಳಿಸಿ ಮಠದಿಂದ ಹೆಚ್ಚಿನ ಸಹಾಯವನ್ನು ಕೇಳುವಂತೆಯೂ ಇಲ್ಲ..."

* * *

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರ ಅಂತರಂಗದಲ್ಲಿ ಬಗೆಬಗೆಯ ಯೋಚನೆಗಳು – ಯೋಜನೆಗಳು ! ಕೆಲವು ಕಾರ್ಯರೂಪಕ್ಕೆ ಬರಲಾರದಂಥ ಯೋಜನೆಗಳು ! ಆದರೂ ಹೇಗಾದರೂ ಮಾಡಿ ವಿದ್ಯಾರ್ಥಿಗಳಿಗೆ ನೆರವಾಗಲೇಬೇಕು. ಹೇಗೆ ? ಹೇಗೆ ? ಶಿವರಾತ್ರೀಶಾ ! ಶಿವರಾತ್ರೀಶಾ ! ಆ ರಾತ್ರಿ ನಿದ್ರೆಯಿಲ್ಲದೆ ಶಿವರಾತ್ರೀಶ್ವರರ ಧ್ಯಾನ, ಧ್ಯಾನ, ಧ್ಯಾನ...

ಜೊಂಪು ಹತ್ತಿದಂತೆ ಭಾಸ... ತಟ್ಟನೆ ಎಚ್ಚರ...

ಎದ್ದು ಕುಳಿತರು ! ಏಕೋ ಕೈ ಚಿನ್ನದ ಕರಡಿಗೆಯನ್ನು ಭದ್ರವಾಗಿ ಹಿಡಿದುಕೊಂಡಿತು ; ಅದನ್ನು ಕಣ್ಣುಗಳಿಗೆ ತಾಕಿಸಿ ಓಂ ನಮಃ ಶಿವಾಯ ಎಂದು ಜಪಿಸಿದರು !

ಕೊರಳಲ್ಲಿನ ಚಿನ್ನದ ಕವಚಗಳು ಹೊಂದಿಸಿದ ರುದ್ರಾಕ್ಷಿ ಸರದ ಮೇಲೆ ಬೆರಳುಗಳಾಡಿದುವು.... ಕರಡಿಗೆಯನ್ನು ಯಥಾ ಸ್ಥಾನಕ್ಕೆ ಸೇರಿಸಿ. ಕೊರಳೊಳಗಿನ ರುದ್ರಾಕ್ಷಿ ಸರವನ್ನು ಹೊರತೆಗೆದು ನೋಡಿದರು, ನೋಡಿಯೇ ನೋಡಿದರು – ಒಂದೊಂದು ರುದ್ರಾಕ್ಷಿಯ ಮೇಲಿ ರುವ ಚಿನ್ನದ ಹೊದಿಕೆಯನ್ನು, ರುದ್ರಾಕ್ಷಿಗಳನ್ನು ಪೋಣಿಸಿದ ಬಂಗಾರದ ಎಳೆಯನ್ನು!

"ನಿನ್ನ ನಾನೇನ ಬೇಡಲಿ ದೇವಾ ಕೊಡಲೆನಗೆ
ನಿನ್ನೊಳೇನುಂಟು ಅದೆಲ್ಲವ ನಾನೆ ತಿಳಿದು
ನಿನ್ನ ನಾನೇನ ಬೇಡಲಿ ದೇವಾ !
ಅರಮನೆಯ ಬೇಡಿಕೊಂಬೆನೆ ಪಿತೃವನಭೂಮಿ !
ಪರಿಚಾರಕರನು ಬೇಡುವೆನೆ ಭೂತಗಣವು !
ತುರುಗವನು ಬೇಡುವೆನೆ ಬಲುದಿನದಾ ಮುದಿ ಎತ್ತು !..."

– ಜಗದೀಶ – ಭೋಳಾ ಶಂಕರ – ಬೂದಿ ಬಡುಕ ಶಂಕರ ! ...

ಜಗದೀಶನೇ, ಹೌದು. ಆದರೆ ಆತನಲ್ಲಿ ಧನ-ಕನಕವಿಲ್ಲ, ಏನೇನೂ ಇಲ್ಲ. ಇಂಥ ಜಗದೀಶನ ಅಕ್ಷಿಗಳಿಂದ ಉದ್ಭವಿಸಿದ ರುದ್ರಾಕ್ಷಿಗಳಿಗೆ ಚಿನ್ನದ ಕವಚ ! ಇಂಥ ಜಗದೀಶನಿಗೆ ಚಿನ್ನದ ಕರಡಿಗೆ !

ಎಂಥ ಅಪಚಾರ ! ಎಂಥ ದುರಹಂಕಾರ ! ಎಂಥ ಧನಮದ – ನಮ್ಮದು !

ಮರುದಿನ ಚಿನ್ನದ ಕವಚಗಳನ್ನು ಕಳಚಿ, ಬೆರಳಲ್ಲಿ ಧರಿಸಿದ ಉಂಗುರವನ್ನು ಮಾರಿ ಬಂದ ಹಣದಿಂದ – ಈಗಿನ ನಂಜುಮಳಿಗೆಯ ವೃತ್ತದ ಹತ್ತಿರವಿರುವ ಆರ್.ಪಿ. ಮಲ್ಲಪ್ಪನವರ ಬಂಗಲೆಗೆ ಪೂರ್ವದ ಕಡೆಗೆ, ಪಕ್ಕದಲ್ಲಿರುವ ಅರಸುರವರ ಮನೆಯನ್ನು ಬಾಡಿಗೆಗೆ ಪಡೆದು, ಕೆಲವು ಅಲ್ಯೂಮಿನಿಯಮ್ ಪಾತ್ರೆಗಳನ್ನು, ಮಣ್ಣಿನ ಮಡಕೆಗಳನ್ನು ಅಡುಗೆಗಾಗಿ ಕೊಂಡು ತರಿಸಿದರು...

* * *

ವಿದ್ಯಾರ್ಥಿನಿಲಯಗಳ ಕಾರ್ಯಕ್ಕಾಗಿ ಆಗಾಗ ಬೆಂಗಳೂರಿಗೆ ಹೋಗುತ್ತಿದ್ದರು. ಆಗ ಅಲ್ಲಿನ ಯಾವುದಾದರೂ ಮಠದಲ್ಲಿ ಉಳಿಯುತ್ತಿದ್ದರು. ಅನೇಕ ವೇಳೆ ಪ್ರಸಾದಕ್ಕೆ ಅನುಕೂಲ ವಿರುತ್ತಿರಲಿಲ್ಲ. ಅಂದು ಅವರು ಪಡುತ್ತಿದ್ದ ಬವಣೆಯನ್ನು ಕಣ್ಣಾರೆ ಕಂಡ ಹಿರಿಯರೊಬ್ಬರು ಹೇಳುತ್ತಿದ್ದರು –

ಒಂದು ಸಾರಿ ಅವರು ಶ್ರೀಗಳವರೊಡನೆ ಬೆಂಗಳೂರಿಗೆ ಹೋಗಿ, ಬೇಲಿಮಠದಲ್ಲಿ ಉಳಿದಿದ್ದರು. ಒಂದು ಜಟಕಾಗಾಡಿ ಮಾಡಿಕೊಂಡು – ಇಡೀ ದಿನಕ್ಕೆ ಅದನ್ನು ಬಾಡಿಗೆಗೆ ಗೊತ್ತುಮಾಡಿಕೊಂಡು – ಅದರಲ್ಲಿ ವಿದ್ಯಾಧಿಕಾರಿಗಳ ಕಛೇರಿ ಮೊದಲಾದ ಕಡೆಗೆಲ್ಲಾ ಸುತ್ತುವುದು, ರಾತ್ರಿ ಮಠಕ್ಕೆ ಬರುವುದು, ಪೂಜೆ ಮುಗಿಸಿ ಅಲ್ಲಿ ಪ್ರಸಾದಕ್ಕೆ ಅನುಕೂಲ ವಿಲ್ಲದ್ದರಿಂದ ಒಂದು ಲೋಟ ನೀರನ್ನೇ ಪ್ರಸಾದವಾಗಿ ಅರ್ಪಿಸಿಕೊಂಡು ಮಲಗುವುದು ; ಮರುದಿನ ಮುಂಜಾನೆಯೂ ಅದೇ ಪ್ರಸಾದ ! ಆದರೂ ಅದನ್ನು ಸ್ವಲ್ಪವೂ ತೋರಿಸಿಕೊಳ್ಳದೆ ಕೆಲಸದಲ್ಲಿ ತೊಡಗಿಕೊಳ್ಳುವುದು. ಆದರೆ ಜೊತೆಯಲ್ಲಿ ಹೋದ ಆ ಹಿರಿಯರಿಗೆ ಮಾತ್ರ ತೊಂದರೆಯಾಗದಂತೆ ಹೋಟಲಿನಲ್ಲಿ ವ್ಯವಸ್ಥೆ ಮಾಡಿದ್ದರಂತೆ. ಇದನ್ನು ಕಂಡ ಆ ಹಿರಿಯರು ಅವರ ದೇಹ ದಂಡನೆಗೆ ತುಂಬ ನೊಂದುಕೊಂಡು ಪ್ರಸಾದ ತೆಗೆದುಕೊಳ್ಳದೇ ಈ ರೀತಿ ಯಾಕೆ ನೀವು ಕಂಡಕಂಡವರ ಮಕ್ಕಳಿಗಾಗಿ ಕಷ್ಟ ಅನುಭವಿಸುತ್ತೀರಿ – ಎಂದು ಕಕ್ಕುಲಾತಿಯಿಂದ ಆಕ್ಷೇಪವೆತ್ತಿದಾಗ ಶ್ರೀಗಳವರು ಹೀಗೆ ಹೇಳಿದರಂತೆ –

"ಪ್ರಸಾದ ನಾನು ತೆಗೆದುಕೊಂಡಿದ್ದೇನೆ. ನೀರು ಶಿವನಿತ್ತ ಪ್ರಸಾದವಲ್ಲವೆ ? ಒಳ್ಳೆಯ ನೀರು ಸಿಕ್ಕದೆ ನಮ್ಮ ಜನ ಎಷ್ಟು ಕಷ್ಟಪಡುತ್ತಿದ್ದಾರೆಂಬುದನ್ನು ಕಣ್ಣಾರೆ ಕಂಡಿದ್ದೇನೆ. ಶಿವ ಇಷ್ಟಾದರೂ ನಮಗೆ ಕೊಟ್ಟಿದ್ದಾನೆ. ಅದನ್ನು ಜನತೆಗೆ ಅರ್ಪಿಸುವುದರಲ್ಲಿ ಸಾರ್ಥಕತೆಯನ್ನು ಪಡೆಯಬೇಕು."

ಮೈಸೂರಿನಲ್ಲಿದ್ದ ಒಂದು ವಿದ್ಯಾರ್ಥಿನಿಲಯವನ್ನು ನಡೆಸುವುದೇ ಅತ್ಯಂತ ದುಸ್ತರ ವಾಗಿರುವಾಗ ಇನ್ನೂ ಎರಡು ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ ಅವರ ಸಾಹಸಕ್ಕೆ ಭಕ್ತ ಜನ ಬೆರಗಾದರು. ಹಾಗೆಯೇ ಅದಕ್ಕಾಗಿ ಅವರು ಪಡುತ್ತಿರುವ ಕಷ್ಟವನ್ನು ಕಂಡು ಮರುಗಿದರು.

ಆಗ ಇಡೀ ಜನಜೀವನವೇ ಬಹಳ ಕಷ್ಟದ ಪರಿಸರದಲ್ಲಿತ್ತು.

ಒಂದು ಕಡೆ ಸ್ವಾತಂತ್ರ್ಯದ ಹೋರಾಟ.

ಇನ್ನೊಂದು ಕಡೆ ಪಡಿತರದ ಭಾರದಿಂದ ಆಹಾರಧಾನ್ಯಗಳು ಸರಿಯಾಗಿ ಸಿಕ್ಕದೆ ಜನರು ಪಡುತ್ತಿರುವ ನಾನಾ ಪಡಿಪಾಟಲು.

ಸಕಾಲಕ್ಕೆ ವಿದ್ಯಾರ್ಥಿಗಳಿಗೆ ಯಾವ ತೊಂದರೆಯೂ ಬರಬಾರದೆನ್ನುವ ದೃಢ ಸಂಕಲ್ಪದಿಂದ ಬಿಡುವಿಲ್ಲದೆ ಸದಾ ದುಡಿಯುತ್ತಿದ್ದರು.

ಇದು ಶ್ರೀಮಠದ ಭಕ್ತಾದಿಗಳಲ್ಲಿ ಕೆಲವರಿಗೆ ಕಳವಳವನ್ನುಂಟುಮಾಡಿತು. ಇದರಿಂದಾಗಿ ಶ್ರೀಮಠದ ಗೌರವಕ್ಕೆ ಕುಂದು ಬಂದೀತೆಂಬ ಆತಂಕವುಂಟಾಯಿತು. ಹಿರಿಯ ಜಗದ್ಗುರುಗಳವರಲ್ಲಿ ಈ ವಿಷಯ ಪ್ರಸ್ತಾಪಿಸಿದಾಗ, ಅವರಲ್ಲಿ ಪಬ್ಲಿಕ್ ಸರ್ವೀಸ್ ಕಮೀಷನರ್ ಆಗಿದ್ದ ಬಿ.ಎಸ್. ಪುಟ್ಟಸ್ವಾಮಿಯವರಿಗೆ –

"ಶ್ರೀಮಠದ ಗೌರವಕ್ಕೆ ಚ್ಯುತಿ ಬರದಂತೆ ಒಂದು ಮಿತಿಯಲ್ಲಿ ನಡೆಯುವಂತೆ ಕಿರಿಯ ಸ್ವಾಮಿಗಳವರಿಗೆ ನೀವು ತಿಳಿಸಿಬಿಡಿ" – ಎಂದರು.

ಅವರೆಲ್ಲರೂ ಸೇರಿ ಮೈಸೂರಿಗೆ ಬಂದು, ಶ್ರೀ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರಲ್ಲಿ ಅರಿಕೆ ಮಾಡಿಕೊಂಡರು. ಆಗ ಶ್ರೀಗಳವರು – ನಿರುದ್ವೇಗದಿಂದ, ದೃಢಚಿತ್ತದಿಂದ, ಅಪಾರ ಆತ್ಮವಿಶ್ವಾಸದಿಂದ, ನಿಶ್ಚಿಂತಮನಸ್ಕರಾಗಿ –

"ನಾನು ನನ್ನ ಗುರುವಿನ ಕೃಪೆ ಪಡೆದು ಶ್ರೀ ಶಿವರಾತ್ರೀಶ್ವರರ ಅಪ್ಪಣೆ ಪಡೆದು ಈ ಕಾರ್ಯವನ್ನು ಆರಂಭ ಮಾಡಿದ್ದೇನೆ. ಅವರ ಅಂತರಂಗದ ಪ್ರೇರಣೆಯಂತೆ ಕಾರ್ಯ ನಡೆಸುತ್ತಿದ್ದೇನೆ. ಇದರಿಂದ ಬರುವ ಮಾನಾಪಮಾನಗಳು ನಮ್ಮನ್ನು ಕೈಹಿಡಿದು ನಡೆಸುತ್ತಿರುವ ಆದಿಜಗದ್ಗುರು ಭಗವತ್ಪಾದರಿಗೆ ಸೇರಿದ್ದು. ಅದಕ್ಕೆ ನಾನೇಕೆ ಚಿಂತಿಸಬೇಕು." – ಎಂದು ನಿರ್ಮಲ ಮುಗುಳುನಗೆಯಿಂದ ನುಡಿದರು.

"ಆದರೆ ಶ್ರೀಮಠದಿಂದ ನಡೆಯುವ ಕಾರ್ಯ ಶಾಶ್ವತವಾಗಿ ನಡೆಯಬೇಕಲ್ಲವೆ ?"

"ನಡೆದೇ ನಡೆಯುತ್ತದೆ. ಅದಕ್ಕೆ ಶಂಕೆ ಏಕೆ?"

"ತಾವು ಅಪಾರ ಸಾಲದ ಸುಳಿಯಲ್ಲಿ ಸಿಕ್ಕಿರುವಿರೆಂಬ ವದಂತಿ ಊರ ತುಂಬಾ ಹಬ್ಬಿದೆ. ಈ ಪರಿಸ್ಥಿತಿಯಲ್ಲಿ ಈ ಕಾರ್ಯ ಶಾಶ್ವತವಾಗಿ ನಡೆಯುವುದು ಹೇಗೆ ?"

"ಸಾಲ ಕೊಡಿಸಿದ ಗುರುವಿಗೆ ಅದನ್ನು ತೀರಿಸುವ ಪರಿವೆ ಇಲ್ಲದಿಲ್ಲ. ಆ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳದೇ ನಾವು ಹಂಬಲಿಸುತ್ತೇವೆ."

"ಇದು ಭಾವುಕತೆಯ ಮಾತಾಗಬಹುದು. ಆದರೆ ವ್ಯಾವಹಾರಿಕ ನಿಜಜೀವನದಲ್ಲಿ ನಡೆಯುವುದು ಸುಲಭವಲ್ಲ. ಒಂದು ದಿನ ದಾರುಣ ಸ್ಥಿತಿಗೆ ಬಂದು ಸಂಸ್ಥೆಯನ್ನು ಮುಚ್ಚಬೇಕಾಗಿ ಬಂದರೆ ಗತಿ ಏನು ?"

"ಅದಕ್ಕೆ ನಾವೇಕೆ ಚಿಂತಿಸಬೇಕು? ಲೋಕದಲ್ಲಿ ಯಾರೂ ಯಾವುದನ್ನೂ ಆಚಂದ್ರಾರ್ಕವಾಗಿ ನಡೆಸಿಲ್ಲ. ಹಾಗೆ ನಡೆಸುತ್ತೇವೆಂಬ ಕಲ್ಪನೆ ಮಾನವನ ಭ್ರಮೆ. ತಾನು ಇಂದು ಮಾಡಿದ ಕಾರ್ಯ ಅದೆಷ್ಟು ಫಲಕಾರಿ ಎಂಬುದನ್ನು ಗಮನಿಸಿದರೆ ಸಾಕು."

"ಹೋಗಲಿ ಹಾಸ್ಟೆಲಿಗೆ ಸೇರಿಸಿಕೊಳ್ಳುವಾಗ ವಿದ್ಯಾರ್ಥಿಗಳ ಸಂಖ್ಯೆಯನ್ನು ಮಿತಿಗೊಳಿಸಿದರೆ ಒಳ್ಳೆಯದಲ್ಲವೇ ?"

"ನೀವೇನೋ ವಿದ್ಯಾವಂತರಾಗಿದ್ದೀರಿ. ನಿಮ್ಮ ಮನೆಯ ಮಕ್ಕಳನ್ನೆಲ್ಲಾ ವಿದ್ಯಾವಂತರನ್ನಾಗಿ ಮಾಡುತ್ತೀರಿ. ಅವರು ಮುಂದುವರಿಯುವಂತೆ ನೋಡಿಕೊಳ್ಳುತ್ತೀರಿ. ಆದರೆ ಹಳ್ಳಿಯ

ಬಡ ಮಕ್ಕಳಿಗೆ ವಿದ್ಯೆ ನೀಡುವವರಾರು? ಅವರನ್ನು ಮುಂದಕ್ಕೆ ತರುವವರಾರು? ಈ ಕೆಲಸವನ್ನು ನಾನು ಪ್ರಾರಂಭಿಸಿದ್ದೇನೆ. ಎಲ್ಲಿಯವರೆಗೆ ಮುಂದುವರಿಯುವುದೋ ಅಲ್ಲಿಯವರೆಗೆ ಸಾಗಲಿ. ಶಿವರಾತ್ರೀಶ್ವರನ ಇಚ್ಛೆಯಿದ್ದಂತಾಗಲಿ. ಅಲ್ಲದೆ ನನ್ನ ಒಂದು ನಿರೀಕ್ಷೆಯಿದೆ. ಏನೆಂದರೆ –ನಮ್ಮ ಸಂಸ್ಥೆಯಲ್ಲಿ ವಿದ್ಯಾಭ್ಯಾಸ ಮಾಡಿದ ವ್ಯಕ್ತಿ ಮುಂದೆ ತನ್ನ ಜೀವನವನ್ನು ರೂಪಿಸಿಕೊಳ್ಳುತ್ತಾನೆ. ಅವನು ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತಾನೆ. ಹೀಗೆ ಅವನ ಸಂತಾನ ನಾಗರಿಕವಾಗುತ್ತದೆ. ಅವನು ಅಂತೆಯೇ ತನ್ನ ಬಂಧು ಬಳಗದ ಹತ್ತಾರು ಜನರನ್ನು ವಿದ್ಯಾವಂತರನ್ನಾಗಿ ಮಾಡಲು ನೆರವೂ ಆಗಬಹುದು. ಆದುದರಿಂದ ನಾವು ಇಂದು ಹತ್ತಿಸಿದ ಒಂದು ದೀವಿಗೆ ಮತ್ತೊಂದನ್ನು ಬೆಳಗಿಸುತ್ತಾ ಹೋದರೆ ಗ್ರಾಮಾಂತರದ ಕುಟುಂಬಗಳಲ್ಲಿ ಜ್ಞಾನ ಜ್ಯೋತಿ ಬೆಳಗುತ್ತಾ ಹೋಗುತ್ತದೆ. ಅದು ಒಂದು ರೀತಿಯ ಶಾಶ್ವತ ಕಾರ್ಯವೇ ಆದಂತಾಗುತ್ತದೆ. ಆದ್ದರಿಂದ ಇಂದು ಯಾವ ಜ್ಯೋತಿಯನ್ನು ಬೆಳಗಿಸುತ್ತೇವೆಂಬುದು ಮುಖ್ಯವೇ ಹೊರತು ನಾಳಿನ ಬಗೆಗೆ ಚಿಂತಿಸುವುದು ಅಗತ್ಯವಿಲ್ಲ...."

ಬಂದ ಭಕ್ತರು ಕಲ್ಪಿಸಿಕೊಂಡಿದ್ದ ಭಯಾನಕ ಚಿತ್ರ ಶ್ರೀಗಳವರ ಆತ್ಮವಿಶ್ವಾಸದ ತಂಗಾಳಿಯಲ್ಲಿ ಅಳಿಸಿಹೋಗಿತ್ತು.

ಆದರೆ ಅದರಿಂದ ವ್ಯಾವಹಾರಿಕ ಸಮಸ್ಯೆಗಳು ಬಗೆಹರಿಯುವುದು ಹೇಗೆ? – ಎಂಬ ಚಿಂತೆ ಅವರನ್ನು ಆವರಿಸಿತ್ತು.

ಶ್ರೀಗಳವರು ಅವರ ಇಂಗಿತವನ್ನು ಅರ್ಥಮಾಡಿಕೊಂಡು ತಾವೇ ಮಾರ್ಗವನ್ನು ಸೂಚಿಸಿದರು –

"ನೋಡಿ, ಸಮಾಜ ಬರಡಲ್ಲ. ಉದಾರತೆಗೆ ಅಲ್ಲಿ ಕೊರತೆಯಿಲ್ಲ. ನಮ್ಮ ಕಾರ್ಯ ಉಚಿತವಾದುದೆಂದು ಮನವರಿಕೆಯಾದರೆ ನಮ್ಮ ಕಾರ್ಯದಲ್ಲಿ ನೆರವಾಗುವ ಅಂತಃ ಕರಣಗಳು ಅಲ್ಲಿವೆ. ನೀವು-ನಾವು ಎಲ್ಲರೂ ಒಂದುಗೂಡಿ ನಡೆಯೋಣ. ಸಮಾಜದ ಬಾಗಿಲಿಗೆ ಜೋಳಿಗೆ ಹಿಡಿದು ಹೋಗೋಣ. ಸಮಾಜದ ಅಭ್ಯುದಯಕ್ಕೆ ಪ್ರಾಮಾಣಿಕವಾಗಿ ಶ್ರಮಿಸಿದರೆ ಸಮಾಜ ನಮ್ಮನ್ನು ಕಡೆಗಣಿಸುವುದಿಲ್ಲ."

– ಎಂಬ ಆತ್ಮವಿಶ್ವಾಸವನ್ನು ವ್ಯಕ್ತಪಡಿಸಿದರು.

ಬಂದವರಿಗೆ ಶ್ರೀಗಳವರ ಈ ದೃಢ ಸಂಕಲ್ಪ, ಅಚಲ ಆತ್ಮವಿಶ್ವಾಸ ಸಮಾಧಾನವನ್ನು ತಂದಿತು.

### ಜೋಳಿಗೆ ಹಿಡಿದ ಜಂಗಮಮೂರ್ತಿ

'ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲು ಶ್ರೀಗಳವರು ಪಡುತ್ತಿದ್ದ ಸಾಹಸ ರೋಮಾಂಚಕಾರಿಯಾದ ಒಂದು ಕಥೆಯೇ ಆಗುತ್ತದೆ. ಹಿರಿಯ ಜಗದ್ಗುರುಗಳವರು

ಮಾಡಿದ ಏರ್ಪಾಡು ಯಾವುದಕ್ಕೂ ಸಾಲುತ್ತಿರಲಿಲ್ಲ. ಅಂಗಡಿಗಳಿಂದ ಸಾಮಗ್ರಿಗಳನ್ನು ಸಾಲವಾಗಿ ತರುವುದು, ಅನಂತರ ಅದನ್ನು ಭಕ್ತರ ನೆರವಿನಿಂದ ಹೇಗೋ ಕಷ್ಟಪಟ್ಟು ತೀರಿಸುವುದು ; ಮತ್ತೆ ಅದಕ್ಕಿಂತ ಹೆಚ್ಚು ಸಾಲ ಮಾಡುವುದು; ಹೀಗೆ ನಡೆಯುತ್ತಿತ್ತು. ಒಮ್ಮೆ ನಡೆದ ಒಂದು ಘಟನೆಯನ್ನು ಇಲ್ಲಿ ಉಲ್ಲೇಖಿಸಬಹುದು –

"ವಿದ್ಯಾರ್ಥಿನಿಲಯದಲ್ಲಿ ಅಕ್ಕಿ ಇರಲಿಲ್ಲ. ಹಿಂದಿನ ಸಂಜೆಯೇ ಕಾರ್ಯನಿರ್ವಾಹಕರು ಬಂದು ಸ್ವಾಮಿಗಳಿಗೆ ತಿಳಿಸಿದ್ದರು. ಸ್ವಾಮಿಗಳು ಪರಿಚಯದ ಕೆಲವು ಅಂಗಡಿಗಳಿಂದ ಅಕ್ಕಿಯನ್ನು ತರಿಸಲು ಪ್ರಯತ್ನಿಸಿದರು. ಆದರೆ ಮುಂದೆ ಯಾವಾಗಲೋ ದುಡ್ಡನ್ನು ಕೊಡುವ ಇವರ ಸ್ಥಿತಿಯನ್ನು ತಿಳಿದಿದ್ದ ಅಂಗಡಿಗಳವರು ಅಕ್ಕಿಯನ್ನು ಕೊಡಲು ಮುಂದಾಗಲಿಲ್ಲ. ಈಗ ಅಕ್ಕಿ ವಿದ್ಯಾರ್ಥಿನಿಲಯಕ್ಕೆ ಹೋಗದೇ ಹೋದರೆ ರಾತ್ರಿಯ ಊಟಕ್ಕೆ ವಿದ್ಯಾರ್ಥಿಗಳಿಗೆ ತೊಂದರೆ ಯಾಗುತ್ತದೆ. ಅಂಗಡಿಗಳಲ್ಲಿ ಸುತ್ತಿ ವಿಫಲರಾಗಿ ಕಾರಿನಲ್ಲಿ (ಹಳ್ಳಿಹಳ್ಳಿಗಳಿಗೆ ಕಾಳು-ಕಡ್ಡಿಗಳನ್ನು ಸಂಗ್ರಹಿಸಿ ತರಲು ಒಂದು ಹಳೆಯ ಮಾಡಲ್ ಕಾರೊಂದನ್ನು ಕೊಂಡಿದ್ದರು) ಹಿಂತಿರುಗು ತ್ತಿರುವಾಗ ಅವರಿಗೆ ಥಟ್ಟನೆ ಏನೋ ಹೊಳೆದಂತಾಯಿತು. ತಾವು ತಮ್ಮ ವಾಸ್ತವ್ಯಕ್ಕೆ ಹೋದೊಡನೆ ಅಲ್ಲಿಳಿದು ಕಾರಿನ ಚಾಲಕನ ಕೈಲಿ ಹಾಸ್ಟಲಿನ ಮೇನೇಜರ್ ಅವರಿಗೆ ಊಟ ಸ್ವಲ್ಪ ತಡವಾಗುವುದಾಗಿ ವಿದ್ಯಾರ್ಥಿಗಳಿಗೆ ತಿಳಿಸುವಂತೆ ಹೇಳಿಕಳಿಸಿದರು. ಚಾಲಕ ಅದನ್ನು ತಲುಪಿಸುವ ವೇಳೆಗೆ ತಾವು ಧರಿಸಿದ್ದ ಚಿನ್ನದ ಕರಡಿಗೆಯನ್ನು ತೆಗೆದು ಇಷ್ಟಲಿಂಗವನ್ನು ಕಾವಿವಸ್ತ್ರಕ್ಕೆ ಬದಲಾಯಿಸಿ ಅದನ್ನು ಧರಿಸಿದ್ದರು. ಚಿನ್ನದ ಕರಡಿಗೆಯನ್ನು ಗಿರವಿ ಅಂಗಡಿಯಲ್ಲಿ ೮೦೦ ರೂ.ಗಳಿಗೆ ಅಡವಿಟ್ಟು ಅಕ್ಕಿಮೂಟೆ ಮತ್ತು ಇತರ ಸಾಮಾನುಗಳನ್ನು ವಿದ್ಯಾರ್ಥಿನಿಲಯಕ್ಕೆ ಸಾಗಿಸಿದರು. ಅನಂತರ ಶ್ರೀಮಠದ ಭಕ್ತರಿಗೆ ಇದು ಹೇಗೋ ತಿಳಿದು ಅದನ್ನು ಬಿಡಿಸಿ ತಂದು ಅವರಿಗೆ ಪಾದಕಾಣಿಕೆಯಾಗಿ ಅರ್ಪಿಸಿದರೆಂಬ ಮಾತು ಬೇರೆ...."

ಅಂದು ನಿಲಯದ ವಿದ್ಯಾರ್ಥಿಯಾಗಿದ್ದ– ಇಂದು ಪ್ರಖ್ಯಾತ ನ್ಯಾಯವಾದಿಗಳಾದ ಹೆಚ್. ಗಂಗಾಧರನ್ ಅವರು ಒಂದು ಪ್ರಸಂಗವನ್ನು ಹೀಗೆ ಲಿಖಿಸಿದ್ದಾರೆ, ದಾಖಲಿಸಿದ್ದಾರೆ –

"ಶ್ರೀಗಳವರು ಪೂಜಾ ಸಮಯದಲ್ಲಿ ಪ್ರಸಾದ ಸ್ವೀಕರಿಸುವರೇ ವಿನಃ ಅನ್ಯಥಾ ನೀರನ್ನೂ ಕುಡಿಯುತ್ತಿರಲಿಲ್ಲ. ಇದು ಬಾಲ್ಯದಿಂದಲೇ ಅವರಿಗೆ ದೊರೆತ ಶಿಕ್ಷಣ ಮತ್ತು ಶ್ರೀಮಠದ ಪೀಠಾಧಿಪತಿಗಳ ಸಂಪ್ರದಾಯ. ತಮ್ಮ ಸಂಸ್ಥೆಗಳ ಕಾರ್ಯಕ್ಕಾಗಿ ಸರ್ಕಾರದಲ್ಲಿ ನಡೆಸಬೇಕಾದ ಕಾರ್ಯಗಳಿಗಾಗಿ ಆಗಾಗ ಬೆಂಗಳೂರಿಗೆ ಹೋಗಬೇಕಾಗುತ್ತಿತ್ತು.

"ಅಂದು ಮಹಾಶಿವರಾತ್ರಿ. ಅಂದು ಎಲ್ಲಾ ವಿದ್ಯಾರ್ಥಿನಿಲಯಗಳಲ್ಲೂ ಶಾಸ್ತ್ರೀಯವಾದ ಶಿವಪೂಜಾ ವೈಭವ. ನಂತರ ಎಲ್ಲ ಕೋಮಿನ ವಿದ್ಯಾರ್ಥಿಗಳಿಗೆ ರುಚಿಕರವಾದ ಫಲಾಹಾರ. ಶಿವರಾತ್ರಿಗೆ ಮೂರು ದಿನ ಮುನ್ನವೇ ಬೆಂಗಳೂರಿಗೆ ತೆರಳಿದ ಶ್ರೀಗಳವರು ಅಂದು ಬೆಳಗಿನಿಂದಲೂ ಪೂಜೆಗೆ ಅವಕಾಶವಿಲ್ಲದೆ ಉಪವಾಸವಿದ್ದರು. ರಾತ್ರಿ ಹತ್ತು ಘಂಟೆಗೆ

ಮೈಸೂರಿಗೆ ಬಂದು ಎಲ್ಲ ವಿದ್ಯಾರ್ಥಿನಿಲಯಗಳಲ್ಲಿ ನಡೆದಿರುವ ಏರ್ಪಾಡನ್ನು ಪರಿಶೀಲಿಸಿದರು. ಸಾವಿರಾರು ಜನ ವಿದ್ಯಾರ್ಥಿಗಳು ಆನಂದದಿಂದ ಪ್ರಸಾದ ಸ್ವೀಕರಿಸಿ ತೃಪ್ತರಾಗಿದ್ದಾರೆ. ಆದರೆ ಶ್ರೀಗಳವರಿಗೆ ಮೂರು ದಿನದ ಉಪವಾಸ. ಮಾತನಾಡಲೂ ಆಗುತ್ತಿಲ್ಲ. ನಾಲಿಗೆ ತೊದಲು ತ್ತಿತ್ತು. ಸಹಸ್ರಾರು ಜನರಿಗೆ ಅನ್ನವಿತ್ತ ಜೀವಕ್ಕೆ ನೀರು ಕುಡಿಯಲೂ ಅವಕಾಶವಿಲ್ಲ.

'ಹಿಂದೆ ಯಾರ ಅನ್ನ ನೀರಿಗೆ ತೊಂದರೆ ಮಾಡಿದ್ದೆನೋ ಅದರ ಫಲವನ್ನಿಂದು ನಾನು ಅನುಭವಿಸಬೇಕಾಗಿದೆ. ನಮ್ಮ ವಿದ್ಯಾರ್ಥಿಗಳಿಗೆ ತೃಪ್ತಿಯಾದರೆ ಸಾಕು. ಅದರಿಂದ ನಾನು ಧನ್ಯ' – ಎಂದು ಉದ್ಗರಿಸಿದರು.

ಹೀಗೆ ಮೂರು ನಾಲ್ಕು ದಿನಗಳವರೆಗೆ ಉಪವಾಸವಿರಬೇಕಾದ ಅನಿವಾರ್ಯ ಪ್ರಸಂಗಗಳು ಅವರ ಜೀವನದಲ್ಲಿ ವಿರಳವೇನಲ್ಲ.

ಚಾಮರಾಜನಗರದ ವಿದ್ಯಾರ್ಥಿನಿಲಯಕ್ಕಾಗಿ ಧಾನ್ಯಸಂಗ್ರಹಣೆಯ ಯಾತ್ರೆ ಕೈಕೊಂಡಾಗ ಅನೇಕ ಬಾರಿ ಇಂತಹ ಪ್ರಸಂಗಗಳು ಬಂದೊದಗಿದುವು...."

ಚಾಮರಾಜನಗರದಲ್ಲಿ ನಡೆದ ಪ್ರಸಂಗವನ್ನು ಅಂದು ನಿಲಯದ ವಿದ್ಯಾರ್ಥಿಯಾಗಿ ಪ್ರತ್ಯಕ್ಷದರ್ಶಿಯಾಗಿದ್ದವರೊಬ್ಬರು ಹೀಗೆ ಹೇಳಿದ್ದಾರೆ –

"ಆ ದಿನ ಹಾಸ್ಟೆಲ್‌ನಲ್ಲಿ ಹುಡುಗರಿಗೆ ಅಡಿಗೆ ಮಾಡಿ ಬಡಿಸಲು ಯಾವುದೇ ಆಹಾರ ಧಾನ್ಯವಿರಲಿಲ್ಲ. ಮೇನೇಜರ್ ಗುರುಸಿದ್ಧಪ್ಪನವರಂತೂ ಚಡಪಡಿಸುತ್ತಿದ್ದರು. ಯಾವುದೇ ಮೋಟಾರು ವಾಹನದ ಸದ್ದು ಕೇಳಿದರೂ ಶ್ರೀಗಳವರ ಕಾರು ಬಂತೆಂದು ಹೊರ ಬಂದು ನೋಡುವರು. ಇಂತಹ ಪರಿಸ್ಥಿತಿಯಲ್ಲಿ ಅವರು ಯಾರಿಂದಲೋ ಸ್ವಲ್ಪ ಆಹಾರಧಾನ್ಯವನ್ನು ಎರವಲಾಗಿ ತಂದು ಬೆಳಿಗ್ಗೆ ಊಟವೆಂದು ಅರೆಹೊಟ್ಟೆಗೆ ಆಹಾರ ಮಾಡಿಸಿ ಬಡಿಸಿದರು. ಕೊಟ್ಟಷ್ಟನ್ನೇ ತಿಂದು ನಾವು ಶಾಲೆಗೆ ಹೋದೆವಾದರೂ ಸಂಜೆಗೆ ಏನು ಎಂಬ ಆತಂಕ ಮಕ್ಕಳಾದ ನಮ್ಮೆಲ್ಲರನ್ನೂ ಕಾಡುತ್ತಿತ್ತು. ಗುರುಸಿದ್ಧಪ್ಪನವರಿಗಂತೂ ಆಹಾರಧಾನ್ಯ ಗಳೊಂದಿಗೆ ಶ್ರೀಗಳವರು ಬಂದೇ ಬರುತ್ತಾರೆಂಬ ಭರವಸೆ. ಸಂಜೆ ಐದಾಯಿತು, ಆರಾಯಿತು, ಶ್ರೀಗಳವರು ಬರಲಿಲ್ಲ. ಮತ್ತೆ, ಗುರುಸಿದ್ಧಪ್ಪನವರು ಹುಡುಗರನ್ನೆಲ್ಲಾ ಕರೆದು ಪ್ರತಿಯೊಬ್ಬರಿಗೂ ನಾಲ್ಕಾಣೆಯಂತೆ ದುಡ್ಡು ಕೊಟ್ಟು ಟೌನಿನ ಕಡೆಗೆ ಹೋಗಿ ಏನನ್ನಾದರೂ ತಿಂದುಕೊಂಡು ಬರುವಂತೆ ಹೇಳಿದರು. ನಾವೆಲ್ಲರೂ ಟೌನಿಗೆ ಬಂದು ಕಡ್ಲೆಪುರಿ, ಬಾಳೆಹಣ್ಣು ಎಂದು ಅವರವರಿಗೆ ಬೇಕಾದುದನ್ನು ತಿಂದುಕೊಂಡು ಹಾಸ್ಟಲಿಗೆ ವಾಪಾಸಾದೆವು. ಆ ರಾತ್ರಿಗೆ ಅಷ್ಟೇ ಎಂದು ಖಚಿತವಾದ ಮೇಲೆ ಮತ್ತೇನು ಮಾಡುವುದು ? ಹಸಿದುಕೊಂಡೇ ಮಲಗಿದೆವು.

"ಆದರೆ ರಾತ್ರಿ ಸುಮಾರು ಒಂದು ಅಥವಾ ಎರಡು ಗಂಟೆಯಾಗಿರಬಹುದು. ಅದೇ ಗುರುಸಿದ್ಧಪ್ಪನವರೇ ಮಲಗಿದ್ದ ನಮ್ಮನ್ನೆಲ್ಲಾ ಅಲುಗಾಡಿಸಿ, ತಿವಿದು ಊಟ ಮಾಡಲು

ಎಬ್ಬಿಸತೊಡಗಿದಾಗ ನಮಗೆಲ್ಲ ಆಶ್ಚರ್ಯವೊ ಆಶ್ಚರ್ಯ! ಅದೂ ರಾತ್ರಿಯ ಆ ಸಮಯದಲ್ಲಿ! ಹಾಗೆ ಎದ್ದ ನಾನು ಅಡಿಗೆ ಮನೆಯ ಕಡೆಗೆ ತಟ್ಟೆ ಹಿಡಿದುಕೊಂಡು ಹೋಗಿ ನೋಡಿದರೆ ಊಟದ ಮನೆಯೊಳಗೆ ಶ್ರೀಗಳವರು ಮಕ್ಕಳೆಲ್ಲರ ಆಗಮನವನ್ನು ನಿರೀಕ್ಷಿಸುತ್ತ ನಿಂತಿದ್ದರು! ಅಂದರೆ ಆ ಹೊತ್ತಿನಲ್ಲಿ ಅವರು ನಮಗಾಗಿ ಆಹಾರಧಾನ್ಯಗಳನ್ನು ತಂದು ಅಡಿಗೆ ಮಾಡಿಸಿ, ನಾವು ಕುಳಿತು ಊಟ ಮಾಡುವುದನ್ನು ನೋಡುವ ಕಾತುರದಲ್ಲಿದ್ದರೆಂದರೇ ಸರಿ !.....

"ಆ ರಾತ್ರಿ ನಾವೆಲ್ಲ ಊಟಕ್ಕೆ ಕುಳಿತುಕೊಂಡಾಗ ಶ್ರೀಗಳು ಪ್ರತಿಯೊಬ್ಬ ಹುಡುಗನ ಬಳಿಗೂ ಬಂದು ಚೆನ್ನಾಗಿ ಊಟ ಮಾಡು – ಎಂದು ನಗುನಗುತ್ತಾ ಹೇಳಿದುದನ್ನು ನಾನಂತೂ ಎಂದಿಗೂ ಮರೆಯಲಾರೆ... ಆ ಮಧ್ಯರಾತ್ರಿಯಲ್ಲಿ ಶ್ರೀಗಳವರು ನಮ್ಮಲ್ಲಿಗೆ ಬಂದಾಗ ಅವರು ಸ್ನಾನ-ಪೂಜೆ ಮಾಡಿ ಪ್ರಸಾದ ಸ್ವೀಕರಿಸಿ ಆಗಲೇ ಹದಿನೆಂಟು ಗಂಟೆಗಳಾಗಿದ್ದುವು ಎಂಬುದು ಆಮೇಲೆ ನಮಗೆಲ್ಲಾ ತಿಳಿಯಿತು ! ಅಂದರೆ ಅವರು ಹಿಂದಿನ ದಿನ ಬೆಳಿಗ್ಗೆಯಷ್ಟೇ ಸ್ನಾನ ಪೂಜೆ ಮಾಡಿ ಪ್ರಸಾದ ಸ್ವೀಕರಿಸಿದ್ದು! ಮತ್ತೆ ಅವರ ಸ್ನಾನ ಪೂಜೆ ಪ್ರಸಾದವೆಂದರೆ ಮರುದಿನ ಬೆಳಿಗ್ಗೆಯೇ ! ಈ ವಿಷಯವನ್ನು ಕಾರನ್ನು ನಡೆಸುತ್ತಿದ್ದ ಚಾಲಕ ಹೇಳಿದನೆಂದು ಗುರುಸಿದ್ಧಪ್ಪನವರು ಮರುದಿನ ಬೆಳಿಗ್ಗೆ ಪ್ರಾರ್ಥನೆಯ ಸಮಯದಲ್ಲಿ ನಮಗೆ ತಿಳಿಸಿದರು..."

ಈ ವೇಳೆಗೆ ಪೂಜ್ಯರಿಗೆ ಅರಮನೆಯ ನಿಕಟ ಸಂಬಂಧ ಏರ್ಪಟ್ಟಿತ್ತು. ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು ಚಾಮರಾಜನಗರಕ್ಕೆ ಪ್ರಥಮಬಾರಿಗೆ ವಿದ್ಯಾರ್ಥಿನಿಲಯದ ಪ್ರಾರಂಭೋತ್ಸವಕ್ಕೆ ಆಗಮಿಸಿದ್ದರು. ಅಂದಿನಿಂದ ಶ್ರೀಗಳವರ ಕಾರ್ಯ ಗಳನ್ನು ಮೆಚ್ಚಿಕೊಂಡಿದ್ದು ದಲ್ಲದೆ ಅವರ ವ್ಯಕ್ತಿತ್ವಕ್ಕೆ ಮಾರುಹೋಗಿ ಅವರ ಭಕ್ತರೇ ಆಗಿಬಿಟ್ಟಿ ದ್ದರು. ತಮಗೆ ಮಾರ್ಗದರ್ಶನ ನೀಡಲು ಬಲು ಭಕ್ತಿಯಿಂದ ಶ್ರೀಗಳವರನ್ನು ಆಗಾಗ ಅರಮನೆಗೆ ಬಿಜಯಂಗೈಸಿಕೊಳ್ಳುತ್ತಿದ್ದರು. ಶ್ರೀಗಳವರ ಗುಪ್ತ ಸಾಧಕ ಶಕ್ತಿ – ಸೂಕ್ಷ್ಮಜ್ಞರಾದ ಮಹಾರಾಜರ ಅಂತರಂಗಕ್ಕೆ ಅರಿವಾಗಿತ್ತು. (ಶ್ರೀಗಳವರನ್ನು ತಮ್ಮ ಗುರುಗಳೆಂದು ಗೌರವಿಸಿ ಅನಂತರ ಮುಂದೆ 'ರಾಜಗುರು ತಿಲಕ' ಎಂಬ ಪ್ರಶಸ್ತಿಯನ್ನು ಅರ್ಪಿಸಿದರು, ಮಹಾರಾಜರು)

ಶ್ರೀಗಳವರ ಕಾರ್ಯ ಅಗಾಧವಾಗಿ ಬೆಳೆಯುತ್ತಿದ್ದರೂ ಮೈಸೂರಿನಲ್ಲಿ ಅವರಿಗೆ ಇನ್ನೂ ಸರಿಯಾದ ಕೇಂದ್ರ ಸ್ಥಳ ದೊರೆತಿರಲಿಲ್ಲ. ಇದನ್ನು ಮನಗಂಡ ಮಹಾರಾಜರವರು ಬನ್ನಿಮಂಟಪದ ಹತ್ತಿರವಿದ್ದ ವಿಶಾಲ ಜಾಗವನ್ನು ಅಲ್ಲಿದ್ದ ಹಳೆಯ ಕಟ್ಟಡಗಳ ಸಮೇತ ಸುಲಭ ಬೆಲೆಗೆ ಕೊಟ್ಟುಬಿಟ್ಟರು.

ತ್ರಿವಿಕ್ರಮಾವತಾರವಾಗಿ ಶ್ರೀಗಳವರ ಜನಪರ ಕಾರ್ಯಗಳು ಬೆಳೆಯುತ್ತಲೇ ಇದ್ದುದ ರಿಂದ ಇನ್ನೂ ಪ್ರಶಸ್ತವಾದ ಸ್ಥಳದ ಅಗತ್ಯವೇರ್ಪಟ್ಟಿತ್ತು. ಇದನ್ನು ಗ್ರಹಿಸಿದ ಮಹಾರಾಜರು ಮತ್ತೆ ಶ್ರೀಗಳವರ ನೆರವಿಗೆ ಧಾವಿಸಿದರು – ಅರಮನೆಯ ಗಜಶಾಲೆಯಾಗಿದ್ದ ವಿಸ್ತಾರವಾದ

ಜಾಗ ರಾಮಾನುಜ ರಸ್ತೆಯಲ್ಲಿತ್ತು. ಇದು 'ಆನೆಯ ಕರುಹಟ್ಟಿ' – ಜನರ ಬಾಯಲ್ಲಿ 'ಆನೆಕರೋಟಿ' – ಎಂದು ಪ್ರಸಿದ್ಧವಾದ ಈ ಜಾಗ ಸ್ವಾತಂತ್ರ್ಯಾನಂತರದ ಬದಲಾದ ಪರಿಸರದಲ್ಲಿ ಅರಮನೆಗೆ ಯಾವ ಉಪಯೋಗವೂ ಆಗುವಂತಿರಲಿಲ್ಲ. ಸ್ವಾಮೀಜಿಯವರ ಆವಶ್ಯಕತೆಯನ್ನೂ ಮತ್ತು ಅವರ ಮಹದುದ್ದೇಶಕ್ಕೆ ಅದು ಅತ್ಯಂತ ಸೂಕ್ತವಾದ ಸ್ಥಳವೆಂಬುದನ್ನೂ ಅರಿತು ಮಹಾರಾಜರು ಅದನ್ನು ಸುಲಭ ಬೆಲೆಗೆ ಶ್ರೀಗಳವರಿಗೆ ಮಾರಲು ನಿಶ್ಚಯಿಸಿದರು. ಎರಡು ಕಂತುಗಳಲ್ಲಿ ಹಣ ಸಂದಾಯ ಮಾಡುವ ಅನುಕೂಲ ಒದಗಿಸಿದ್ದರೂ ಸಹ ಮೊದಲ ಕಂತು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಹೊಂಚುವುದೇ ಕಷ್ಟವಾಗಿಬಿಟ್ಟಿತು. ಎಂತಹ ಕಠಿಣ ಪ್ರಸಂಗಗಳಲ್ಲೂ ಶ್ರೀಗಳವರು ಅಧೀರರಾಗುತ್ತಿರಲಿಲ್ಲ, ಎದೆಗುಂದುತ್ತಿರಲಿಲ್ಲ. ತಾವು ಮಾಡುವ ಕಾರ್ಯ ಒಳ್ಳೆಯದಾಗಿದ್ದು ಸಮಾಜದ ಹಿತ ಅದರಿಂದ ಸಾಧಿಸುವಂತಿದ್ದರೆ ದೈವಕೃಪೆ ಯಾವುದೋ ರೂಪದಿಂದ ದೊರೆಯಲೇಬೇಕು – ಎಂಬುದು ಅವರ ದೃಢ ನಿಷ್ಠೆಯಾಗಿತ್ತು. ಅದನ್ನು ನಂಬಿ ಶ್ರೀ ಶಿವರಾತ್ರೀಶ್ವರರ ಸ್ಮರಣೆಯಲ್ಲಿ ತೊಡಗಿಬಿಡುತ್ತಿದ್ದರು... ಬೆಳಗಾದರೆ ೨೫ ಸಾವಿರ ರೂ.ಗಳನ್ನು ಕಟ್ಟಬೇಕು. ಇಲ್ಲದೇ ಹೋದಲ್ಲಿ ಸುವಿಶಾಲ ಜಾಗ ಕೈತಪ್ಪಿ ಹೋಗುತ್ತದೆ. ಈ ವಿಷಯ ಮಿಂಚಿನ ವೇಗದಲ್ಲಿ ಭಕ್ತ ವಲಯದಲ್ಲಿ ಹರಡಿಬಿಟ್ಟಿತು. ಅದೇ ತಾನೇ ನಿವೃತ್ತರಾಗಿ ಭವಿಷ್ಯ ನಿಧಿಯ ಹಣವನ್ನು ಹಿಂದಿನ ದಿನವೇ ಪಡೆದಿದ್ದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಸಪ್ಪನವರು ತಮ್ಮ ಗುರುಗಳ ಈ ಸಂದಿಗ್ಧ ಪರಿಸ್ಥಿತಿಯನ್ನು ತಿಳಿದು ಆ ಹಣವನ್ನೆಲ್ಲಾ ಶ್ರೀಗಳವರ ಪಾದಮೂಲದಲ್ಲಿರಿಸಿ ತಮ್ಮ ಕೆಲಸಕ್ಕಾಗಿ ಅದನ್ನು ವಿನಿಯೋಗಿಸಲು ವಿನಂತಿಸಿಕೊಂಡರು. ಈ ನೆರವನ್ನು ಶ್ರೀಗಳವರು – (ಅನಂತರ ಅವರ ಹಣವನ್ನು ಹಿಂತಿರುಗಿಸಿದರು) ಆಗಾಗ ಹೃದಯ ತುಂಬಿ ನೆನೆದುಕೊಳ್ಳುತ್ತಿದ್ದರು.

ಈ ಆನೆಕರೋಟಿ ನಿವೇಶನದಲ್ಲಿ ಶ್ರೀಗಳವರ ಕಾರ್ಯಕ್ಷೇತ್ರದ ಒಂದು ಕಛೇರಿ, ಒಂದು ವಿದ್ಯಾರ್ಥಿನಿಲಯ ಪ್ರಾರಂಭವಾಯಿತು. ಮೇಯ್ನ್ ಬಿಲ್ಡಿಂಗ್‌ನಲ್ಲಿ ಸೀನಿಯರ್ ವಿದ್ಯಾರ್ಥಿಗಳಿಗೆ – ಆನರ್ಸ್, ಎಂ.ಎ., ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಲಾಗಿತ್ತು. ಕಾಲೇಜಿನ ಮೊದಲನೇ ವರ್ಷದ ವಿದ್ಯಾರ್ಥಿಗಳಿಗೆ ಈ ಆನೆಕರೋಟಿ ವಿದ್ಯಾರ್ಥಿ ನಿಲಯದಲ್ಲೇ ಅವಕಾಶ ಮಾಡಿಕೊಟ್ಟಿದ್ದರಿಂದಾಗಿ – ವಿದ್ಯಾರ್ಥಿಗಳ ಸಂಖ್ಯೆ ಐದುನೂರಕ್ಕೇರಿತು.

ಬನ್ನಿಮಂಟಪದಲ್ಲಿ ವಿದ್ಯಾರ್ಥಿನಿಲಯಕ್ಕೆ ಸಂಬಂಧಿಸಿದಂತೆ ಒಂದು ಪವಾಡಸದೃಶ ಘಟನೆ ನಡೆಯಿತೆಂದು ಕಣ್ಣಾರೆ ನೋಡಿದ ಹೆಚ್.ಎಂ. ಮರಿಸ್ವಾಮಿಯವರು ಹೇಳಿದ್ದು:

".....ಆಗಿನ ಬನ್ನಿಮಂಟಪದಲ್ಲಿ ಒಂದು ಹಾಸ್ಟಲ್ ಇತ್ತು. ಆ ದಿನ ಮಧ್ಯಾಹ್ನ ಊಟಕ್ಕೆ ಅಡಿಗೆ ಮನೆಯಲ್ಲಿ ಏನೂ ಇರಲಿಲ್ಲ. ಶ್ರೀಗಳವರು ಅಲ್ಲಿಗೆ ಬಂದಿದ್ದು ಹುಲ್ಲಹಳ್ಳಿಯಿಂದ ಒಬ್ಬರು ವರ್ತಕರು ತರುತ್ತೇನೆಂದು ಭರವಸೆಕೊಟ್ಟಿದ್ದ ಅಕ್ಕಿಯ ನಿರೀಕ್ಷೆಯಲ್ಲಿದ್ದರು. ಆಗ ನಾನೂ ಅವರ ಜೊತೆಯಲ್ಲಿದ್ದೆ. ಹನ್ನೆರಡು ಗಂಟೆಯಾದರೂ ಅಕ್ಕಿಯ ಸುಳಿವಿಲ್ಲ.

ಆಗ ಶ್ರೀಗಳವರ ಚಡಪಡಿಕೆಯನ್ನು ಹೇಳತೀರದು. ಅಷ್ಟಕ್ಕೆ ಸರಿಯಾಗಿ ಹುಲ್ಲಹಳ್ಳಿಯಿಂದ ಯಾರೊ ಒಬ್ಬರು ಬಂದು ಭತ್ತವನ್ನು ಮಿಲ್ ಮಾಡಿಸಲು ಕಾರಣಾಂತರದಿಂದ ಆಗಲಿಲ್ಲ. ಆದ್ದರಿಂದ ಅಕ್ಕಿ ತರಲು ಆಗುವುದಿಲ್ಲವೆಂಬ ವರ್ತಮಾನವನ್ನು ತಂದರು !

'ಇದನ್ನು ಕೇಳಿ ಶ್ರೀಗಳವರ ಮನಃಸ್ಥಿತಿ ಹೇಗಾಗಿರಬೇಕೆಂದು ಊಹಿಸಿಕೊಳ್ಳಲಾಗದು! ಒಂದು ಕ್ಷಣಕ್ಕೆ ಅವರ ಮುಖ ಜೋತುಬಿದ್ದು ದುಗುಡ ಎದ್ದುಕಾಣತೊಡಗಿತು. ಕನ್ನಡಕದ ಒಳಗಿನ ಕಣ್ಣುಗಳಲ್ಲಿ ತೆಳ್ಳಗೆ ನೀರಾಡಿತು. ನನಗೆ ಕಾಣಿಸಬಾರದು ಎಂದು, ತಟ್ಟನೆ ಮುಖವನ್ನು ಆ ಪಕ್ಕಕ್ಕೆ ತಿರುಗಿಸಿಕೊಂಡು, ಒಂದು ಕ್ಷಣ ಉಸಿರು ಬಿಗಿಹಿಡಿದು, ಆ ಮೂಲಕ ಕಣ್ಣೀರು ಹೊರಕ್ಕೆ ಜಾರದ ಹಾಗೆ ನಿಯಂತ್ರಿಸಿಕೊಂಡರು ! ವಿದ್ಯಾರ್ಥಿಗಳಿಗೆ ಈಗ ಊಟಕ್ಕೆ ಏನು ಮಾಡುವುದು ಎಂದು ಅವರು ಮಾನಸಿಕವಾಗಿ ಅನುಭವಿಸಿದ ವ್ಯಥೆಯನ್ನು ಹೇಳತೀರದು....

"ನಾನು ಅಲ್ಲಿದ್ದುಕೊಂಡು ಅಸಹಾಯಕನಾಗಿ ನೋಡುತ್ತಿರುವಂತೆಯೇ ಮುಖ್ಯ ರಸ್ತೆಯಲ್ಲಿ ಬಂದ ಅರಮನೆಯ ಮೋಟಾರು ವಾಹನವೊಂದು ಬನ್ನಿಮಂಪಟದ ಒಳಗಿದ್ದ ಹಾಸ್ಟಲ್ ರಸ್ತೆಯ ಕಡೆಗೆ ತಿರುಗಿತು. ಅರಮನೆಯ ವಾಹನ ಈಗ ಇಲ್ಲೇಕೆ ಎಂದು ಅದನ್ನು ಕಂಡು ನನಗೆ ಆಶ್ಚರ್ಯ. ಶ್ರೀಗಳವರು ಏನೊಂದನ್ನೂ ತೋರಗೊಡದೆ ಆ ಕಡೆಯೇ ನೋಡುತ್ತಿದ್ದರು. ಬಂದ ವಾಹನ ಶ್ರೀಗಳವರ ಸಮೀಪಕ್ಕೇ ಬಂದು ನಿಂತಿತು. ಅದರೊಳಗಿಂದ ಅರಮನೆಯ ಮೊಕ್ತೇಸರರ ಪರವಾಗಿ ಬಂದಿದ್ದ ನೌಕರರೊಬ್ಬರು ಶ್ರೀಗಳವರಿಗೆ ನಮಸ್ಕರಿಸಿ

– 'ಬುದ್ಧೀ ಅರಮನೆಯಿಂದ ಸವಾರಿಯವರು (ಅಂದರೆ ಆಗಿನ ಮಹಾರಾಜ ಶ್ರೀ ಜಯಚಾಮರಾಜ ಒಡೆಯರು) ಮಕ್ಕಳಿಗೆಂದು ಊಟ ಕಳಿಸಿದ್ದಾರೆ. ಈವೊತ್ತು ಅರಮನೆಯಲ್ಲಿ ವಿಶೇಷ ಹಬ್ಬ. ಸುತ್ತೂರು ಮಠದ ಯಾವುದಾದರು ಒಂದು ಹಾಸ್ಟಲಿಗೆ ವಿಶೇಷವಾಗಿ ತಯಾರಿಸಿದ್ದ ಭಕ್ಷ್ಯಗಳನ್ನು ಕೊಟ್ಟು ಬರಲು ಅಪ್ಪಣೆ ಮಾಡಿದ್ದಾರೆ. ಬರೀ ಸಿಹಿ ತಿಂಡಿಯೇನೆಂದು ಅಡಿಗೆ ಮಾಡಿದ್ದನ್ನೆಲ್ಲಾ ಇಲ್ಲಿಗೆ ತಂದಿದ್ದೇನೆ. ಅದಕ್ಕೇ ಇಲ್ಲಿ ಮಕ್ಕಳು ಮಧ್ಯಾಹ್ನದ ಊಟ ಮಾಡುವುದಕ್ಕೆ ಮುನ್ನವೇ ಕೊಡಬೇಕೆಂದು ತಂದಿದ್ದೇವೆ. ದಯವಿಟ್ಟು ಸ್ವೀಕರಿಸಬೇಕು..."

– ಎಂದಾಗ ನಮಗೆಲ್ಲ ಹೇಗಾಗಿರಬೇಡ !

"ಸತ್ಕಾರ್ಯವನ್ನು ಸೇವಾ ದೃಷ್ಟಿಯಿಂದ ನಡೆಸುವುದಾದರೆ ನೆರವು ಸಮಯಕ್ಕೆ ಸರಿಯಾಗಿ ದೊರೆಯುವುದರಲ್ಲಿ ಸಂಶಯವಿಲ್ಲ ಎಂಬ ಧನ್ಯತಾಭಾವ ಶ್ರೀಗಳವರ ಮುಖದಲ್ಲಿ ಆಗ ಮೂಡಿತ್ತು! ಆ ದಿನ ವಿದ್ಯಾರ್ಥಿಗಳಿಗೆಲ್ಲ ರಾಜೋಪಚಾರವಾಯಿತು...."

ಮುಂದೆ ಬನ್ನಿಮಂಟಪದ ಈ ವಿದ್ಯಾರ್ಥಿನಿಲಯವನ್ನು ಆನೆಕರೋಟಿಯ ದೊಡ್ಡ ವಿದ್ಯಾರ್ಥಿನಿಲಯಕ್ಕೆ ವರ್ಗಾಯಿಸಲಾಯಿತು.

ಆನೆಕರೋಟಿಯ ಹಾಸ್ಟೆಲ್‌ನಲ್ಲಿ ಎಲ್ಲ ಹಂತದ ವಿದ್ಯಾರ್ಥಿಗಳಿಂದಾಗಿ, ಸಂಖ್ಯೆ ದಿನ ನಿತ್ಯ ಐದುನೂರು. ಇಷ್ಟು ಜನ ವಿದ್ಯಾರ್ಥಿಗಳಿಗೆ ನಿತ್ಯ ಆಹಾರ ಸಾಮಗ್ರಿಗಳನ್ನು

ಹೊಂಚುವುದು ಹರಸಾಹಸವಾಗಿತ್ತು. ಅಂಗಡಿಗಳಲ್ಲಿ ಸಾಲ ಜ್ವರದಂತೆ ಏರುತ್ತಿತ್ತು ! ಹೇಗೋ ತೀರಿಸಿದ ಮೇಲೆ ಇಳಿಯುತ್ತಿತ್ತು ; ಮತ್ತೆ ಏರುತ್ತಿತ್ತು....

ವಿದ್ಯಾರ್ಥಿಗಳಿಗೆ ನಿತ್ಯ ಎರಡು ಹೊತ್ತು ಊಟದ ವ್ಯವಸ್ಥೆ ಮಾಡುವುದು ಶ್ರೀಗಳವರಿಗೆ ಅತ್ಯಂತ ಶ್ರಮದ ಕೆಲಸವೇ ಆಗಿತ್ತು. ಹಗಲೆಲ್ಲ ಸುತ್ತಿ ಸಂಜೆಯ ವೇಳೆಗೆ ಅವರು ಅಲ್ಲಿಗೆ ವಾಪಾಸಾಗುತ್ತಿದ್ದರು.

"ಸಂಜೆ ಬಂದವರೇ ಆನೇಕರೋಟಿಯ ಮುಂಭಾಗದಲ್ಲಿ ಕುರ್ಚಿ ಹಾಕಿಸಿಕೊಂಡು ಕೂರುತ್ತಿದ್ದರು. ಆ ಸಮಯದಲ್ಲಿ ಅವರನ್ನು ಕಾಣಲು ಹೊರಗಿನವರು ಬರುತ್ತಿದ್ದುದುಂಟು. ಆಗ ಸೊಳ್ಳೆಯ ಕಾಟ ಹೇಳತೀರದು! ನಾವು ಯಾರಾದರೂ ಹತ್ತಿರವಿದ್ದರೆ ಶ್ರೀಗಳವರ ಬಳಿನಿಂತು ಮುತ್ತುತ್ತಿದ್ದ ಅವುಗಳನ್ನು ವಾರ್ತಾ ಪತ್ರಿಕೆಯನ್ನು ಮಡಚಿ ಗಾಳಿ ಹಾಕಿ ಓಡಿಸುತ್ತಿದ್ದೆವು. ನಮಗ್ಯಾತಕ್ಕೆ ಶ್ರಮ ಎಂದು ಶ್ರೀಗಳವರು ಮುಖವೊಂದನ್ನು ಬಿಟ್ಟು ತಾವು ಉಟ್ಟಿದ್ದ ಕಾವಿಯ ವಸ್ತ್ರದಿಂದ ಕೈಕಾಲು ಮೈಯನ್ನು ಮುಚ್ಚಿಕೊಂಡು ಕೂರುತ್ತಿದ್ದರು. ಹೀಗಿರುವಾಗ ಒಂದು ದಿನ ಏನಾಯಿತು ಗೊತ್ತೆ ?

"ಚಿಕ್ಕ ಮಾರ್ಕೆಟ್‌ನ, ಮಾಧವರಾವ್ ಸರ್ಕಲ್ ಬಳಿ ಆಗ ಒಬ್ಬ ಒಳ್ಳೆಯ ವರ್ತಕರಿದ್ದರು. ಅವರ ಹೆಸರು ಕೆಂಪಣ್ಣನವರು ಎಂದು. ತುಂಬ ಒಳ್ಳೆಯ ವ್ಯಕ್ತಿ. ಶ್ರೀಗಳವರ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದರು. ಅವರು ಇಟ್ಟಿದ್ದ ದಿನಸಿ ಅಂಗಡಿಯಿಂದ ಕರೋಟಿ ಹಾಸ್ಟಲಿಗೆ ಶ್ರೀಗಳವರು ಸಾಮಾನುಗಳನ್ನು ತರಿಸುತ್ತಿದ್ದರು. ಶ್ರೀಗಳವರಿಂದ ಚೀಟಿ ತೆಗೆದುಕೊಂಡು ಹೋದರೆ ಅವರು ಬೇಕುಬೇಕಾದ ಪದಾರ್ಥಗಳನ್ನು ಕೊಡುತ್ತಿದ್ದರು. ಆದರೆ ಅವರಿಗೆ ಶ್ರೀಗಳವರಿಂದ ಹಣ ಸಂದಾಯ ಮಾತ್ರ ವಿಳಂಬವಾಗುತ್ತಿತ್ತು. ಒಮ್ಮೆ ಎರಡು ಮೂರು ತಿಂಗಳೂ ಆಗುತ್ತಿದ್ದುದುಂಟು. ಹಾಗಾಗಿ ಸಾಲದ ಮೊತ್ತ ಆಗಿನ ಕಾಲಕ್ಕೇ ನಾಲ್ಕಾರು ಸಾವಿರ ರೂಪಾಯಿಗಳಾಗುತ್ತಿತ್ತು. ಹಣ ದೊರೆತ ಕೂಡಲೆ ಶ್ರೀಗಳವರು ಲೆಕ್ಕ ಚುಕ್ತಾ ಮಾಡುತ್ತಿದ್ದರು. ಆದರೆ ಹಣ ಸಿಗುವುದು ಅಷ್ಟೇ ದುಸ್ತರ ಆ ಕಾಲದಲ್ಲಿ....

"ಒಮ್ಮೆ ಹೇಗಾಯಿತೆಂದರೆ – ನಾಲ್ಕು ತಿಂಗಳಾದರೂ ಕೆಂಪಣ್ಣನವರಿಗೆ ಹಣ ಸಂದಾಯ ವಾಗಲಿಲ್ಲ. ಅಂದರೆ ಶ್ರೀಗಳವರಿಗೆ ಹಣ ದೊರಕಲಿಲ್ಲ. ನಿಜ ಹೇಳಬೇಕೆಂದರೆ ಶ್ರೀಗಳವರು ಹಣ ಕೇಳಲು ಬಂದು ಹೋಗುವ ಕೆಂಪಣ್ಣನವರ ಕಣ್ಣಿಗೆ ಬೀಳದಿರಲು ಪ್ರಯತ್ನಿಸಿದ್ದುದುಂಟು! ಆದರೆ ಇದು ಎಷ್ಟು ದಿನ ನಡೆಯಲು ಸಾಧ್ಯ ?

"ಆ ಸಂಜೆ ಯಥಾಪ್ರಕಾರ ಶ್ರೀಗಳವರು ಮರದ ಅಡಿಯಲ್ಲಿ ಕುಳಿತಿದ್ದಾರೆ–ತಮ್ಮ ಪುಟ್ಟ ಕಾರ್ಯಾಲಯದ ಅಂಗಳದಲ್ಲಿ. ನಾನು ಹತ್ತಿರವೇ ಇದ್ದೆ. ಆ ಸಮಯವನ್ನು ನೋಡಿಕೊಂಡು ಹಣ ಕೇಳಲು ಕೆಂಪಣ್ಣನವರ ಆಗಮನವಾಯಿತು ! ಆದರೆ ಆತ ಮಾಡಿದ ತಪ್ಪೆಂದರೆ–ಮೌನವಾಗಿ ಬರದೆ, ಅಷ್ಟು ದೂರ ದಾರಿಯಲ್ಲೇ ಸಿಕ್ಕಿದ ಹಾಸ್ಟಲಿನ ವಿದ್ಯಾರ್ಥಿಯನ್ನು

"ಏನಪ್ಪಾ ನಿಮ್ಮ ಸ್ವಾಮಿಗಳು ಇದ್ದಾರಾ?"

– ಎಂದು ಕೇಳಿದ್ದರು.

ಸರಿ ಅವರ ಮಾತು ಕೇಳುವುದರ ಜೊತೆಗೆ ಅವರು ಬರುತ್ತಿರುವುದು ಶ್ರೀಗಳವರಿಗೆ ತಿಳಿದುದೇ ತಡ ಕುರ್ಚಿಯಿಂದ ತಕ್ಷಣ ಎದ್ದವರೆ ಸಮೀಪದಲ್ಲಿದ್ದ ನನ್ನನ್ನು ಕುರಿತು –

"ನೋಡು, ಆ ಕೆಂಪಣ್ಣ ಬರ್‍ತಿದ್ದಾನೆ ! ಕೇಳಿದರೆ, ಸ್ವಾಮಿಗಳಿಲ್ಲ, ಎಲ್ಲೊ ಹೊರಗಡೆ ಹೋಗಿದ್ದಾರೆ ಅಂತ ಹೇಳು !"

– ಎಂದವರೇ ಒಳಕ್ಕೆ ನಡೆದು ಬಿಟ್ಟರು !

ಸ್ವಾಮಿಗಳು ಇದ್ದಾರೆಂದು ಖಚಿತವಾಗಿ ತಿಳಿದುಕೊಂಡೇ ಬಂದಿದ್ದ ಕೆಂಪಣ್ಣ ಖಾಲಿ ಕುರ್ಚಿಯನ್ನು ನೋಡಿ, ನನ್ನ ಕಡೆ ತಿರುಗಿ –

"ಎಲ್ಲಯ್ಯಾ..... ನಿಮ್ಮ ಸ್ವಾಮಿಗಳು ?!" – ಎಂದರು.

ಅವರು ಕೇಳಿದ ರೀತಿ ಸ್ವಾಮಿಗಳು ಎದ್ದು ಒಳಗಡೆ ಹೋಗಿದ್ದಾರಲ್ಲವೆ ಎಂಬಂತಿತ್ತು !

ನನ್ನ ಉತ್ತರ ಗೊತ್ತಲ್ಲ ! ಎಲ್ಲೊ ಹೊರಗಡೆ ಹೋಗಿದ್ದಾರೆ ಎಂದೆ ! ಅದಕ್ಕೆ ಕೆಂಪಣ್ಣ–

"ಏ, ಕಳ್ಳ ಭಡವಾ ! ನನಗೇ ಸುಳ್ಳು ಹೇಳ್ತೀಯೇನೋ ! ಈಗ ನಿಮ್ಮ ಸ್ವಾಮಿಗಳು ಇಲ್ಲಿ ಕುಳಿತರಲ್ಲಿಲ್ಲವೇನೋ ?"

– ಎಂದವರು, ಕೊಂಚ ತಡೆದು–

"ನನಗೆ ಗೊತ್ತು ಈಗ ನಿಮ್ಮ ಸ್ವಾಮಿಗಳು ಎಲ್ಲಿಗೆ ಹೋಗಿದ್ದಾರೇಂತ ! ಅವರು ಹೊರಗಡೆ ಹೋಗಿದ್ದಾರೇಂತ ಹೇಳು ಅಂತ ನಿನಗೆ ಹೇಳಿ ನಾನು ಬರೋದ ಕಂಡು ಒಳಗಡೆ ತಲೆಮರೆಸಿ ಕೊಂಡವರೆ ಅಲ್ವ ?!" – ಎಂದರು !

ಆದರೆ ಕೆಂಪಣ್ಣನವರ ಮಾತಿನಲ್ಲಿ ಕ್ರೌರ್ಯವಿರಲಿಲ್ಲ. ಬದಲಾಗಿ ಈ ಮಾತುಗಳನ್ನು ನಗುತ್ತ ಹೇಳಿದ್ದರು. ಮತ್ತೆ ಅವರೇನೇ –

"ಏನು ಮಾಡೋದು ? ನಿಮ್ಮಂಥ ನೂರಾರು ಬಡ ಮಕ್ಕಳನ್ನು ಎಲ್ಲೆಲ್ಲಿಂದಲೋ ಹಿಡಕೊಂಡು ಬಂದು ಊಟ ಹಾಕಿ ಓದು ಬರಹ ಕಲಿಸುತ್ತಿದ್ದಾರಲ್ಲಾ! ಅದನ್ನು ನೋಡಿದರೆ ಕರುಳು ಚುರ್ ಅನ್ನುತ್ತೆ. ಅದೇನು ಆಸೇನೋ ಈ ಸ್ವಾಮಿಗೆ ! ಹೆತ್ತು ಹೊತ್ತೋರಿಗೂ ಈ ಚಿಂತೆಯಿಲ್ಲ! ಈ ಮಹಾರಾಯನ ಶ್ರಮ ದೇವರಿಗೇ ಗೊತ್ತು! ಇರಲಿ, ಇರಲಿ.... ನೋಡೋಣ."

– ಎಂದುಕೊಳ್ಳುತ್ತ ಕೆಂಪಣ್ಣ ಹಿಂತಿರುಗಿ ಹೋದರು.

ಅವರು ಆ ಕಡೆ ಹೋಗಿ ಶ್ರೀಗಳವರು ಈಚೆಗೆ ಬಂದು ಇನ್ನೂ ಸರಿಯಾಗಿ ಕುಳಿತೇ ಇರಲಿಲ್ಲ ಅಡಿಗೆಯವ ಬಂದು ಏನೇನೋ ಸಾಮಾನು ಬೇಕು ಎಂದ !

ಮರು ಮಾತಾಡದ ಶ್ರೀಗಳು ಚೀಟಿಯನ್ನು ಬರೆದು ನನ್ನ ಕೈಗೆ ಕೊಡುತ್ತ ಮತ್ತೆ ಅದೇ ಕೆಂಪಣ್ಣನವರ ಅಂಗಡಿಗೆ ಹೋಗಿ ಬರಲು ಹೇಳಿದರು !

ಕೆಂಪಣ್ಣನವರು ಹಣದಿಂದ ಶ್ರೀಮಂತರು, ನಿಜ. ಆದರೆ ಅದಕ್ಕಿಂತ ಹೆಚ್ಚಾಗಿ ಹೃದಯ ಶ್ರೀಮಂತರೂ ಆಗಿದ್ದರು. ನಾನು ತೆಗೆದುಕೊಂಡು ಹೋಗಿದ್ದ ಚೀಟಿಯಲ್ಲಿ ತಿಳಿಸಿದ್ದಂತೆ ಸಾಮಾನುಗಳನ್ನು ಕಟ್ಟಿಕೊಡುತ್ತ, ಶ್ರೀಗಳವರ ಹೋರಾಟದ ಬದುಕನ್ನು ಮತ್ತೊಮ್ಮೆ ಸ್ಮರಿಸುತ್ತ–

"ನಿಮ್ಮ ಸ್ವಾಮಿಗಳು ಅದ್ಯಾವಾಗ ದುಡ್ಡು ಕೊಡ್ತಾರೊ ಕೊಡಲಿ. ನಾನೂ ಕಾಯ್ತಿನಿ" – ಎಂದರು !

ಅಂತಹ ವರ್ತಕರನ್ನು ಈಗ ಕಾಣಲಾದೀತೆ ?

ಅಂತಹ ತಾಯಿಯೂ ತಂದೆಯೂ ಆಗಿದ್ದಂಥ ಸ್ವಾಮಿಗಳನ್ನು ಮತ್ತೊಮ್ಮೆ ಕಾಣಲಾದೀತೇ ?....

ವಿದ್ಯಾರ್ಥಿಗಳಿಗೆ ತಾಯಿಯಾಗಿ ಊಡಿದರು, ಉಣಬಡಿಸಿದರು....

ತಂದೆಯಾಗಿ ಕಷ್ಟಸುಖಗಳನ್ನು ನೋಡಿಕೊಂಡರು.

ಹಟಮಾರಿ ವಿದ್ಯಾರ್ಥಿಗಳನ್ನು ಮಮತೆಯಿಂದ ನೋಡಿಕೊಳ್ಳುತ್ತಿದ್ದರು.

## ಬಯಲು ಬಯಲ ಬೆರೆತ ಪರಿ

ಶ್ರೀಗಳವರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೊಂದಿಗೆ ಬೆಂಗಳೂರಿನ ಬನಶಂಕರಿ ದೇವಾಲಯದಲ್ಲಿ ಬಿಡಾರ ಮಾಡಿದ್ದಾಗ, ಅಲ್ಲಿಗೆ ಅನಿರೀಕ್ಷಿತವಾಗಿ ಸಿದ್ಧಗಂಗಾ ಶ್ರೀಗಳವರು ಆಗಮಿಸಿದರು.

ಅದೇ ಶ್ರೀ ಶಿವರಾತ್ರಿ ರಾಜೇಂದ್ರರ ಮತ್ತು ಶ್ರೀ ಸಿದ್ಧಗಂಗಾಧೀಶ್ವರರ ಪ್ರಥಮ ಭೇಟಿ. ಶ್ರೀ ಗೌರೀಶಂಕರ ಸ್ವಾಮಿಗಳವರಿಗೆ ಆನಂದವೋ ಆನಂದ ! ಪರಸ್ಪರ ವಂದನೆ-ಅಭಿವಂದನೆಗಳಾದ ಮೇಲೆ – ಇಬ್ಬರಿಗೂ ಪರಸ್ಪರ ಪರಿಚಯಮಾಡಿಕೊಟ್ಟರು. ಸುತ್ತೂರು ಶ್ರೀಮಠಕ್ಕೂ, ಸಿದ್ಧಗಂಗಾ ಶ್ರೀ ಕ್ಷೇತ್ರಕ್ಕೂ ಶತಶತಮಾನಗಳ ಸಂಬಂಧವನ್ನು ತಿರುವಿಹಾಕಿದರು. ಸುತ್ತೂರು ವೀರಸಿಂಹಾಸನಾಧೀಶ್ವರರಾಗಿದ್ದ ಶ್ರೀ ಘನಲಿಂಗಿದೇವರ ಕಾಲದಿಂದ ಎರಡೂ ಶ್ರೀ ಮಠಗಳ ಬಾಂಧವ್ಯ– ಹಾಲು ಜೇನು ಬೆರತಂತೆ, ಮಧುರವಾಗಿ ಇತ್ತೋಪತಿಶಯವಾಗಿ ಬೆಳೆದು ಬಂದಿರುವುದನ್ನು ಮೆಲುಕುಹಾಕಿದರು. "ನೀವಿಬ್ಬರೂ ಕರ್ನಾಟಕದ ಕಣ್ಣುಗಳು ನೀವು ಜ್ಞಾನಪ್ರದೀಪರು. ನೀವು ಕರ್ನಾಟಕದ ಬಡ ಜನತೆಗೆ ಜ್ಞಾನವನ್ನು ಪ್ರಸಾರ ಮಾಡುತ್ತಿರುವಿರಿ. ನಿಮ್ಮಿಂದ ಕರ್ನಾಟಕ ಧನ್ಯ" – ಎಂದು ಮುಕ್ತಕಂಠದಿಂದ ಸ್ತುತಿಸಿದರು.

ಪೂಜೆ, ಪ್ರಸಾದ ಆದಮೇಲೆ ರಾತ್ರಿ ಸುಮಾರು ಹತ್ತು ಗಂಟೆ ಮೀರಿತ್ತು – ಸಿದ್ಧಗಂಗಾ ಮಠಾಧೀಶರು ಬೀಳ್ಕೊಂಡರು. ಹಾರ್ದಿಕವಾಗಿ ಬೀಳ್ಕೊಡಲು ಹೊರಬಂದು, ಬೀಳ್ಕೊಟ್ಟು,

ಅವರ್ಣನೀಯ ಆನಂದದಿಂದ ಒಳಬಂದಾಗ ಪರಿಚಾರಕರು ಶ್ರೀ ಗೌರೀಶಂಕರ ಸ್ವಾಮಿಗಳವರ ಶಯ್ಯೆಯನ್ನು ಕೊಡಹಲು ಮುಂದಾಗಿದ್ದುದನ್ನು ಕಂಡವರೇ ಧಾವಿಸಿ ಬಂದು ಅದನ್ನು ತಡೆದು–

"ನನ್ನ ಶ್ರಮವನ್ನೆಲ್ಲಾ ವ್ಯರ್ಥ ಮಾಡುತ್ತಿದ್ದೀರಿ."

–ಎಂದಾಗ ಎಲ್ಲರಿಗೂ ಅಚ್ಚರಿ ! ಯಾರಿಗೂ ಈ ಮಾತಿನ ಅಂತರಾರ್ಥ ಹೊಳೆಯಲಿಲ್ಲ. ಆಗ ಶ್ರೀಗಳವರೇ ಸಮಾಧಾನದ ನುಡಿಗಳನ್ನಾಡಿದರು –

"ಶರಣರ ಪಾದಧೂಳಿನ ಮೇಲೆ ಮಲಗಿ ಈ ದೇಹವನ್ನು ಪಾವನಗೊಳಿಸಿಕೊಳ್ಳಲೆಂದೇ ಶ್ರೀ ಸಿದ್ಧಗಂಗಾ ಮಠಾಧೀಶರನ್ನು ಹಾಸಿಗೆಯ ಮೇಲೆ ಆಸೀನರಾಗುವಂತೆ ಪ್ರಾರ್ಥಿಸಿದ್ದೆ. ಪಾದಧೂಳಿಯನ್ನೇ ಕೊಡಹಿಬಿಟ್ಟಿಲ್ಲವಲ್ಲ, ಸದ್ಯ ! ಹಾಗೆ ಮಾಡಿದ್ದರೆ ಅಯಾಚಿತವಾಗಿ ಲಭ್ಯವಾದ ಭಾಗ್ಯವನ್ನು ಕಳೆದುಕೊಂಡಂತಾಗುತ್ತಿತ್ತು !"

ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು–ಶ್ರೀಗಳವರು ಏರಿದ ಎತ್ತರವನ್ನು ಮನಗಂಡು– 'ನೀವೇರಿದೆತ್ತರಕ್ಕೆ ನಾನೂ ಏರುವಂತೆ ಅನುಗ್ರಹಿಸಿರಿ' –ಎಂದು ಮನದಲ್ಲೇ ಪ್ರಾರ್ಥಿಸಿದರು.

* * *

ತಾವು ವಹಿಸಿದ್ದ ಪಂಚಗವಿಮಠದ ಅಧ್ಯಕ್ಷಪೀಠದಲ್ಲಿ ಮತ್ತೆ ವಿರಾಜಮಾನರಾಗಬೇಕೆಂದೂ, ನಿತ್ಯ ತಮ್ಮ ದರ್ಶನಭಾಗ್ಯವನ್ನು ಕರುಣಿಸಬೇಕೆಂದೂ, ತಮ್ಮ ಪಾದೋದಕ ಪ್ರಸಾದ ನೀಡಿ ಉದ್ಧರಿಸಬೇಕೆಂದೂ ಡೋವೇಜರ್ ಮಹಾರಾಣಿಯವರ ಮನವಿಗಳ ಮೇಲೆ ಮನವಿಗಳ ಮೇರೆಗೆ, ಮೈಸೂರಿನ ನಾಗರಿಕರ, ಭಕ್ತರ, ಜನರ ಏಕಗ್ರೀವ ಪ್ರಾರ್ಥನೆಗೆ ಸ್ಪಂದಿಸಿ, ಅಲ್ಲದೆ ತಾವು ಮೂವತ್ತು ವರ್ಷಗಳ ಹಿಂದೆ ವಹಿಸಿಕೊಂಡ ಮಠಾಧ್ಯಕ್ಷ ಸ್ಥಾನವನ್ನು ಕರ್ತವ್ಯ ದೃಷ್ಟಿಯಿಂದ ಮತ್ತೆ ವಹಿಸಿಕೊಳ್ಳುವುದು ಸೂಕ್ತವೆಂತಲೂ ಭಾವಿಸಿ, ಒಂದು ಶುಭದಿನ ಶ್ರೀ ಶಿವರಾತ್ರಿ ರಾಜೇಂದ್ರರ ಬಹುಕಾಲದ ಪ್ರಾರ್ಥನೆ-ಮನವಿಗಳನ್ನು ಒಪ್ಪಿಕೊಂಡರೋ ಎಂಬಂತೆ, ಶ್ರೀಗಳವರ ಜೊತೆಗೆ ಮೈಸೂರಿಗೆ ಆಗಮಿಸಿ, ಮೈಸೂರು ನಾಗರಿಕರ, ಅರಮನೆಯವರ, ಹೃತ್ಪೂರ್ವಕ ಸ್ವಾಗತಕ್ಕೆ ಉತ್ತರರೂಪವಾಗಿ ಮತ್ತೆ ಶ್ರೀ ಪಂಚಗವೀಮಠದಲ್ಲಿ ಕರ್ತವ್ಯ ನಿರತರಾದರು.

ನಿತ್ಯವೂ ಡೊವೇಜರ್ ಮಹಾರಾಣಿಯವರು ಮಠಕ್ಕೆ ಆಗಮಿಸಿ, ಶ್ರೀಗಳವರ ಪೂಜೆ ಪ್ರಸಾದಗಳ ಕೈಂಕರ್ಯವನ್ನು ಮನಸಾ ನೆರವೇರಿಸಿ, ಶ್ರೀಗಳವರ ಉಪದೇಶಾಮೃತದ ಸವಿಯಲ್ಲಿ ತಲ್ಲೀನರಾಗುತ್ತಿದ್ದರು. ಶ್ರೀಮನ್ಮಹಾರಾಣಿಯವರು ಆಧ್ಯಾತ್ಮಿಕ ವಿಷಯಗಳ ಬಗ್ಗೆ ತಿಳಿಯಲು ಸದಾ ಹಂಬಲಿಸುತ್ತಿದ್ದರು. ತಮ್ಮಲ್ಲಿ ತಲೆದೋರಿದ ಸಂದೇಹಗಳನ್ನು ಶ್ರೀಗಳವರ ಸನ್ನಿಧಿಯಲ್ಲಿ ವ್ಯಕ್ತಪಡಿಸಲು ಹಿಂಜರಿಯುತ್ತಿರಲಿಲ್ಲ. ಸಮಾಜಜೀವನದ ನೈತಿಕ ವಿಷಯಗಳಿಂದ ತೊಡಗಿ ಆತ್ಮಸಾಕ್ಷಾತ್ಕಾರದವರೆಗೆ ಹಲವಾರು ವಿಷಯಗಳನ್ನು

ಮಹಾರಾಣಿಯವರು ಕೇಳುತ್ತಿದ್ದರು. ಎಲ್ಲವನ್ನೂ ಹಸನ್ಮುಖಿಗಳಾಗಿ, ಸರಳವಾಗಿ ಶ್ರೀಗಳವರು ವಿವರಿಸುತ್ತಿದ್ದರು.

ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಂತೂ ಸದಾ ಶ್ರೀಗಳವರ ಸಹವರ್ತಿಗಳಾಗಿರುತ್ತಿದ್ದರು. ಬೆಳಗಿನಜಾವವೇ ತಮ್ಮ ವಿದ್ಯಾರ್ಥಿ ಕ್ಷೇಮಪಾಲನೆಯ ಕಾಯಕಕ್ಕೆ ಹೊರಟರೆ, ಹಿಂತಿರುಗಿ ಬರುತ್ತಲೇ ಶ್ರೀ ಗೌರೀಶಂಕರ ಸ್ವಾಮಿಗಳವರ ಬಳಿಗೆ ನೇರವಾಗಿ ಆಗಮಿಸಿ–ಇಂಥ ಆಧ್ಯಾತ್ಮಿಕ ವಿಚಾರಗಳಲ್ಲಿ ಸಕ್ರಿಯವಾಗಿ ತೊಡಗುತ್ತಿದ್ದರು.

ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೂ, ಶ್ರೀಮನ್ಮಹಾರಾಣಿಯವರೂ– ಹೀಗೆ ಇಬ್ಬರೂ ಶ್ರೀಗಳವರ ಕೃಪಾವಲಂಬಿಗಳಾಗಿ ಅವರ ಎಲ್ಲ ವ್ಯವಹಾರಗಳಲ್ಲಿ ನೆರವಾಗುತ್ತಿದ್ದುದರಿಂದ ಶ್ರೀ ಪಂಚಗವೀಮಠವು ನಿತ್ಯದಾಸೋಹ ಕೇಂದ್ರವಾಗಿತ್ತು. ಶ್ರೀಗಳವರ ದರ್ಶನಕ್ಕಾಗಿ ಭಕ್ತಾದಿಗಳು, ಗುರು–ಜಂಗಮರು ಬರುತ್ತಿದ್ದರು ; ಬಂದವರು ಅನ್ನಪ್ರಸಾದ, ಜ್ಞಾನಪ್ರಸಾದವನ್ನು ಪಡೆದು ಪುನೀತರಾಗುತ್ತಿದ್ದರು.

ಹೃಷಿಕೇಶದ ಶಿವಾನಂದಾಶ್ರಮದ ಸ್ಥಾಪಕರಾದ ಸ್ವಾಮಿ ಶಿವಾನಂದರು ಆಗಮಿಸಿ ಶ್ರೀ ಗೌರೀಶಂಕರ ಸ್ವಾಮಿಗಳವರೊಡನೆ ಕುಶಲ ಸಂಭಾಷಣೆ ನಡೆಸಿ, ಆನಂದದಲ್ಲಿ ಓಲಾಡಿದರು!

ಶ್ರೀ ಪಂಚಗವೀಮಠ ಯಾತ್ರಾಸ್ಥಳವಾಯಿತು.

ಡೊವೇಜರ್ ಮಹಾರಾಣಿಯವರು ಅತ್ಯಂತ ಆಚಾರಶೀಲರು. ಅರಮನೆಯಲ್ಲಿ ಅನೂಚಾನವಾಗಿ ಪಾಲಿಸುತ್ತಿದ್ದ ಹಲವು ಕಂದಾಚಾರದ ಪದ್ಧತಿಗಳನ್ನೇ ಅವರು ಆಚಾರವೆಂದು ನಂಬಿದ್ದರು. ಅಸ್ಪೃಶ್ಯರು, ಶೂದ್ರರು ಮುಟ್ಟಿದ್ದ ವಾರ್ತಾಪತ್ರಿಕೆಯನ್ನು ಅವರು ಮಡಿಯಲ್ಲಿರುವ ಸಮಯದಲ್ಲಿ ಮುಟ್ಟುತ್ತಲೇ ಇರಲಿಲ್ಲ ! ಆದುದರಿಂದ ತನ್ನಂಥ ಆಚಾರಶೀಲಳಿಗೆ -- ತೀರ್ಥ ಪ್ರಸಾದವನ್ನು ಕೊಡುವ ಗುರುಗಳೂ ಸಹ ಅದಕ್ಕಿಂತ ನಿಷ್ಠಾವಂತರೂ ಆಚಾರಶೀಲರೂ ಆಗಿರಬೇಕೆಂಬುದಾಗಿ, ಈ ಗುರುಗಳು ಅಂಥವರು ಎಂಬುದಾಗಿ ದೃಢ ವಿಶ್ವಾಸ ತಳೆದಿದ್ದರು.

ಆದರೆ –

ಮಹಾರಾಣಿಯವರ ಈ ನಂಬಿಕೆ ಬುಡಮೇಲಾಗುವಂತಹ, ಅವರು ಆಚರಿಸುವ ಕಂದಾಚಾರ ಪದ್ಧತಿ ಅರ್ಥಹೀನ, ಪೊಳ್ಳು ಎಂದು ನಿರೂಪಿತವಾಗುವ ಘಟನೆಯೊಂದು ನಡೆಯಿತು–

ಆ ಘಟನೆ ಮಹಾರಾಣಿಯವರ ನಂಬಿಕೆಯನ್ನು ಪೊಳ್ಳು ಎಂದು ನಿರೂಪಿಸಿದರೆ ಅದೇ ಕಾಲಕ್ಕೆ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ವಾತ್ಸಲ್ಯಪೂರಿತ ಅಂತರಂಗದಲ್ಲಿ ಮೊಳಕೆದೋರಿದ್ದ ಬಯಕೆಯನ್ನು ದೃಢಗೊಳಿಸಿತು !

ಆ ಘಟನೆ –

ಮೈಸೂರು ನಗರದ ಅಶೋಕಪುರಂ ವಾಸಿಗಳಾದ ಹರಿಜನರು ತಮ್ಮ ಮೊಹಲ್ಲಾದಲ್ಲಿ ಮಹಾಲಿಂಗೇಶ್ವರ ದೇವಸ್ಥಾನವನ್ನು ನಿರ್ಮಿಸಿದ್ದರು. ಅಶೋಕಪುರಂನ ಹರಿಜನ ಹಿರಿಯರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪೂಜಾವಿಧಿಯ ಉದ್ಘಾಟನೆಯನ್ನು ಶ್ರೀ ಗೌರೀಶಂಕರ ಸ್ವಾಮೀಜಿಯವರ ಅಮೃತಹಸ್ತದಿಂದ ನೆರವೇರಿಸಬೇಕೆಂದು ಬಯಸಿದರು. ಆದರೆ ಆಚಾರ ಶೀಲರೂ ಮಡಿವಂತರೂ ಆದ ಮಠಾಧೀಶ್ವರರು ಹರಿಜನರಾದ ತಮ್ಮ ಕಾರ್ಯಕ್ರಮದಲ್ಲಿ ಭಾಗವಹಿಸುವರೋ ಇಲ್ಲವೋ ಎಂಬ ಸಂಶಯ ಅವರಲ್ಲಿ ಮೂಡಿದ್ದು ಸಹಜವೇ. ಏನೇ ಆಗಲಿ ಆಹ್ವಾನಿಸಿ ಬೇಡಿಕೊಳ್ಳೋಣ–ಎಂದು ಆ ಹಿರಿಯರು ನಿರ್ಧರಿಸಿ, ಶ್ರೀಗಳವರ ಸನ್ನಿಧಿಗೆ ಬಂದು ವಿನಯದಿಂದ ತಮ್ಮ ಆಹ್ವಾನವನ್ನು ಮಂಡಿಸಿದರು.

ಶ್ರೀಗಳವರು ಕ್ಷಣಮಾತ್ರವೂ ತಡಮಾಡದೆ, ಅತ್ಯಂತ ಸಂತೋಷದಿಂದ ಭಾಗವಹಿಸುತ್ತೇವೆ – ಎಂದು ತಿಳಿಸಿದರು.

ಶ್ರೀಗಳವರು ಹರಿಜನರ ಸಮಾರಂಭದಲ್ಲಿ ಭಾಗವಹಿಸಲು ಒಪ್ಪಿದ್ದಾರೆ–ಎಂಬ ಸಂಗತಿ ಡೊವೇಜರ್ ಮಹಾರಾಣಿಯವರಿಗೆ ಗೊತ್ತಾಗಿ, ಆಘಾತವೇ ಆಗಿಬಿಟ್ಟಿತು! ಕಳವಳಕ್ಕೀಡಾದರು, ವ್ಯಗ್ರಚಿತ್ತರಾದರು. ತಮ್ಮ ಮುಂದಿನ ನಡೆ ಏನು? ಎಂಬುದರ ಕುರಿತು ಚಿಂತಾಕ್ರಾಂತರಾದರು. ಇದಕ್ಕೆ ಶ್ರೀಗಳವರನ್ನೇ ಸಮಜಾಯಿಸಿ ಕೇಳೋಣ ಎಂದು ಸನ್ನಿಧಿಗೆ ಧಾವಿಸಿ ಬಂದರು.

"ಸ್ವಾಮೀಜಿಯವರೇ, ನೀವು ಪರಮ ಆಚಾರಶೀಲರೆಂದು ನಂಬಿ ನಾವು ಇದುವರೆಗೆ ತಮ್ಮಿಂದ ತೀರ್ಥಪ್ರಸಾದಗಳನ್ನು ಸ್ವೀಕರಿಸಿದೆವು. ಈಗ ನೀವು ಹರಿಜನರ ಕೇರಿಗೆ ಹೋಗಿ ಮೈಲಿಗೆಯಾದರೆ ನಾವು ಪ್ರಸಾದ ತೀರ್ಥವನ್ನು ತೆಗೆದುಕೊಳ್ಳುವುದು ಹೇಗೆ ?" -- ಎಂದು ಒಂದು ರೀತಿಯಲ್ಲಿ ಅಧಿಕಾರವಾಣಿಯಿಂದಲೇ, ತೀವ್ರ ಅಸಮಾಧಾನದಿಂದಲೇ ಪ್ರಶ್ನಿಸಿದ್ದು ಕೇಳಿ, ಅಲ್ಲಿ ಉಪಸ್ಥಿತರಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಗರಬಡಿದವ ರಂತಾಗಿಬಿಟ್ಟರು ! ಆದರೆ ಶ್ರೀ ಗೌರೀಶಂಕರಸ್ವಾಮೀಜಿಯವರು ನಿರ್ಮಲಹಾಸದಿಂದ ಮಹಾರಾಣಿಯವರನ್ನು ಪ್ರಶ್ನೆ ಮಾಡಿದರು –

"ನಾವು ಹರಿಜನರ ಕೇರಿಗೆ ಹೋಗುವುದಕ್ಕೂ ನೀವು ತೀರ್ಥಪ್ರಸಾದ ತೆಗೆದುಕೊಳ್ಳು ವುದಕ್ಕೂ ಏನು ಸಂಬಂಧ ತಾಯಿ ?"

"ನೀವು ಹರಿಜನರ ಕೇರಿಗೆ ಹೋದಮೇಲೆ ಮೈಲಿಗೆಯಾಗುವುದಿಲ್ಲವೇ ? ಆಚಾರ ಭಂಗವಾಗುವುದಿಲ್ಲವೇ ? ಆಗ ನಿಮ್ಮಿಂದ ತೀರ್ಥ-ಪ್ರಸಾದ ಪಡೆಯುವುದು ಹೇಗೆ ?"

"ಹರಿಜನರ ಕೇರಿಗೆ ಹೋದರೆ ನಾವೇಕೆ ಮೈಲಿಗೆಯಾಗುತ್ತೇವೆ ? ನಿಮಗೆ ಕೊಡುವ ತೀರ್ಥಪ್ರಸಾದಗಳೇಕೆ ಮೈಲಿಗೆಯಾಗುತ್ತವೆ ?"

"ಹರಿಜನರು ಅಸ್ಪೃಶ್ಯರಲ್ಲವೇ? ಅವರನ್ನು ಮುಟ್ಟಿದರೆ ಮೈಲಿಗೆಯಾಗುವುದಿಲ್ಲವೆ?"

"ನೀವು ನಮ್ಮಿಂದ ತೀರ್ಥಪ್ರಸಾದವನ್ನೇಕೆ ಪಡೆಯುತ್ತೀರಿ? ಯಾವ ಅಪೇಕ್ಷೆಯಿಂದ ಪಡೆಯುತ್ತಿದ್ದೀರಿ ತಾಯಿ?"

"ನಮ್ಮ ಜನ್ಮಜನ್ಮಾಂತರ ಮತ್ತು ಈ ಜನ್ಮದ ಪಾಪಗಳನ್ನು ಕಳೆದುಕೊಂಡು ಪಾವನರಾಗುವುದಕ್ಕೆ."

"ನಾವು ಕೊಡುವ ತೀರ್ಥಪ್ರಸಾದದಿಂದ ನೀವು ಪಾವನರಾಗುವುದಾದರೆ ನಮ್ಮ ದರ್ಶನದಿಂದ ಹರಿಜನರೂ ಪಾವನರಾಗುವುದಿಲ್ಲವೇ? ಅವರನ್ನು ಪಾವನಮಾಡುವುದು ಸನ್ಯಾಸಿಯ ಕರ್ತವ್ಯವಲ್ಲವೇ?"

ಮಹಾರಾಣಿಯವರು ನಿರುತ್ತರರಾದರು ! ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ –

"ತಾವು ದೊಡ್ಡವರು, ತಮ್ಮೊಡನೆ ವಾದಮಾಡಲು ಸಾಧ್ಯವಿಲ್ಲ. ಆದರೆ ಏನೇ ಆಗಲಿ ಅದರಿಂದ ನಮ್ಮ ಮನಸ್ಸಿಗೆ ಸಮಾಧಾನವಾಗುವುದಿಲ್ಲ" – ಎಂದರು.

ಅದಕ್ಕೆ ಶ್ರೀಗಳವರು ಶಾಂತಚಿತ್ತರಾಗಿ, ನಿರುದ್ವಿಗ್ನರಾಗಿ, ಮಮತಾಪೂರ್ಣ ಸ್ವರದಿಂದ ಹೇಳಿದರು –

"ಅರ್ಥವಿಲ್ಲದ ಆಚಾರ ವ್ಯರ್ಥ ತಾಯಿ. ಆಚಾರಕ್ಕೂ ತಾತ್ವಿಕ ಹಿನ್ನೆಲೆಯಿರಬೇಕು. ನಾವು ಸನ್ಯಾಸವನ್ನು ಸ್ವೀಕರಿಸಿರುವುದು ಜೀವನದಲ್ಲಿ ಅಗ್ನಿಯಂತೆ ಪರಿಶುದ್ಧವಾಗಿರುವುದಕ್ಕೋಸ್ಕರವಾಗಿ. ಹುಲ್ಲಿನ ಬಣವೆ ಎಷ್ಟೇ ದೊಡ್ಡದಿರಬಹುದು, ಉರಿಯ ಒಂದು ಕಿಡಿಯಿಂದ ಅದು ಸುಟ್ಟುಹೋಗುವುದೇ ಹೊರತು ಬೆಂಕಿ ತನ್ನ ಶಕ್ತಿಯನ್ನು ಕಳೆದುಕೊಳ್ಳುವುದಿಲ್ಲ. ಹಾಗೆ, ಹರಿಜನರ ಕೇರಿಗೆ ಹೋದ ಮಾತ್ರದಿಂದ ನಾವು ಅಶುದ್ಧರಾದರೆ ನಾವು ಪರಿಶುದ್ಧರಾಗಿದ್ದೇವೆ – ಎಂದು ಹೇಳುವುದೇ ಹಾಸ್ಯಾಸ್ಪದ !"

ಮಹಾರಾಣಿಯವರು ಅವಾಕ್ಕಾದರು.

ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳವರು ಪ್ರಫುಲ್ಲಿತಚಿತ್ತರಾದರು. ತಮ್ಮ ಬಯಕೆಗೆ ಬೆಂಬಲ ಸಿಕ್ಕಂತಾಯಿತು ಎಂದು ಉತ್ತೇಜಿತರಾದರು .....

ಶ್ರೀ ಗೌರೀಶಂಕರ ಸ್ವಾಮಿಗಳವರು ಮುಂದುವರಿಸಿದರು –

"ಅಸ್ಪೃಶ್ಯತೆ ಎಂಬುದು ನಾವೇ ಕಲ್ಪಿಸಿ ಬೆಳೆಸಿದ ಅರ್ಥಹೀನ ವ್ಯವಹಾರ – ಇಂದು ಹರಿಜನರಾಗಿದ್ದವರು ನಾಳೆ ಕ್ರೈಸ್ತರೋ, ಮುಸಲ್ಮಾನರೋ ಆದರೆ ನಾವು ಅವರನ್ನು ಆಗ ಅಸ್ಪೃಶ್ಯರೆಂದು ಪರಿಗಣಿಸುವುದಿಲ್ಲ. ಅವರು ಮತಾಂತರಹೊಂದಿದರೆ ಅವರ ದೇಹದಲ್ಲಿರುವ ರಕ್ತ, ಮಾಂಸ, ಮೂಳೆ, ಜೀವ ಎಲ್ಲಾ ಬದಲಾಗಿಬಿಡುತ್ತದೆಯೇ ? ಅವರ ಸಂಸ್ಕಾರದಲ್ಲಿ ಮತಾಂತರಗೊಂಡ ಕೂಡಲೇ ಶೀಘ್ರ ಬದಲಾವಣೆ ಉಂಟಾಗುತ್ತದೆಯೇ ? ಅದು ಅಸಾಧ್ಯ ಎಂದು ಪರಿಗಣಿಸುವುದಾದರೆ ಅವರು ಹರಿಜನರಾಗಿದ್ದಾಗಲೇ ಅವರ ಆಚಾರ-ವಿಚಾರಗಳನ್ನು ಮಾರ್ಪಡಿಸಬಹುದು. ಆ ಕೆಲಸ ಮಾಡಲು ಬುದ್ಧ, ಬಸವಣ್ಣ, ಗಾಂಧೀಜಿ ಎಷ್ಟು ಪ್ರಯತ್ನ

ಮಾಡಿಲ್ಲ ! ಅದನ್ನು ಮುಂದುವರಿಸಬೇಕು. ಆದರೆ ಈ ಕುರಿತು ಸಮಾಜ ನಿಷ್ಕ್ರಿಯವಾಗಿದೆ. ಅದನ್ನು ಮುಂದುವರಿಸಲು ಮುಂದುವರಿದ ಜನರಿಗೆ, ಉತ್ತಮ ಕುಲದವರೆಂದು ಹೇಳಿಕೊಳ್ಳು ವವರಿಗೆ ಲವಲೇಶವೂ ಇಷ್ಟವಿಲ್ಲ ! ಆಗ ಹಿಂದೂ ಜನಾಂಗ ತನ್ನ ಗೌರವ ಪ್ರತಿಷ್ಠೆಗಳನ್ನು ಕಳೆದುಕೊಳ್ಳಬಹುದು. ಅದಕ್ಕೆ ಮುನ್ನ ನಾವೇ ಎಚ್ಚರಗೊಂಡು ಪ್ರವೃತ್ತರಾಗಿ ಅಸ್ಪೃಶ್ಯತೆಯ ಕಳಂಕವನ್ನು ತೊಡೆದು ಹಿಂದೂಧರ್ಮದ ಉದ್ಧಾರ ಕಾರ್ಯ ಮಾಡಬಾರದೇನು ? ನಾವೆಲ್ಲ ಒಬ್ಬ ಭಗವಂತನ ಮಕ್ಕಳಲ್ಲವೇ ? ನಾವು ಹೀಗೆ ಭೇದ ಮಾಡಿದರೆ ದೇವರಿಗೆ ದ್ರೋಹ ಬಗೆದಂತಲ್ಲವೇ ತಾಯಿ ?"

–ಎಂದು ಪ್ರಶ್ನೆ ಹಾಕಿದರು.

"ತಮ್ಮಂತಹ ಮಹಾನುಭಾವರಿಗೆ ಉತ್ತರ ಹೇಳುವ ಶಕ್ತಿ ನನಗಿಲ್ಲ. ಆದರೂ ವಂಶಪಾರಂಪರ್ಯವಾಗಿ ಬಂದ ಆಚಾರವನ್ನು ಹೇಗೆ ಬದಲಾಯಿಸುವುದು ?"

– ಎಂದು ಅರೆ ಮನಸ್ಸಿನಿಂದ ಪ್ರಶ್ನಿಸಿದರು.

ಶ್ರೀ ಸ್ವಾಮೀಜಿಯವರು –'ಇವರು ಮಹಾರಾಣಿಯವರು. ಇವರ ಪಂಚಗವೀಮಠದ ಅಧ್ಯಕ್ಷ ನಾನು. ನಾನು ಇವರ ಮನಸ್ಸಿಗೆ ಒಪ್ಪಿಗೆಯಾಗದಂಥದು ಹೇಳಿದರೆ, ನನ್ನ ಸ್ಥಾನ ಹೋಗಬಹುದು ?' – ಎಂದು ಎಳ್ಳಷ್ಟೂ ಯೋಚಿಸಲಿಲ್ಲ. ಇದು ಅವರ ಜಾಯಮಾನವೂ ಅಲ್ಲ. ನಿರ್ಭೀತಿಯೇ ಅವರ ಹುಟ್ಟುಗುಣ. ಅವರು ನ್ಯಾಯನಿಷ್ಠುರಿ, ದಾಕ್ಷಿಣ್ಯಪರರಲ್ಲ. ಲೋಕವಿರೋಧಿ ಎಂದು ಕರೆದರೂ ಚಿಂತೆಯಿಲ್ಲದವರು !

ಮಹಾರಾಣಿಯವರ ಪ್ರಶ್ನೆಗೆ ನೇರವಾದ, ನಿರ್ಭೀತಿಯ ಉತ್ತರ ನೀಡಿದರು –

"ಇಂತಹ ನೂರಾರು ಪದ್ಧತಿಗಳು ಬದಲಾಗಿವೆ. ಆಗುತ್ತಲೂ ಇವೆ. ಈಗ ನಿಮ್ಮ ಅರಮನೆಯ ಹಳೆಯಕಾಲದ ಪದ್ಧತಿಗಳೆಲ್ಲಾ ಉಳಿದಿವೆಯೇನು ? ಎಷ್ಟೊಂದು ಬದಲಾವಣೆ ಯಾಗಿಲ್ಲ ! ರಾಜರದ್ದೇ ರಾಜ್ಯ. ಪ್ರಜೆಗಳೆಲ್ಲಾ ಅವರ ಅಧೀನರು ಎಂಬ ಪದ್ಧತಿ ಇತ್ತು. ರಾಜರನ್ನು 'ವಿಷ್ಣ್ವಂಶು ಸಂಭೂತ' – ದೇವರ ಸಮಾನ–'ರಾಜಾ ಪ್ರತ್ಯಕ್ಷ ದೈವ' – ಎಂದು ಜನರು ನಂಬಿದ್ದರು, ಭಾವಿಸಿದ್ದರು. ರಾಜರುಗಳು ಮಾಡುವ ಎಷ್ಟೋ ಅನಾಚಾರಗಳಿಗೆ ಶಾಸ್ತ್ರಮನ್ನಣೆಯಿತ್ತು ! ಆದರೆ ಈಗ ರಾಜರು ಮಾಡುವ ಎಲ್ಲಾ ಕಾರ್ಯಗಳನ್ನು ಸರ್ಕಾರ ಮನ್ನಿಸುವುದಿಲ್ಲ. ಹಿಂದೆ ಇದ್ದ ರಾಜಪ್ರಭುತ್ವ ಈಗೆಲ್ಲಿದೆ ? ಹೀಗೆ, ನೋಡಿ ತಾಯಿ ನಾವು ಮಾಡಿಕೊಂಡ ಪದ್ಧತಿಗಳು ಸರ್ವಕಾಲಕ್ಕೂ ಸರಿಯಲ್ಲ. ಕಾಲಕ್ಕೆ ತಕ್ಕಂತೆ ಎಲ್ಲ ಬದಲಾವಣೆ ಯಾಗುತ್ತದೆ. ಅದರಂತೆ ವಿಚಾರವಂತರ ದೃಷ್ಟಿಯಲ್ಲಿ ಯಾವ ಆಚಾರಗಳು ಅರ್ಥಹೀನವೋ ಅವುಗಳನ್ನು ಬದಲಾಯಿಸಿ ಅರ್ಥಪೂರ್ಣ ಆಚಾರಗಳನ್ನು ಅನುಸರಿಸುವುದಕ್ಕೆ ಸಮಾಜದ ಗಣ್ಯರು, ಮಾನ್ಯರು, ಮಠಾಧೀಶರು ಮುಂದೆ ಬರದಿದ್ದರೆ ಮತ್ತಾರಿಂದ ಇದು ಸಾಧ್ಯ ? ಯಾವುದೋ ಕಾಲದಲ್ಲಿ – ಆಗ ಅನುಕೂಲಕ್ಕೆ ತಕ್ಕ ಆಚಾರಗಳು ಸೃಷ್ಟಿಯಾಗಿ, ಕಾಲಕ್ರಮೇಣ ಅವು ಅರ್ಥಹೀನವಾದರೂ – ಅವುಗಳ

ಬಲೆಯಲ್ಲಿಯೇ ಸಿಕ್ಕಿ ಸಾಯುವುದು ವಿಹಿತವೇ ? ಆದರಿಂದ ಪಾರಾಗುವ ಪ್ರಯತ್ನ ಮಾಡುವುದು ನಮಗೂ ಶ್ರೇಯಸ್ಕರ, ರಾಷ್ಟ್ರಕ್ಕೂ ಹಿತಕರ."

ಹಿಂದೂ ಸಂಸ್ಕೃತಿಯ ಪಾವಿತ್ರ್ಯಕ್ಕೆ ಅಸ್ಪೃಶ್ಯತೆಯೊಂದು ಕಳಂಕರೂಪವಾಗಿದೆ. ಅದನ್ನು ಪರಿಹರಿಸಲು ನಾವು ಯತ್ನಿಸದಿದ್ದರೆ ಆ ಸಂಸ್ಕೃತಿಗೆ ಎಂದಾದರೊಂದು ದಿನ ಅಪಾಯ ಸಂಭವಿಸುತ್ತದೆ—ಎಂಬುದು ಶ್ರೀ ಗೌರೀಶಂಕರಸ್ವಾಮಿಗಳವರ ಅಚಲ ಅಭಿಮತವಾಗಿತ್ತು.

ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಶ್ರೀಗಳವರ ವಿಚಾರಧಾರೆಯಿಂದ ಪ್ರಭಾವಿತರಾಗಿ, ತಮ್ಮಲ್ಲಿ ಹುದುಗಿದ್ದ ಬಯಕೆ–ಹರಿಜನರ ಉತ್ಕರ್ಷಕ್ಕೆ ಶ್ರಮಿಸುವುದು–ಮೈಸೂರು ನಗರದಲ್ಲಿ ಅವರಿಗಾಗಿ ಒಂದು ಉಚಿತ ವಿದ್ಯಾರ್ಥಿನಿಲಯವನ್ನು ಪ್ರಾರಂಭಿಸಿ 'ಗುರು ಕಾಣಿಕೆ' ಸಲ್ಲಿಸಿದರು !

* * *

ಅಂದು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರರು ಏಕಾಂಗಿಯಾಗಿ, ಕಾಶಿಗೆ ಬಂದು ತಮ್ಮ ಬಳಿ ಶಿಷ್ಯವೃತ್ತಿ ವಹಿಸುವ ತೀವ್ರಾಕಾಂಕ್ಷೆಯನ್ನು ವ್ಯಕ್ತಪಡಿಸಿದಾಗ, ಅವರಲ್ಲಿ ಅಂತರ್ನಿಹಿತಗೊಂಡಿದ್ದ ಲೋಕಕಾರುಣ್ಯದಿಂದ ಅಭೂತಪೂರ್ವ ಕಾರ್ಯಗಳು ನಡೆಯಲಿವೆ ಎಂಬುದನ್ನು ಅರಿತು, ಅವರ ಮನಸ್ಸಿನಲ್ಲಿ ಆ ಲೋಕಕಾರುಣ್ಯ ಉಕ್ಕಿ ಹರಿಯಬೇಕಾದ ಕ್ಷೇತ್ರವನ್ನು ನಿರ್ದೇಶನ ಮಾಡಿದ್ದು–ಸಾರ್ಥಕವಾಗುತ್ತಿರುವುದನ್ನು ಕಂಡು ಹರ್ಷಿತರಾದರು–ಶ್ರೀ ಗೌರೀಶಂಕರ ಸ್ವಾಮಿಗಳವರು —

ಶ್ರೀ ಶ್ರೀ ರಾಜೇಂದ್ರ ಸ್ವಾಮಿಗಳವರು ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ, ನಿರಂತರ ಶ್ರಮದ ದುಡಿಮೆಗೆ ತಮ್ಮನ್ನು ಅರ್ಪಿಸಿಕೊಂಡುದನ್ನು ನೋಡಿದರು. ಟಿ. ನರಸೀಪುರದ ವಿದ್ಯಾರ್ಥಿನಿಲಯ ಈಗ ತನ್ನದೇ ಕಟ್ಟಡವನ್ನು ಪಡೆದು ದೊಡ್ಡದಾಗಿ ಬೆಳೆಯುತ್ತಿದೆ. ಚಾಮರಾಜನಗರದ ವಿದ್ಯಾರ್ಥಿನಿಲಯಕ್ಕೆ ಜಮೀನನ್ನು ಕೊಂಡು, ಅಲ್ಲಿ ಕಟ್ಟಡದ ನಿರ್ಮಾಣವಾಗುತ್ತಲಿದೆ. ಮೈಸೂರಿನ ವಿವಿಧ ಕಡೆಗಳಲ್ಲಿನ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಸಾವಿರವನ್ನು ದಾಟಿತ್ತು. ಇನ್ನೂ ಕೆಲವು ತಾಲ್ಲೂಕು ಕೇಂದ್ರಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಉತ್ಸುಕತೆಯಿಂದ ಸಿದ್ಧತೆಗಳು ಭರದಿಂದ ನಡೆದಿವೆ. ಇವೆಲ್ಲವುಗಳ ನಿರ್ವಹಣೆಗಾಗಿ ಅವಿಶ್ರಾಂತವಾಗಿ ಪ್ರಯಾಣ ಮಾಡಬೇಕಾಗುತ್ತಿತ್ತು. ಶ್ರೀಗಳವರು ಹೆಚ್ಚು ಸಮಯ ಪ್ರಯಾಣದಲ್ಲಿ ಕಾರಿನಲ್ಲಿಯೇ ಕಳೆಯುತ್ತಿದ್ದುದರಿಂದ, ರಸ್ತೆಯ ಧೂಳು ಅವರಲ್ಲಿ ಬರಗೆಮ್ಮನ್ನು ಹುಟ್ಟಿಹಾಕಿತ್ತು, ನೆಟ್ಟಿತ್ತು !

ಕೆಲವು ವಿಷಯಗಳಿವೆಯಂತೆ–ಅವುಗಳನ್ನು ಏನು ಮಾಡಿದರೂ ಮುಚ್ಚಿಡಲಾಗುವುದಿಲ್ಲವಂತೆ ! ಅವುಗಳಲ್ಲಿ ಈ ಕೆಮ್ಮು ಒಂದು !

ಮಠಕ್ಕೆ ನಿತ್ಯ ಬರುವ ಭಕ್ತರಲ್ಲಿ ಕೊಂಚ ವಯಸ್ಸಾದ ಹಿರಿಯರು — ಸಂಗನ ಬಸಪ್ಪನವರೆಂಬ ವರ್ತಕರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರರನ್ನು ಕಾಡುತ್ತಿರುವ ಕೆಮ್ಮನ್ನು

ಕಂಡುಹಿಡಿದೇಬಿಟ್ಟರು ಎನ್ನಬೇಕು – ಏಕೆಂದರೆ ಶ್ರೀಗಳವರು ನಾಲ್ಕು ಜನರ ಮಧ್ಯೆಯಿದ್ದಾಗ ಅತಿ ಕಷ್ಟದಿಂದ ಕೆಮ್ಮನ್ನು ತಡೆಯುತ್ತಿದ್ದರು. ಆದರೂ ಅದು ಕೋಪಗೊಂಡು, ಒಳಗೇ ಕೊಸ ಕೊಸ, ದುಸುದುಸು ಮಾಡುತ್ತಿತ್ತು ! – ಇದನ್ನು ಪತ್ತೆಹಚ್ಚಿದ ಆ ವರ್ತಕರು, ಎಲ್ಲರೂ ಹೊರಗೆ ಹೋದಮೇಲೆ, ಶ್ರೀ ಗೌರೀಶಂಕರ ಸ್ವಾಮಿಗಳವರ ಸಮಕ್ಷಮದಲ್ಲಿ ಶ್ರೀಗಳವರನ್ನು ಪ್ರಶ್ನಿಸಿದರು– ಆಪ್ಯಾಯತೆಯಿಂದ–

"ಬುದ್ದೀ ನೀವು ನಿಮ್ಮ ಶ್ವಾಸಕೋಶದ ಪಂಜರದಲ್ಲಿ ಯಾವುದೋ ವಿಚಿತ್ರ ಪಕ್ಷಿಯನ್ನು ಸಾಕುತ್ತಿದ್ದೀರಲ್ಲಾ !" — ಎಂದರು, ಮುಗುಳು ನಗುತ್ತ.

ಅವರ ಮುಗುಳುನಗೆಗೆ ಶ್ರೀಗಳವರು ಮುಗ್ಧಮನೋಹರ ಮಂದಹಾಸವನ್ನು ಬೆಳಗಿಸಿ –

"ಛೇ ಛೇ ! ಹಾಗೇನಿಲ್ಲವಲ್ಲಾ !" – ಎಂದರು.

"ತಪ್ಪು ತಿಳಿಯಬೇಡಿ.... ಎಲ್ಲಿ ಒಂದೆರಡು ಸಲ ಜೋರಾಗಿ ಉಸಿರಾಡಿ, ನೋಡೋಣ !"

"ಅಯ್ಯೋ ಅದಕ್ಕೇನು ಬಿಡಿ, ಎಲ್ಲೋ ಸ್ವಲ್ಪ ಕೆಮ್ಮು ಅಷ್ಟೆ !"

"ಸ್ವಲ್ಪ ಕೆಮ್ಮು ! ಸ್ವಲ್ಪವೇ ಮತ್ತೆ ದೊಡ್ಡದಾಗೋದು. ಅದನ್ನು ಸಾಕಿಸಲಹಿ ತೊಂದರೆ ಗೊಳಗಾಗಬೇಡಿ. ತುರ್ತಾಗಿ ಡಾಕ್ಟರಿಗೆ ತೋರಿಸಿ."

"ಏನೋ ಹೀಗೇ, ಕೆಲಸಕಾರ್ಯಗಳಲ್ಲಿ ಸಮಯವೇ ಸಿಕ್ಕೋಲ್ಲ."

"ಯಾರ ಯಾರವೋ ಮಕ್ಕಳ ಯೋಗಕ್ಷೇಮದಲ್ಲಿ ದುಡಿದು ದುಡಿದು ನವೆಯುತ್ತಿದ್ದೀರಿ. ಮೊದಲು ಡಾಕ್ಟರಿಗೆ ತೋರಿಸಿ."

"ಏನೋ ಸೇವೆಗೆ ಅಂತ ಹೊರಟಿದ್ದೀವಿ. ದೇವರು ಕಾಪಾಡುತ್ತಾನೆ ಬಿಡಿ. ಅಕಸ್ಮಾತ್ ದೇವರು ಕೈ ಬಿಟ್ಟರೆ ಹೊರಡಲು ಸಿದ್ಧರಾಗಿದ್ದೇವೆ. ಅದಕ್ಕೇಕೆ ಅಷ್ಟು ಚಿಂತಿಸಬೇಕು ?!"

"ಚೆನ್ನಾಯ್ತು ! ಅಲ್ಲ ಬುದ್ದೀ ನೀವು ಕೈಯ್ಯಾರೆ ತಂದುಕೊಂಡಿರುವ ಈ ಕೆಮ್ಮು-ದಮ್ಮು ವಾಸಿಮಾಡಲು ಆ ಶಿವನೇ ಬರಬೇಕೇ ? ದಯವಿಟ್ಟು ಕೂಡಲೇ ಡಾಕ್ಟರಿಗೆ ತೋರಿಸಿ" – ಎಂದು ನಕ್ಕರು.

"ತೋರಿಸಿಲ್ಲ ಅಂತಲ್ಲ–ತೋರಿಸಿದೆವು. ಅವರು ಮಾಮೂಲಾಗಿ ಹೇಳುವಂತೆ 'ಧೂಳಿನಲ್ಲಿ ಸುತ್ತಾಡಬೇಡಿ. ಹೊತ್ತು ಹೊತ್ತಿಗೆ ಊಟಮಾಡಿ, ವಿಶ್ರಾಂತಿ ತಗೊಳ್ಳಿ' ಅಂದರು. ಅಷ್ಟೇ ಇನ್ನೇನಿಲ್ಲವಂತೆ !"

ಅದುವರೆಗೂ ಮೌನವಾಗಿ ಇದನ್ನೆಲ್ಲಾ ನೋಡುತ್ತ, ಕೇಳುತ್ತ ಕುಳಿತಿದ್ದ ಶ್ರೀ ಗೌರೀಶಂಕರ ಸ್ವಾಮೀಜಿಯವರು ತೀರ್ಪು ಕೊಟ್ಟುಬಿಟ್ಟರು –

"ನಾಳೆಯಿಂದ ನೀವು ಬೆಳಿಗ್ಗೆ ಪೂಜೆ-ಪ್ರಸಾದ ಸ್ವೀಕರಿಸಿ ಎಲ್ಲಿಗೇ ಹೋಗಿ, ಆದರೆ ಸಂಜೆ ಎಲ್ಲಿದ್ದರೂ ಹಿಂತಿರುಗಿ ಬರಲೇ ಬೇಕು, ನೀವು ಹಿಂತಿರುಗಿಬರುವತನಕ ನಾನು ಪೂಜೆ-ಪ್ರಸಾದ ಮಾಡುವುದಿಲ್ಲ. ನೀವು ಬರುವುದು ಎಷ್ಟೇ ತಡವಾದರೂ ನಾವು ಕಾಯ್ತಾ ಇರ್ತೇವೆ."

ಶ್ರೀಗಳವರು ಅನಿವಾರ್ಯವಾಗಿ ಈ ದೈನಂದಿನ ಕಟ್ಟುಪಾಡಿಗೆ ಒಪ್ಪಿಕೊಳ್ಳಲೇ ಬೇಕಾಯಿತು. ನಿಧಾನವಾಗಿ ಕೆಮ್ಮು ಕಂಬಿಕಿತ್ತಿತು. ಆದರೂ ಒಂದು ದಿನ –

ಶ್ರೀಗಳವರು ಬೆಂಗಳೂರಿಗೆ ಜರೂರು ಕಾರ್ಯನಿಮಿತ್ತ ಹೋದವರು ಹಿಂತಿರುಗಿ ಬೇಗ ಬರಲಾಗಲಿಲ್ಲ. ದೂರವಾಣಿಯ ಮೂಲಕ ಕೊಂಚ ತಡವಾಗಿ ಬರುತ್ತೇನೆ ಎಂದೇನೋ ತಿಳಿಸಿದರು. ಶ್ರೀ ಗೌರೀಶಂಕರ ಸ್ವಾಮಿಗಳವರು ಸ್ನಾನಮಾಡಿ ಪೂಜಾಗೃಹಕ್ಕೆ ತೆರಳಿ ಕಾಯುತ್ತ ಕುಳಿತರು. ಮಧ್ಯಾಹ್ನ ಬಿಸಿಲು ಬಾಡಿ, ಸಂಜೆ ಕಾಲಿಟ್ಟಿತು. ಸಂಜೆಗತ್ತಲು ವ್ಯಾಪಿಸತೊಡಗಿತು. ಮಧ್ಯಾಹ್ನ ಶ್ರೀ ಗೌರೀಶಂಕರ ಸ್ವಾಮಿಗಳವರು ಪೂಜಾಗೃಹದಲ್ಲಿ ಕುಳಿತವರು ಪ್ರಸಾದ ಸ್ವೀಕರಿಸಲೂ ಹೊರಗೆ ಬಾರದೇ ಅಲ್ಲಿಯೇ ಕಾಯುತ್ತ ಕುಳಿತಿದ್ದಾರೆ ! ಶ್ರೀಗಳವರ ಸಲುವಾಗಿ ಹಣ್ಣುಗಳನ್ನು ಬಿಡಿಸಿ, ನಾರು, ಬೀಜಗಳನ್ನು ಬಿಡಿಸಿ, ಹಣ್ಣಿನ ತೊಳೆಗಳನ್ನು ತಟ್ಟೆಯಲ್ಲಿಟ್ಟು ಕುಳಿತಿದ್ದಾರೆ ! ಶ್ರೀ ಶ್ರೀ ರಾಜೇಂದ್ರ ಸ್ವಾಮಿಗಳವರು ತರಾತುರಿಯಾಗಿ ಬಂದವರೇ ಸ್ನಾನಾದಿ ಗಳನ್ನು ಮುಗಿಸಿ, ಪೂಜಾಗೃಹಕ್ಕೆ ಬಂದು ನೋಡುತ್ತಾರೆ–ಶ್ರೀ ಸ್ವಾಮೀಜಿಯವರು ಹಣ್ಣಿನ ತಟ್ಟೆಯನ್ನು ಮುಂದಿಟ್ಟುಕೊಂಡು ಸುಮ್ಮನೆ ಕುಳಿತಿದ್ದಾರೆ ! ''ನಾವು ಬರುವುದು ಅನಿವಾರ್ಯವಾಗಿ ತಡವಾಯಿತು. ನೀವೇಕೆ ಏನೂ ಸ್ವೀಕರಿಸದೆ ಹಾಗೆಯೇ ಕುಳಿತಿದ್ದೀರಿ. ಹಣ್ಣನ್ನಾದರೂ ಸೇವಿಸಬಹುದಿತ್ತಲ್ಲಾ!'' –ಎಂದು ಕಳಕಳಿಯಿಂದ ಕೇಳಿದರು. ಅದಕ್ಕೆ ಶ್ರೀ ಗೌರೀಶಂಕರ ಸ್ವಾಮಿಗಳವರು –

"ನೀವು ಮೂರುದಿನ ಬಾರದಿದ್ದರೂ ನಾನು ಈ ಪೂಜಾಗೃಹ ಬಿಟ್ಟು ಹೊರಗೆ ಬಾರದೇ ನಿಮಗಾಗಿ ಕಾಯುತ್ತಿದ್ದೆ."

– ಎಂದಾಗ ಜಗದ್ಗುರುಗಳವರ ಕಣ್ಣುಗಳಿಂದ ಬಳಬಳನೆ ಕಂಬನಿ ಹರಿಯಿತು! ಶ್ರೀಗಳವರ ಮಾತೃವಾತ್ಸಲ್ಯವನ್ನೂ ಮೀರಿದ ವಾತ್ಸಲ್ಯಕ್ಕೆ ಕರಗಿಬಿಟ್ಟರು !

"ನಿಮ್ಮಿಂದ ಸಮಾಜಕ್ಕೆ ಅಪಾರ ಸೇವೆ ಸಲ್ಲಬೇಕಾಗಿದೆ. ದೇಹವನ್ನು ಕಡೆಗಣಿಸಬಾರದು. ದೇಹ ರಕ್ಷಣೆಗೆ ಬೇಕಾದ ಸಾತ್ವಿಕ ಆಹಾರವನ್ನು ಸ್ವೀಕರಿಸಲೇಬೇಕು. ಅಲ್ಲದೆ ಈ ಭವರೋಗ ದಿಂದ ಪಾರಾಗುವುದಕ್ಕೆ ಏಕೈಕ ಸಾಧನವಾದ ಈ ದೇಹದ ಆರೋಗ್ಯವೂ ಅಷ್ಟೇ ಮುಖ್ಯ. 'ಶರೀರಮಾದ್ಯಂ ಖಲುಧರ್ಮ ಸಾಧನಂ" – ಎಂಬ ಮಾತು ಈ ದೇಹದ ಮಹತ್ವವನ್ನು ಎತ್ತಿಹಿಡಿಯುತ್ತದೆ. ಬಸವಣ್ಣನವರೂ ಸಹ ಈ ದೇಹವೇ ದೇಗುಲವೆಂದು ಅದರ ಪಾವಿತ್ರ್ಯವನ್ನೂ, ಮಹತ್ವವನ್ನೂ ಎತ್ತಿ ಹಿಡಿದಿದ್ದಾರೆ – ಎಂಬುದನ್ನು ಮರೆಯಬೇಡಿ."

ಜಗದ್ಗುರುಗಳು ಶ್ರೀಗಳವರು ವಿಧಿಸಿದ ಸಮಯಪಾಲನೆ, ಆಹಾರಸೇವನೆಗಳನ್ನು ಕ್ರಮಬದ್ಧವಾಗಿ ಪಾಲಿಸ ತೊಡಗಿದರು....

ಅವರ ಆರೋಗ್ಯ ಸುಧಾರಿಸಿತು. ಲೋಕಸೇವೆಗೆ ಅನುವಾಯಿತು.

## ಪ್ರಕೃತಿ ಧರ್ಮ.... ಸಂಸ್ಕೃತಿ ಮರ್ಮ

ಶ್ರೀ ಗೌರೀಶಂಕರರ ಭೀಮಕಾಯ ನವೆನವೆದು ಜೀರ್ಣವಿದೀರ್ಣವಾಗುತ್ತಿರುವುದನ್ನು ತೋರ್ಪಡಿಸದೆ, ಒಳಗೆ ಚಿಟುಮುಳ್ಳಾಡಿಸುತ್ತಿರುವ ಉದರಶೂಲೆಯನ್ನು ಕಿಂಚಿತ್ತಾದರೂ ಹೊರಹೊಮ್ಮಿಸದಂತೆ –ಕೃಶವಾಗುತ್ತಿರುವ ಕಾಯವನ್ನು ಕಾವಿಯಿಂದಾಚ್ಛಾದಿಸಿ, ನೋವನ್ನು ನುಂಗಿ ನಗೆಯನ್ನು ಹೊಮ್ಮಿಸುತ್ತ ಯಥಾಸ್ಥಿತಿಯಲ್ಲಿದ್ದಂತೆ ಇದ್ದರೂ–ಸದಾ ಸಹವರ್ತಿಯಾಗಿದ್ದುದರಿಂದ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಗೊತ್ತಾಗದೇ ಇರಲಿಲ್ಲ.

"ಸ್ವಾಮೀಜಿ ಏನಾಗುತ್ತಿದೆ ? ನನಗೂ ಹೇಳಬಾರದೇ?"

"ಏನಾಗುತ್ತಿದೆ ? ಹಗಲಾಗುತ್ತಿದೆ, ರಾತ್ರಿಯಾಗುತ್ತಿದೆ, ಹಗಲು ಯಥಾರೀತಿ ಇದ್ದೇನೆ, ರಾತ್ರಿ ಗಾಢವಾಗಿ ನಿದ್ರೆ ಮಾಡುತ್ತೇನೆ. ಇದು ಆರೋಗ್ಯದ ಕುರುಹಲ್ಲವೇ ?"

"ನನಗೆ ಗೊತ್ತಾಗುತ್ತಿದೆ, ಎಂಥದೋ ಹೇಳಲಾಗದ ಬಾಧೆಯು ನಿಮ್ಮನ್ನು ಕೊರೆಯುತ್ತಿದೆ. ನಿಮ್ಮ ಭೀಮಕಾಯವನ್ನು ದಿನದಿಂದ ದಿನಕ್ಕೆ ಪೊಳ್ಳು ಮಾಡುತ್ತಿರುವುದು ನನಗೆ ಗೊತ್ತಾಗುತ್ತಿದೆ. ನನಗೂ ಹೇಳಬಾರದಷ್ಟು ದೂರದವನೇ ನಾನು ?! ನನ್ನನ್ನು ನೀವು ಅಂತರಂಗದ ಆಪ್ತನನ್ನಾಗಿ ಸ್ವೀಕರಿಸಿಲ್ಲ ಹಾಗಾದರೆ! ನನ್ನನ್ನು ನೀವು ನನಗೆ ಗೊತ್ತಾಗದ ಹಾಗೆ ದೂರವಿರಿಸಿದ್ದೀರಿ..."

ಶ್ರೀ ಶ್ರೀ ರಾಜೇಂದ್ರ ಸ್ವಾಮಿಗಳವರು ಕಂಬನಿದುಂಬಿ ಗದ್ಗದಿತರಾದರು.

"ನನ್ನ ಕೈಂಕರ್ಯ ನಿಮಗೆ ಸಲ್ಲದಾಯಿತೇ? ನನ್ನ ಸೇವೆ ಅಸ್ಪೃಶ್ಯವಾಯಿತೆ ?"–ಎಂದು ಬಿಕ್ಕಿದರು.

ಯಾರಿಗೂ ತಮ್ಮ ಒಳಗಿನ ವೇದನೆಯನ್ನು ಹೇಳಿಕೊಂಡು ಅವರಿಗೆ ವ್ಯಥೆಯನ್ನುಂಟು ಮಾಡಬಾರದೆಂಬ ಶ್ರೀ ಗೌರೀಶಂಕರರ ನಿರ್ಧಾರ ಅಲುಗಾಡತೊಡಗಿತು. ಕೆಸರಲ್ಲಿ ನೆಟ್ಟ ಕಂಬದಂತೆ ಹೊಯ್ದಾಡಿತು. ಅಣೆಕಟ್ಟಿನ ಕಟ್ಟೆ ಒಡೆದುಹೋಯಿತು–

"ಕೆಲವು ದಿನಗಳಿಂದ ಹೊಟ್ಟೆನೋವು, ಕರುಳುಗಳನ್ನು ಸುತ್ತಿ ಸುತ್ತಿ, ಹಿಂಡಿ ಹಿಂಡಿ ನೋವಿನ ಕಡೆಗೋಲಿನಿಂದ ಮಥಿಸುತ್ತಿದೆ, ಮರ್ದಿಸುತ್ತಿದೆ..."

"ಕೂಡಲೇ ಚಿಕಿತ್ಸೆಗೆ ಏರ್ಪಾಟು ಮಾಡುತ್ತೇನೆ."

"ಬೇಡಿ ಬೇಡಿ, ನನ್ನ ಕಾಲ ಮುಗಿಯುತ್ತ ಬಂದಿದೆ. ಇನ್ನು ಕೆಲವೇ ದಿನಗಳಲ್ಲಿ ನನ್ನ ಪಾತ್ರ ಮುಗಿಯುತ್ತದೆ. ಜಗದೀಶನಾಡಿಸುವ ಪಾತ್ರಧಾರಿ ನಾನು. ಆತ ಇನ್ನು ಸಾಕುಮಾಡು ಎಂದಿದ್ದಾನೆ. ಆತನ ಕರೆ ಬರುವುದನ್ನೇ ಕಾಯುತ್ತಿದ್ದೇನೆ. ಹೊರಡಲು ಕಾತರನಾಗಿದ್ದೇನೆ."

ಈ ದಾರುಣ, ಹೃದಯವಿದ್ರಾವಕ ವಾರ್ತೆ ಕೇಳಿದವರೆಲ್ಲ ಧಾವಿಸಿ ಬಂದು ಕಂಬನಿಗರೆದರು. ಮಹಾರಾಣಿಯವರು ಬಿದ್ದಂಬೀಳಾ ಓಡಿಬಂದರು ! ರಾಜಗಾಂಭೀರ್ಯದ

ಮುಖವಾಡವನ್ನು ಕಿತ್ತೆಸೆದರು. ಮಾತೃಭಾವದ ಕೋಡಿ ಹರಿಸುತ್ತ, ಅವರ ಪಾದಗಳನ್ನು ಬಿಗಿಯಾಗಿ ಹಿಡಿದು, ರೋದಿಸುತ್ತ

"ಇದೇನು ಮಾಡಿಬಿಟ್ಟಿರಿ ಭಗವನ್ ?"

—ಎಂದು ಕಲ್ಲು ಕರಗುವಂತೆ ರೋದಿಸಿದರು.

"ಯಾರು ನನ್ನನ್ನು ಇಲ್ಲಿಗೆ ಕಳಿಸಿದ್ದರೋ ಅವರು ಬಾ ಎಂದು ಕರೆಯುತ್ತಿದ್ದಾರೆ. ಹೊರಡಲು ಸಿದ್ಧನಾಗಿದ್ದೇನೆ. ಈ ಭೂಮಿಯ ಋಣ ಕೆಲವು ದಿನಗಳಲ್ಲಿ ತೀರುತ್ತದೆ. ಋಣ ತೀರಿದ ಕ್ಷಣವೇ ಹೊರಡಬೇಕಲ್ಲವೇ ತಾಯಿ ? ಎಲ್ಲರೂ ಒಂದಲ್ಲ ಒಂದು ದಿನ ಹೊರಡಲೇ ಬೇಕಲ್ಲವೇ ? ಇದಕ್ಕೇಕೆ ದುಃಖ ?"

ಮತ್ತೆ ಮುಂದುವರಿಸಿದರು, ನಿರುದ್ವಿಗ್ನರಾಗಿ ನುಡಿದರು –

"ನಗುನಗುತ್ತ ಕಳಿಸಿಕೊಡಿ. ನಗುನಗುತ್ತ ಹೋಗುತ್ತೇನೆ."

ಎಲ್ಲರೂ ದುಃಖತಪ್ತರಾಗಿ—

"ಇಲ್ಲ ಇಲ್ಲ, ಹಾಗನ್ನಬೇಡಿ. ವೆಲ್ಲೂರಿಗೆ ಹೋಗೋಣ. ಅಲ್ಲಿ ಒಳ್ಳೊಳ್ಳೆ ವೈದ್ಯರಿದ್ದಾರೆ. ನಿಮ್ಮ ಕಾಯಿಲೆ ಏನು ಮಹಾ ಕಾಯಿಲೆ. ಹೊಟ್ಟೆನೋವು ಅಷ್ಟೇ ತಾನೆ? ಚಿಟಿಕೆ ಹಾಕುವಷ್ಟರಲ್ಲಿ ವಾಸಿಮಾಡುತ್ತಾರೆ. ಇಂದೇ ಹೊರಡೋಣ ಸ್ವಾಮೀಜಿ, ನಾವೆಲ್ಲ ವ್ಯವಸ್ಥೆ ಮಾಡ್ತೀವಿ"

ಮಹಾರಾಣಿಯವರು ತಟ್ಟನೆ ನೆಟ್ಟಗೆ ಕುಳಿತು, ಸೆರಗೊಡ್ಡಿ ಬೇಡಿಕೊಂಡರು—

"ಸ್ವಾಮೀಜಿ, ನನಗೊಂದು ವರ ಕೊಡಿ."

"ವರ ಬೇಡುವಂತಿದ್ದರೆ ಹರನನ್ನು ಬೇಡಿಕೊಳ್ಳಿ ತಾಯೀ. ನರನಾದ ನನ್ನನ್ನು ಬೇಡಿದರೆ ನಾನು ಏನು ತಾನೇ ಕೊಡಬಲ್ಲೆ ?"

"ನೀವೇ ನನ್ನ ಪಾಲಿನ ಹರ, ನನ್ನ ಪಾಲಿನ ಹರಿ, ನನ್ನ ಪಾಲಿನ ಎಲ್ಲ ದೈವವೂ ನೀವೇ. ನೀವು ನಾ ಬೇಡಿದ್ದನ್ನು ಕೊಡುವತನಕ ನಿಮ್ಮ ಪಾದ ಬಿಡುವುದಿಲ್ಲ"—ಎಂದವರೇ ಮಹಾರಾಣಿಯವರು, ಸ್ವಾಮೀಜಿಯವರ ಎರಡೂ ಪಾದಗಳನ್ನು ಭದ್ರವಾಗಿ ಹಿಡಿದುಕೊಂಡರು.

"ಆಯಿತು, ಅದೇನು, ಹೇಳಿ ತಾಯೀ ?"

"ಏನೂ ಇಲ್ಲ. ನೀವು ದಯೆಯಿಟ್ಟು ವೆಲ್ಲೂರಿಗೆ ಹೋಗಿಬನ್ನಿ, ಅಷ್ಟೇ. ಈ ನನ್ನ ಸಣ್ಣ ಕೋರಿಕೆಯನ್ನು ತೀರಿಸಲಾರಿರಾ ?"

"ನಾನು ಮೈಸೂರಿನಿಂದಲೇ 'ಅಲ್ಲಿಗೆ' ಹೋಗಬೇಕೆಂದಿದ್ದೆ. ನೀವು ಇಲ್ಲಿಂದ ಹೋಗಬೇಡಿ. ವೆಲ್ಲೂರಿಂದ 'ಅಲ್ಲಿಗೆ' ಹೋಗಿಬಿಡಿ ಎನ್ನುತ್ತೀರಾ ! ಆಗಲಿ ತಾಯಿ, ಶಿವನಿಚ್ಛೆ, ಶಿವ ನಿಮ್ಮಿಂದ ನುಡಿಸುತ್ತಿದ್ದಾನೆ." —ಎನ್ನುತ್ತಲೇ, ಅದುವರೆಗೆ ಬಿಗಿಹಿಡಿದ ಅಳು ಎಲ್ಲರ ಮೂಲಕ ಸಶಬ್ದವಾಗಿ ಹೊರ ಧುಮ್ಮಿಕ್ಕಿತು.

ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರಂತೂ ಎಳೆಮಗು, ತಾಯಿಯಿಂದ ಅಗಲುತ್ತಿರುವಾಗ ಅಳುವಂತೆ ಅತ್ತುಬಿಟ್ಟರು.

ವೆಲ್ಲೂರಿನತ್ತ – ಇಬ್ಬರು ಶ್ರೀಗಳವರೊಡನೆ ಮತ್ತಿನ್ನಿಬ್ಬರು ಭಕ್ತರು, ಅಡುಗೆಯಾಳು ಹೊರಟುಬಿಟ್ಟರು.

ವಿಷಯ ತಿಳಿದ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರಾದ ಶ್ರೀ ನಿ.ಪ್ರ.ಸ್ವ. ಶಿವಕುಮಾರಸ್ವಾಮಿಗಳವರು ಅಲ್ಲಿಂದಲೇ ನೇರವಾಗಿ ವೆಲ್ಲೂರಿಗೆ ಧಾವಿಸಿದರು !

ವೆಲ್ಲೂರು ತಲುಪಿದ ಕೂಡಲೇ, ನೇರವಾಗಿ ಆಸ್ಪತ್ರೆಗೆ ಹೋಗಿ, ಶ್ರೀಗಳವರು ಹಾಸಿಗೆಯ ಮೇಲಿರುವುದನ್ನು ನೋಡಿ ಗಳಗಳನೆ ಅತ್ತುಬಿಟ್ಟರು.

"ಬನ್ನಿ, ಬನ್ನಿ. ನನ್ನನ್ನು ನೀವು ಕಳಿಹಿಸಿಕೊಡಲು ಬರುತ್ತೀರೋ ಇಲ್ಲವೋ ಎಂದು ತವಕಗೊಂಡಿದ್ದೆ. ಮನಸ್ಸು ನಿರಾಳವಾಯಿತು. ನಿಶ್ಚಿಂತೆಯಿಂದ, ಶಿವನೂರಿಗೆ ಹೋಗುತ್ತೇನೆ; ಅಪರಿಮಿತ ಸಂತೋಷದಿಂದ ಹೋಗುತ್ತೇನೆ."

—ಎಂದು ನಗುತ್ತ ನುಡಿದರು !

ಶ್ರೀ ಸಿದ್ಧಗಂಗ ಮಠಾಧ್ಯಕ್ಷ ಶ್ರೀಗಳವರೂ, ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರೂ ಈ ಮಾತು ಕೇಳಿ ಬಿಕ್ಕಿ ಬಿಕ್ಕಿ ಅತ್ತರು ಸಾಮಾನ್ಯ ಪಾಮರರಂತೆ !

"ಜ್ಞಾನದ ಮೇರು ನೀವು. ನೀವೇ ಹೀಗೆ ದುಃಖಿಸುವುದೇ ? ನಿಮ್ಮ ಅಂತಃಚಕ್ಷುಗಳಿಂದ ನೋಡಿ, ನಿಮ್ಮ ಜ್ಞಾನನೇತ್ರದಿಂದ ನೋಡಿ, ಇದು ದುಃಖಿಸುವ ಸಮಯವೇ ?"

—ಎಂದು ಇಬ್ಬರೂ ಶ್ರೀಗಳವರನ್ನು ಕುರಿತು ನುಡಿದರು—

"ಎಲ್ಲ ಬಲ್ಲ ನೀವು, ಜೀವನ್ಮುಕ್ತರಾಗುವಂಥ ಶುಭವೇಳೆಯಲ್ಲಿ ನಗುನಗುತ್ತಿರಬೇಕು.... ನಾನು ನಿಮಗೆ ಹೇಳಬೇಕೆ?—ನೀವಿಬ್ಬರೂ ಪರಮ ಜ್ಞಾನಿಗಳು. ಲೌಕಿಕವ್ಯಾಪಾರದ ಅನಿತ್ಯತೆಯನ್ನು ಬಲ್ಲವರು.... ಸ್ವಾಮಿಗಳೇ, ಈ ದಿನ ಹಬ್ಬವಂತೆ, ನಮ್ಮ ಕೆಂಪಣ್ಣ ಒಬ್ಬಟ್ಟು ಮಾಡಿದ್ದಾನೆ. ದಯವಿಟ್ಟು ಬೇಗ ಹೋಗಿ ಸ್ನಾನ-ಪೂಜೆ ಮುಗಿಸಿ ಬನ್ನಿ. ನೀವಿಬ್ಬರೂ ಪ್ರಸಾದ ಸ್ವೀಕರಿಸಿ. ನಿಮ್ಮ ಒಕ್ಕುಮಿಕ್ಕುದನ್ನು ನನಗೆ ಕೊನೆಯ ಬಾರಿಗೆ ಊಡಿ, ನನ್ನನ್ನು ಬೀಳ್ಕೊಡಿ. ನೀವು ಬರಲೆಂದೇ, ಶಿವನಿಂದ ಅಪ್ಪಣೆ ಪಡೆದು ಇನ್ನೂ ಉಳಿದಿದ್ದೇನೆ. ಈ ದಿನವೇ ನನ್ನ ಕೊನೆಯ ದಿನ—"

ಗಂಭೀರ ಮೌನವೇ ಜೋಡಿ ಶರೀರ ಧರಿಸಿದ ಹಾಗೆ ಇಬ್ಬರು ಶ್ರೀಗಳವರು – ಶ್ರೀ ಗೌರೀಶಂಕರರ ಅಪೇಕ್ಷೆಯಂತೆ ಸ್ನಾನ-ಪೂಜೆ ಮುಗಿಸಿಕೊಂಡು ಬಂದು, ತಾವು ಒಂದೊಂದು ತುತ್ತು ಒಬ್ಬಟ್ಟು ಸೇವಿಸಿ, ತಲಾ ಒಂದೊಂದು ತುತ್ತು ಉಣಬಡಿಸಿದರು.

ನಗುನಗುತ್ತಾ ಭುಂಜಿಸಿ, ಶುದ್ಧೋದಕವನ್ನೀಂಟಿ—

"ಶರಣು ಶರಣಾರ್ಥಿ"

—ಎಂದು ಪೂಜ್ಯ ಶ್ರೀದ್ವಯರಿಗೆ ಕೈಜೋಡಿಸಿ, ನಮಸ್ಕರಿಸಿ, ಹಾಸಿಗೆಯ ಮೇಲೆ ಅಂಗಾತ ಒರಗಿ, ತಾವೇ ತಮ್ಮ ಮೊಣಕಾಲುಗಳನ್ನು ಮಡಚಿಕೊಂಡರು, ತಮ್ಮ ಎರಡೂ ಕೈಗಳನ್ನೂ ಒಂದುಗೂಡಿಸಿ, ಹಸ್ತದ ಮೇಲೆ ಹಸ್ತವಿರಿಸಿಕೊಂಡರು. ಮತ್ತೆ—

"ಜಗದ್ಗುರುಗಳೇ ನೀವು ನನಗಿನ್ನಾರು ಮಾರ್ಗದರ್ಶಕರು ಎಂದು ದುಃಖಿಸುತ್ತಿದ್ದೀರಿ. ನೀವೇ ಮಾರ್ಗದರ್ಶಕರು, ಲೋಕಕ್ಕೆ ಮಾರ್ಗದರ್ಶನ ಮಾಡಿ. ಸಿದ್ಧಗಂಗಾಧೀಶರೇ ನೀವು ಮಹಾಜ್ಞಾನಿಗಳು. ನೀವಿಬ್ಬರೂ ಶಿವನ ಸ್ವರೂಪರು. ನನ್ನ ಕೊನೆಯ ಕೋರಿಕೆಯನ್ನು ನಡಿಸಿಕೊಡಿ. ನನ್ನ ಭೌತಿಕ ಕಾಯವನ್ನು ಮೆರವಣಿಗೆ ಮಾಡಬೇಡಿ. ಶರಣಧರ್ಮದ ರೀತ್ಯಾ ಒಪ್ಪಮಾಡಿ ಬಿಡಿ..."

—ಎಂದು ಹೇಳು ಹೇಳುತ್ತಿರುವಂತೆಯೇ ದೃಷ್ಟಿ ಉನ್ಮುಖವಾಗಿ ನಿಶ್ಚಲಗೊಳ್ಳುತ್ತಿರಲು-

"ಅಗೋ, ಕರೆದೊಯ್ಯಲು ಬಂದಿದಾರೆ... ಬಂದೆ, ಬಂದೆ... ಶಿವ ಶಿವಾ..."

ಶ್ರೀ ಗೌರೀಶಂಕರಸ್ವಾಮಿಗಳವರು ತಾರೀಕು ೧೩-೮-೧೯೫೨ರಂದು ಶಿವನೊಳಗಾದರು !

ಬೆಳಕು ಮಹಾ ಬೆಳಕಿನೊಳಗಾಯಿತು !

## ಜೆಎಸ್ಎಸ್ ಮಹಾವಿದ್ಯಾಪೀಠ – ಮಹಾಮನದ ಕನಸುಗಳ ಘನೀಕರಣ

ಸ್ವಾತಂತ್ರ್ಯಪೂರ್ವದಲ್ಲಿ, ಬ್ರಿಟಿಷರ ಆಡಳಿತದಲ್ಲಿ ಇಡೀ ಭಾರತದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸ – ನೀರ ಮೇಲಿನ ಎಣ್ಣೆಯಂತೆ ನಿಧಾನವಾಗಿ ವ್ಯಾಪಿಸತೊಡಗಿತು. ಬಿ.ಎ., ಪದವೀಧರರಾದವರಿಗೆ ಉದ್ಯೋಗ – ಮಾವಿನ ಮರದ ಹಣ್ಣುಗಳಂತೆ ಕೈಗೆಟಕುತ್ತಿತ್ತು. ಅದರಲ್ಲೂ ಬಿ.ಎ., ಮಾಡಿದರೆ ಅಮಲ್ದಾರನಾಗಬಹುದು — ಎಂಬ ಪ್ರತೀತಿ ಬೇರೆ. ಜನಸಾಮಾನ್ಯರ, ಗ್ರಾಮಾಂತರದ ಜನರಲ್ಲಿ ಹರಡಿದ್ದ ಕಾಲವದು ! ತಮ್ಮ ಮಕ್ಕಳೂ, ಕನಿಷ್ಠಪಕ್ಷ ಒಬ್ಬನಾದರೂ ಅಮಲ್ದಾರನಾಗಬೇಕೆಂಬ ಆಸೆ ಬಲವಾಗಿ ಬೇರುಬಿಡತೊಡಗಿ, ತಾವು ಉಪವಾಸ-ವನವಾಸವಿದ್ದಾದರೂ ಸರಿಯೇ, ತಮ್ಮ ಒಬ್ಬ ಮಗನನ್ನಾದರೂ ಓದಿಸಬೇಕು, ವಿದ್ಯಾವಂತನನ್ನಾಗಿ ಮಾಡಬೇಕು, ಬಿ.ಎ., ಪದವೀಧರನನ್ನಾಗಿ ಮಾಡಬೇಕು, ಅವನು ಉನ್ನತ ಅಧಿಕಾರಿಯಾಗುವುದನ್ನು ಕಣ್ಣಾರೆ ಕಂಡು ಧನ್ಯರಾಗಬೇಕು — ಎಂಬ ಅದಮ್ಯ ಹಂಬಲ ಒಡಮೂಡಿತು. ಇದಕ್ಕೆ ಇಂಬುಕೊಡುವಂತೆ ಉಚಿತ ವಿದ್ಯಾರ್ಥಿನಿಲಯಗಳು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಂದ ಸ್ಥಾಪಿತವಾಗಿದ್ದುವು. ವಿದ್ಯಾರ್ಥಿಗಳು ಜೇನುಹುಟ್ಟಿಗೆ ಜೇನ್ನೊಣಗಳು ಮುತ್ತುವಂತೆ, ಶಾಲೆ – ಪ್ರೌಢಶಾಲೆಗಳಲ್ಲಿ ಸೇರಿಕೊಳ್ಳತೊಡಗಿದರು.

ಅನೇಕ ಜನರು ಬೇರೆ ಬೇರೆ ಕಡೆಗಳಿಂದ ಬಂದು ಬಂದು ತಮ್ಮ ಊರುಗಳಲ್ಲಿಯೂ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವಂತೆ ಶ್ರೀಗಳವರನ್ನು ಕೇಳುತ್ತಿದ್ದರು. ಪೂಜ್ಯರು ಹಾಗೆ ಜನ ವಿನಂತಿಸಿಕೊಳ್ಳುವುದಕ್ಕಾಗಿ ಕಾದು ಕುಳಿತವರಲ್ಲ. ಏಕೆಂದರೆ ಮಕ್ಕಳು ಈ ಆಧುನಿಕ

ಯುಗದಲ್ಲಿ ಮುಂದುವರಿಯಬೇಕಾದರೆ ಅದಕ್ಕೆ ಅಗತ್ಯವಾದ ಶಿಕ್ಷಣ ಅವರಿಗೆ ಲಭಿಸಬೇಕೆಂದು ಸ್ವಾಮಿಗಳವರ ಅಚಲ ನಂಬಿಕೆಯಾಗಿತ್ತು. ಅನೇಕ ಜನರ ಕೋರಿಕೆಯ ಮೇರೆಗೆ ಚಾಮರಾಜನಗರ, ಯಳಂದೂರು, ಕಾಮಗೆರೆ, ರಾಮಾಪುರ, ಬಂಡಳ್ಳಿ, ಕೃಷ್ಣರಾಜನಗರಗಳಲ್ಲಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದರು. ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯಲಾರಂಭವಾದ ಮೇಲೆ ಆಗಿದ್ದ ಶಾಲೆಗಳಲ್ಲಿ, ಪ್ರೌಢಶಾಲೆಗಳಲ್ಲಿ ಎಲ್ಲ ವಿದ್ಯಾರ್ಥಿ ಗಳಿಗೂ ಪ್ರವೇಶಾವಕಾಶ ಕಲ್ಪಿಸಿಕೊಡುವುದು ದುಸ್ತರವಾಗಿ ಪರಿಣಮಿಸಿತ್ತು! ಈ ಪರಿಸ್ಥಿತಿಯನ್ನು ಮನಗಂಡು ಶ್ರೀಗಳವರು ಮೊಟ್ಟಮೊದಲನೆಯದಾಗಿ ಮೈಸೂರಿನಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸಿದರು. ಅನತಿ ಕಾಲದಲ್ಲಿಯೇ ಶ್ರೀ ಶಿವರಾತ್ರೀಶ್ವರ ಉಚಿತ ವಿದ್ಯಾರ್ಥಿ ನಿಲಯ ಗಳಿರುವ ಊರುಗಳಲ್ಲಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲಾರಂಭಿಸಿದರು.

ಇದಕ್ಕೆ ಮೂಲ ಕಾರಣವೇನೆಂದರೆ — 'ಸಮಾಜದ ಎಲ್ಲ ಕೇಡುಗಳಿಗೆ ಅಜ್ಞಾನವೇ ಮೂಲ ಕಾರಣ, ಇದರ ಮೂಲೋಚ್ಚಾಟನೆ ವಿದ್ಯಾರ್ಜನೆಯಿಂದಲೇ ಸಾಧ್ಯ, ಜ್ಞಾನಜ್ಯೋತಿಯನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಂಡೊಯ್ಯದ ಹೊರತು, ದೇಶದ ಭಾವೀ ಪ್ರಜೆಗಳಾದ ತರುಣ ತರುಣಿಯರೆಲ್ಲ ಸುಶಿಕ್ಷಿತರಾಗದ ಹೊರತು ಭಾರತ ದೇಶ ಸುಭದ್ರವಾಗಲಾರದು, ಸುಭಿಕ್ಷಗೊಳ್ಳಲಾರದು. ಆದರೆ ಈ ಮಹತ್ತರ ಕಾರ್ಯವನ್ನು ಸರ್ಕಾರವೊಂದೇ ಮಾಡುವುದು ಅಸಾಧ್ಯ' — ಎಂದು ಪೂಜ್ಯರು ಮನಗಂಡು ಮೊದಲು ಮೈಸೂರು ಜಿಲ್ಲೆಯ ಹಲವಾರು ಗ್ರಾಮಗಳಲ್ಲಿ ಶಾಲೆ-ಪ್ರೌಢಶಾಲೆಗಳನ್ನು ಸ್ಥಾಪಿಸಿದರು.

ಶ್ರೀಗಳವರ ವಿದ್ಯಾಪ್ರೋತ್ಸಾಹವು ರಾಜಧಾನಿಯ ಎಲ್ಲೆಯನ್ನೂ ಮೀರಿ, ಹೀಗೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಿಗೂ ವ್ಯಾಪಿಸತೊಡಗಿತು. ಆಯಾ ತಾಲ್ಲೂಕುಗಳ ಮಹಾಜನರು ಶ್ರೀಗಳವರ ಪ್ರೇರಣೆಯಿಂದ ಮುಂದೆ ಬಂದು ತಮ್ಮ ತಾಲ್ಲೂಕುಗಳಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲು ಸಹಕಾರ ನೀಡಿದರು.

ಇದುವರೆಗೆ ಪ್ರಾರಂಭಿಸಿದ ವಿದ್ಯಾಸಂಸ್ಥೆಗಳನ್ನೆಲ್ಲಾ ಶ್ರೀ ಶಿವರಾತ್ರೀಶ್ವರರ ಹೆಸರಿನಿಂದಲೇ ಪ್ರಾರಂಭಿಸಿದ್ದರು. ಈ ಎಲ್ಲ ವಿದ್ಯಾಸಂಸ್ಥೆಗಳ ಹೊಣೆಯೂ ಅಧಿಕವಾಗಿ ಬೆಳೆಯತೊಡಗಿತು. ಅನೇಕ ವಿದ್ಯಾರ್ಥಿನಿಲಯಗಳು ಮತ್ತು ವರ್ಷವರ್ಷವೂ ಹೊಸತಾಗಿ ಹುಟ್ಟುತ್ತಿದ್ದ ಅನೇಕ ವಿದ್ಯಾಸಂಸ್ಥೆಗಳು – ಇವೆಲ್ಲವುಗಳ ನಿರ್ವಹಣೆಯ ಬಗೆಗೂ ಶ್ರೀಗಳವರು ವಿಶೇಷ ಗಮನವನ್ನು ಹರಿಸಿದರು. ಭಕ್ತಸಮುದಾಯದ ನಿರಂತರ ಬೆಂಬಲವೇನೋ ಇತ್ತು - ಬತ್ತದ ತೊರೆಯಂತೆ. ಆದರೆ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಸುವ್ಯವಸ್ಥೆಯಿಂದ ನಿಸ್ಪೃಹವಾಗಿ ನಡೆಸುವ ಅನೇಕ ಕಾರ್ಯಕರ್ತರ ಅಗತ್ಯವಿತ್ತು. ಒಂದೊಂದು ವಿದ್ಯಾಸಂಸ್ಥೆಗೂ ಸಂಬಂಧಿಸಿದಂತೆ ಸರ್ಕಾರ ಹಾಗೂ ಇತರ ಶೈಕ್ಷಣಿಕ ಸಂಸ್ಥೆಗಳೊಡನೆ ವ್ಯವಹರಿಸಿ ಹಣದ ನೆರವನ್ನು ಪಡೆಯುವ ಮತ್ತು ಶೈಕ್ಷಣಿಕ ವಿವರಗಳನ್ನು ರೂಪಿಸಿ ಸಿಬ್ಬಂದಿಯನ್ನು ನೋಡಿಕೊಳ್ಳುವ ಆಡಳಿತದ ಕಾರ್ಯ ಸುಲಭಸಾಧ್ಯ ವಾದುದಲ್ಲ. ಅದಕ್ಕಾಗಿ ಸಂಸ್ಥೆಯ

ಕಾರ್ಯದರ್ಶಿಗಳಾಗಿದ್ದ ಶ್ರೀ ಹೆಚ್.ಸಿ. ಬಸವಣ್ಣನವರು ಮತ್ತಿತರರೂ ಅಹರ್ನಿಶಿ ದುಡಿಯುತ್ತಿದ್ದರು. ಅದನ್ನು ಇನ್ನೂ ಹೆಚ್ಚು ವ್ಯವಸ್ಥಿತಗೊಳಿಸುವ ಕಾರ್ಯವನ್ನು ಶ್ರೀಗಳವರು ಕೈಗೊಂಡರು —

ಈ ಎಲ್ಲ ಸಂಸ್ಥೆಗಳನ್ನೂ ಒಗ್ಗೂಡಿಸುವ ಕೇಂದ್ರ ಸಂಸ್ಥೆ ಈಗ ಅಸ್ತಿತ್ವಕ್ಕೆ ತಂದು ಅದನ್ನೂ ಒಂದು ಹೆಸರಿನಿಂದ ನಿರ್ದೇಶಿಸುವ ಅಗತ್ಯ ಉಂಟಾಯಿತು. ಈ ಕೇಂದ್ರ ಸಂಸ್ಥೆಯನ್ನು ಯಾವ ಹೆಸರಿನಿಂದ ಕರೆಯಬೇಕು?– ಎಂದು ಪೂಜ್ಯರು ಆಲೋಚಿಸುತ್ತಿದ್ದಾಗ ವಿದ್ವಾಂಸರು ಗಳಿಂದ ಅಭಿಮಾನಿಗಳಿಂದ ವಿವಿಧ ಸೂಚನೆಗಳು ಬರಲಾರಂಭಿಸಿದುವು.

ಹೀಗೆ ಸೂಚಿತವಾದ ಹೆಸರುಗಳನ್ನು ಬೇರೆ ಬೇರೆ ಚೀಟಿಗಳಲ್ಲಿ ಬರೆದು ಶ್ರೀಗಳವರ ಆದೇಶದಂತೆ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ ಭಾವಚಿತ್ರದ ಮುಂದೆ ಇಟ್ಟು ಒಬ್ಬ ಬಾಲಕನಿಂದ ಒಂದು ಚೀಟಿ ಎತ್ತಿಸುವುದು, ಆಗ ಯಾವ ಹೆಸರು ಬರುತ್ತದೆಯೋ ಅದನ್ನು ಸಂಸ್ಥೆಗೆ ಇಡುವುದು ಎಂದು ನಿರ್ಧರಿಸಲಾಯಿತು.

ಅದೊಂದು ಅಮೃತ ಘಳಿಗೆ. ಅದರಂತೆ ಚೀಟಿಗಳನ್ನು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರ ಭಾವಚಿತ್ರದ ಮುಂದಿಟ್ಟು ಆರತಿ ಬೆಳಗಿ ಪುಷ್ಪಾಂಜಲಿಯನ್ನಿತ್ತು, ಒಬ್ಬ ಬಾಲಕನಿಂದ ಚೀಟಿ ಎತ್ತಿಸಲಾಯಿತು. ಅದರಲ್ಲಿ "ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ" — ಎಂದಿತ್ತು.

ಆ ಹೆಸರು ಆದಿ ಜಗದ್ಗುರುಗಳವರಿಗೆ ಅಭಿಮತವಾದುದು ಎಂದು ಎಲ್ಲರೂ ಹರ್ಷೋದ್ಗಾರದೊಡನೆ ಅಂಗೀಕರಿಸಿದರು. ಅದೇ ಸುವಿಖ್ಯಾತವಾದ ಇಂದಿನ "ಜೆ.ಎಸ್.ಎಸ್. ಮಹಾವಿದ್ಯಾಪೀಠ."

ಯಾವ ಶುಭ ಮುಹೂರ್ತದಲ್ಲಿ ಸಂಸ್ಥೆಗೆ ಮೇಲೆ ಕಂಡ ಶುಭ ನಾಮಧೇಯವನ್ನು ಇಡಲಾಯಿತೋ ಆ ಗಳಿಗೆಯಿಂದಲೇ ಈ ಮಹಾಸಂಸ್ಥೆ ಹೂವಿನ ಸರವೇರಿಸಿದಂತೆ ಅಭ್ಯುದಯವನ್ನು ಇತ್ಯೋಪತಿಶಯವಾಗಿ ಸಾಧಿಸುತ್ತಲಿದೆ.....ಈ ಸಂಸ್ಥೆ ಈಗಾಗಲೇ ಅನೇಕ ವಿದ್ಯಾಸಂಸ್ಥೆಗಳನ್ನೊಳಗೊಂಡು ಬೃಹತ್ ಪ್ರಮಾಣದಲ್ಲಿ ಬೆಳೆದಿದ್ದರೂ ಅಷ್ಟರಿಂದಲೇ ಅದು ತೃಪ್ತವಾಗದೆ ಶಕ್ತಿಯಿಂದ ಶಕ್ತಿಯ ಕಡೆಗೆ ಹೆಜ್ಜೆಯನ್ನಿಡುತ್ತ ವರ್ಷ ವರ್ಷ ಇನ್ನೂ ಹೊಸ ಹೊಸ ವಿದ್ಯಾಸಂಸ್ಥೆಗಳನ್ನು ನಿರ್ಮಿಸುತ್ತ ಮುನ್ನಡೆಯುತ್ತಿದೆ....

ಹೀಗೆ ಮಹಾದಾನಗಳಲ್ಲಿ ಅನ್ನದಾನಕ್ಕಿಂತ ಜ್ಞಾನದಾನ ಮಿಗಿಲು — ಪ್ರಾಣದಾನಕ್ಕೆ ಸಮನಾದುದು — ಎಂದು ಮನಗಂಡ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರು ೧೯೫೪ರಲ್ಲಿ ಮೈಸೂರಿನಲ್ಲಿ "ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾ ವಿದ್ಯಾಪೀಠ"ವನ್ನು ಸಂಸ್ಥಾಪಿಸಿ ಶಿಕ್ಷಣದ ನ್ಯಗ್ರೋಧ ಬೀಜಾವಾಪನೆ ಮಾಡಿದರು. ಅದು ಇಂದು ಶ್ರೀ ವಟವೃಕ್ಷದಂತೆ ಜ್ಞಾನದ ಎಲ್ಲ ಶಾಖೋಪಶಾಖೆಗಳನ್ನು ನಾಡಿನ ದಶದಿಕ್ಕುಗಳಲ್ಲಿ ಹರಡುತ್ತಲಿದೆ.....

ಈ "ಜೆ.ಎಸ್.ಎಸ್. ಮಹಾವಿದ್ಯಾಪೀಠ"ಕ್ಕೆ ಸೂಕ್ತ ನಿವೇಶನವನ್ನು –'ಆನೆಕರೋಟಿ' ಯನ್ನು – ಪೂಜ್ಯ ಜಗದ್ಗುರುಗಳವರ ಅಂತರಂಗದ ಆತ್ಮೀಯ ಶಿಷ್ಯರೂ ಆದರ್ಶ ತ್ಯಾಗ ವೀರರೂ ಭಕ್ತಾಗ್ರೇಸರರೂ ರಾಜರ್ಷಿಗಳೂ ಆಗಿದ್ದ ಮೈಸೂರು ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್‌ರವರು ನಗರದ ಮಧ್ಯದಲ್ಲಿರುವ ಈ ವಿಶಾಲ ನಿವೇಶನವನ್ನು ಕೇವಲ ಅಲ್ಪ ಮೌಲ್ಯಕ್ಕೆ ನೀಡಿ ಪೂಜ್ಯ ಶ್ರೀಗಳವರ ಪೂರ್ಣಕೃಪೆಗೆ ಪಾತ್ರರಾಗಿ ಕೀರ್ತಿಶಾಲಿ ಗಳಾದರು.

ಪ್ರಾರಂಭದಲ್ಲಿ ಈ ಆನೆಕರೋಟಿಯಲ್ಲಿದ್ದ ಕೆಲವು ಸ್ಥಳೀಯ ಕಟ್ಟಡಗಳನ್ನೇ ದುರಸ್ತಿ ಮಾಡಿಸಿಕೊಂಡು ಶ್ರೀಗಳವರು ತಮ್ಮ ಕಾರ್ಯಾಲಯದ ಕೇಂದ್ರವನ್ನಾಗಿ ಅದನ್ನು ಮಾಡಿ ಕೊಂಡರು. ತಮ್ಮ ವಾಸ್ತವ್ಯವನ್ನು ಅಲ್ಲಿಗೇ ಬದಲಾಯಿಸಿಕೊಂಡರು. ಮೊಟ್ಟಮೊದಲನೆಯ ಜೆ.ಎಸ್.ಎಸ್. ಪ್ರೌಢಶಾಲೆಯ ನೆಲೆಯೂ ಅದೇ ಆಯಿತು. ಅಲ್ಲಿಂದ ಕ್ರಮೇಣ ಅದು ಬೆಳೆಯತೊಡಗಿ ಇಂದು ಭವ್ಯ ಕಟ್ಟಡಗಳು ತಲೆಯೆತ್ತಿನಿಂತಿವೆ. ಪ್ರಾರಂಭದಲ್ಲಿ ಸೈನ್ಸ್ ಆರ್ಟ್ಸ್ ಮತ್ತು ಕಾಮರ್ಸ್ ಕಾಲೇಜು ಪ್ರಾರಂಭವಾಗಿ – ಈಗ ಊಟಿ ರಸ್ತೆಯ ಭವ್ಯ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಿದೆ – ಇತ್ತೀಚೆಗೆ ಅಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಮಾನವೀಯ ಅನುಕಂಪೆಯ ಸಾಕಾರ ಸಾಕ್ಷಿ ಎಂಬಂತೆ ಜೆ.ಎಸ್.ಎಸ್. ಆಸ್ಪತ್ರೆಯಾಗಿದೆ, ಅಲ್ಲದೆ ಹೊರರೋಗಿಗಳ ವಿಭಾಗದ ಭವ್ಯ ಕಟ್ಟಡವೂ ತಲೆಯೆತ್ತಿ ಆಧುನಿಕ ವೈದ್ಯಕೀಯ ಶಿಕ್ಷಣದ ಅದ್ಭುತ ಕೇಂದ್ರವಾಗಿದೆ.

ಶ್ರೀಗಳವರು ಉದ್ದೇಶಿಸಿದ, ವಿದ್ಯಾಸಂಸ್ಥೆಗಳು ತಲೆಯೆತ್ತಿ ನಿಲ್ಲಲು ಸೂಕ್ತ ಸ್ಥಳಗಳು –– ನಿವೇಶನಗಳು ಅವರು ನಂಬಿದ ಶ್ರೀ ಶಿವರಾತ್ರೀಶ್ವರರ ಕೃಪಾಶೀರ್ವಾದದಿಂದಾಗಿ ಸಕಾಲದಲ್ಲಿ ದೊರೆತದ್ದು ಅತ್ಯಂತ ಮುದಾವಹದ ಸಂಗತಿ –

ಮೈಸೂರಿನ ಸರಸ್ವತಿಪುರಂ ಬಡಾವಣೆಯಲ್ಲಿ 'ನವಜ್ಯೋತಿ ಸ್ಟುಡಿಯೋ' ಬಹಳ ವರ್ಷಗಳಿಂದ ಚಲನಚಿತ್ರೋದ್ಯಮದ ಕೇಂದ್ರವಾಗಿತ್ತು. ಆಗ ಆ ಬಡಾವಣೆ ಇನ್ನೂ ಬೆಳೆಯದಿದ್ದ ಕಾಲ. ಎರಡೋ ಮೂರೋ ಮುಖ್ಯ ರಸ್ತೆಗಳಿದ್ದು, ಸ್ಟುಡಿಯೋ ಆ ಬಡಾವಣೆಯ ಕೊನೆಯಲ್ಲಿದ್ದಂತಿತ್ತು. ಆದರೆ ಬಡಾವಣೆ ಶೀಘ್ರಗತಿಯಲ್ಲಿ ಬೆಳೆಯುತ್ತಾ ಸ್ಟುಡಿಯೋವನ್ನು ದಾಟಿ ಪಶ್ಚಿಮಕ್ಕೆ ಹಬ್ಬಿ ಹರಡತೊಡಗಿತು. ಆಗ ಸ್ಟುಡಿಯೋ ಮಾಲೀಕರು ಅದನ್ನು ಅಲ್ಲಿಂದ ಸ್ಥಳಾಂತರಿಸಲು ನಿರ್ಧರಿಸಿದರು. ವಿಸ್ತಾರವಾದ ಆ ಜಾಗ ಖರೀದಿಗಿದೆ ಎಂಬುದು ತಿಳಿದೊಡನೆ ಆ ಭಾಗದಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಲು ಅದು ತುಂಬಾ ಪ್ರಶಸ್ತವಾದ ಸ್ಥಳವೆಂಬುದು ಶ್ರೀಗಳವರಿಗೆ ಹೊಳೆಯಿತು. ಒಮ್ಮೆ ಅವರ ಮನಸ್ಸಿನಲ್ಲಿ ಹೊಳೆಯಿತೆಂದರೆ ಅದು ಬೆಳೆದು ಬೆಳಗಲೇಬೇಕು. ಹಾಗೆ ಸ್ವಾಮಿಗಳು ಮುಟ್ಟಿದುದೆಲ್ಲಾ ಹೊನ್ನಾಗುವ ಮಾರ್ಗದಲ್ಲಿ ಕಾರ್ಯಗಳು ಬೆಳೆದು ಬರುತ್ತಿದ್ದುವು. ಮೊದಲು ಬನ್ನಿಮಂಟಪ, ಅನಂತರ ಆನೆಕರೋಟಿ, ಮತ್ತೆ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಮಾನಸಗಂಗೋತ್ರಿಯ ಆಚೆಯಿರುವ ನೂರಾ ಇಪ್ಪತ್ತೇಳು ಎಕರೆ ಜಾಗ – ಇವೆಲ್ಲಾ

ಶ್ರೀಗಳವರ  ಕಾರ್ಯಕ್ಷೇತ್ರಕ್ಕೆ ಅನುವಾಗಿದ್ದುವು. ಈಗ ನವಜ್ಯೋತಿ ಸ್ಟುಡಿಯೋ ಕಡೆ ಗಮನ ಹರಿಯಿತು. ಅಲ್ಲಿ ಯಾವುದೋ ಒಂದು ಕಾರ್ಖಾನೆಯನ್ನು ಸ್ಥಾಪಿಸಬೇಕು ಎಂಬ ಉದ್ದೇಶದಿಂದ ಕೆಲವು ಶ್ರೀಮಂತರು ಅದನ್ನು ಕೊಳ್ಳಲು ಪ್ರಯತ್ನಿಸಿದರು. ಆದರೆ "ಸರಸ್ವತಿಪುರಂ"ನ ಹೆಸರು ಅನ್ವರ್ಥವಾಗುವಂತೆ ಅಲ್ಲಿ ಸರಸ್ವತಿಯ ದೇಗುಲವನ್ನು ತೆರೆಯುವ ಪೂಜ್ಯ ಶ್ರೀಗಳವರ ಆಶಯವೇ ಕೊನೆಗೆ ಈಡೇರಿತು. ಕೆಲವು ಪ್ರಮುಖ ವ್ಯಕ್ತಿಗಳು ಈ ವಿಚಾರದಲ್ಲಿ ಆಸಕ್ತಿ ವಹಿಸಿದುದರಿಂದ ಅವರಿಗೆ ಆ ಜಾಗ ಲಭಿಸುವಂತಾಯಿತು. ಅದು ಅವರಿಗೆ ಒಂದು ದೊಡ್ಡ ಅನುಭವವನ್ನೇ ತಂದುಕೊಟ್ಟಿತು. ಆಗಲೂ ಅವರ ಬಳಿ ಕೊಡುವುದಕ್ಕೆ ಹಣವಿಲ್ಲ. ಮೊದಲು ಒಂದಷ್ಟು ಹಣವನ್ನು ಕೊಟ್ಟು ಉಳಿದುದಕ್ಕೆ ಮುಂದಿನ ಒಂದು ತಾರೀಖಿಗೆ ಚೆಕ್ಕನ್ನು ಕೊಟ್ಟರು. ಆ ತಾರೀಖು ಹತ್ತಿರ ಬಂದರೂ ಬ್ಯಾಂಕಿಗೆ ಅಗತ್ಯವಾದ ಹಣವನ್ನು ಜಮಾ ಮಾಡುವುದು ಆಗಲಿಲ್ಲ. ಬೆಳಕು ಹರಿದರೆ ಆ ಚೆಕ್ಕಿನ ತಾರೀಖು ಬರುತ್ತದೆ. ಅವರು ಆ ಚೆಕ್ಕನ್ನು ಬ್ಯಾಂಕಿಗೆ ಕಳಿಸುತ್ತಾರೆ. ಅಲ್ಲಿ ಸ್ವಾಮೀಜಿಯವರ ಲೆಕ್ಕದಲ್ಲಿ ಹಣ ಇಲ್ಲದೆ ಚೆಕ್ಕು ಹಿಂದಕ್ಕೆ ಬರುವಂತಾದರೆ ಅದು ಗೌರವವಲ್ಲ. ಅಂದು ರಾತ್ರಿ ಈ ವಿಷಯವನ್ನು ತಿಳಿಸಿ ಕೆಲವರಿಗೆ ಫೋನ್ ಮಾಡಿದರು. ಪ್ರಮುಖರೆಲ್ಲರಿಗೆ ಈ ವಿಷಯ ತಿಳಿಯಿತು. ಭಕ್ತವೃಂದದಲ್ಲಿ ಒಂದು ಕೋಲಾಹಲವೇ ಆಯಿತು. ಬೆಳಗಿನ ವೇಳೆಗೆ ಹಣ ಹೇಗೋ ಸಿದ್ಧವಾಗಿ ಬ್ಯಾಂಕು ತೆರೆಯುತ್ತಿದ್ದಂತೆಯೇ ಅದನ್ನು ಕಟ್ಟಿಯೂ ಆಯಿತು. ಅವರು ಬಂದು ಚೆಕ್ಕನ್ನು ಬ್ಯಾಂಕಿಗೆ ಕೊಡುವ ವೇಳೆಗೆ ಅಗತ್ಯವಾದಷ್ಟು ಹಣ ಅಲ್ಲಿತ್ತು.

"ಶಿವರಾತ್ರೀಶ್ವರ ಹೇಗೋ ನಡೆಸುತ್ತಾನೆ" ಎನ್ನುವ ಅವರ ಅಚಲ ನಂಬಿಕೆಗೆ, ಆ ನಂಬಿಕೆಯ  ಈಡೇರಿಕೆಗೆ ಇಂತಹ ಅನೇಕ ಉದಾಹರಣೆಗಳು. ಇದನ್ನೆಲ್ಲಾ ನೆನೆಸಿಕೊಂಡು ಪೂಜ್ಯರು ಮತ್ತೆ ಮತ್ತೆ ಹೇಳುತ್ತಿದ್ದ ಮಾತು —

"ಇದು ನಾನು ಮಾಡಿದೆ ಎನ್ನುವುದು ಸಲ್ಲದು. ಇದು ಭಕ್ತರ ಪ್ರಯತ್ನದ ಫಲ. ಶ್ರೀ ಶಿವರಾತ್ರೀಶ್ವರ ಅವರ ಮೂಲಕ ಮಾಡಿಸಿದ್ದಾನೆ !"

ಜಗದ್ಗುರು ಶ್ರೀ ಶಿವರಾತ್ರೀಶ್ವರ ವಿದ್ಯಾಸಂಸ್ಥೆಗೆ ಆನೆಕರೋಟಿ ಕಿರಿದಾಗುತ್ತಿರುವುದನ್ನು ಕಂಡು ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಅವರು 'ಹಸುವಿನ ಕರೋಟಿ'ಯನ್ನೂ ಸುಲಭ ಬೆಲೆಗೆ ಪೂಜ್ಯ ಜಗದ್ಗುರುಗಳಿಗೆ ಕೊಟ್ಟುಬಿಟ್ಟರು.

ಮತ್ತೊಮ್ಮೆ ಪೂಜ್ಯರು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದರು. ನಂಜನಗೂಡಿನಲ್ಲಿರುವ ಕಾಲೇಜಿನ ಕಟ್ಟಡ ಅರಮನೆಯದಾಗಿತ್ತು. ಅದು ಮಾರಾಟಕ್ಕೆ ಬಂತು. ಅದನ್ನು ಕೊಂಡುಕೊಳ್ಳುವ ನಿಶ್ಚಯ ಮಾಡಿದರು. ತೀರ್ಮಾನವಾದ ಎರಡನೇ ದಿನದಲ್ಲಿ ಪೂರ್ಣ ಹಣವನ್ನು ಕೊಡಬೇಕೆಂದು ಕರಾರು ಆಗಿತ್ತು. ಅರಮನೆಯವರಿಗೆ ಅಂದೇ ಹಣದ ಅವಶ್ಯಕತೆಯಿತ್ತು. ಅಷ್ಟೊಂದು ಅಧಿಕ ಮೊತ್ತವನ್ನು ಒಗ್ಗೂಡಿಸುವುದು ಸುಲಭಸಾಧ್ಯ ವಾಗಿರಲಿಲ್ಲ. ಶ್ರೀಗಳವರ ಅಂದಿನ ಪರಿಸ್ಥಿತಿಯನ್ನು ಪರಿಗಣಿಸಿದ ಅನೇಕರು ತಮ್ಮ

ಜೇಬುಗಳನ್ನು ತಡಕಿ ನೋಡಿಕೊಂಡರೂ ಆ ಮೊಬಲಗಿನ ಶತಾಂಶವನ್ನೂ ಕೂಡಿಸಲು ಸಾಧ್ಯವಾಗಲಿಲ್ಲ ! ಇನ್ನು ಈ ವ್ಯವಹಾರವನ್ನು ಕೈಬಿಡಬೇಕಾಗಿ ಬರಬಹುದು ಎಂಬ ಚಿಂತೆ. ಆದರೆ ಇದು ಸಂಸ್ಥೆಯ ಪ್ರತಿಷ್ಠೆಯ ಪರೀಕ್ಷಾಕಾಲವಾಗಿತ್ತು. ಎಲ್ಲರ ಮುಖಗಳ ಮೇಲೆ ನಿರಾಸೆ ಮತ್ತು ಆತಂಕದ ಕತ್ತಲು ಮುಸುಕಿತು. ಆದರೆ ಪೂಜ್ಯ ಜಗದ್ಗುರುಗಳವರು ವಿಚಲಿತರಾಗದೆ ಕಾರ್ಯವನ್ನು – ಅಂದರೆ ಪ್ರಯತ್ನವನ್ನು ಮುಂದುವರಿಸುತ್ತಲೇ ಇದ್ದರು. ಪತ್ರವನ್ನು ನೊಂದಾಯಿಸಲು ಅಧಿಕಾರಿಗಳ ಬಳಿಗೆ ಹೋಗಬೇಕಾದ ಸಮಯ ಸನ್ನಿಹಿತವಾಯಿತು. ಅದೇ ಸಮಯಕ್ಕೆ ಹಣ ಪಾವತಿ ಮಾಡಲೇಬೇಕಾದ ಪ್ರಸಂಗ ! ಕಾಲಕ್ಕೆ ಸರಿಯಾಗಿ ಅಗತ್ಯವುಳ್ಳವರು ಅಧಿಕಾರಿಗಳ ಬಳಿಗೆ ಆಗಲೇ ಸಿದ್ಧವಾದ ಪತ್ರ ತೆಗೆದುಕೊಂಡು ಹೋಗಿದ್ದಾರೆ. ಆದರೆ ಅರ್ಧದಷ್ಟೂ ಹಣ ಸೇರಲಿಲ್ಲ. ಕಾರ್ಯವನ್ನು ಕೈಬಿಡದಂತೆ ಮುಂದುವರಿಸಲು ಶ್ರೀಗಳವರ ಅಪ್ಪಣೆ ಆಗುತ್ತಲೇ ಇತ್ತು. ಆ ಪತ್ರದ ಪರಿಶೀಲನೆಯ ಕೆಲಸ ನಡೆಯುತ್ತಿದೆ. ಅರಮನೆಯ ಅಧಿಕಾರಿಗಳು ಹಣ ಎಲ್ಲಿ ? – ಎಂದು ಕೇಳುತ್ತಿದ್ದಾರೆ. ನಗದು ಹಣವನ್ನು ಅಲ್ಲಿ ಎಣಿಸಲೇಬೇಕಾಗಿದೆ ! ಇಂದು ಸಂಸ್ಥೆಯ ಗೌರವಕ್ಕೆ ಚ್ಯುತಿಬರುತ್ತದಲ್ಲಾ ಎಂಬ ತಳಮಳ ಆತಂಕ ಚಿಂತೆ ಎಲ್ಲರ ಮನದಲ್ಲಿ ಚಿಟುಮುಳ್ಳಾಡಿಸುತ್ತಿದೆ ! ದೂರವಾಣಿಯ ಮೂಲಕ ಅಧಿಕಾರಿಗಳ ಕೋಣೆಯಿಂದ ಕೊನೆಯದಾಗಿ ಶ್ರೀಗಳವರನ್ನು ಸಂಪರ್ಕಿಸಿದಾಗ "ಹಣ ಕಳಿಸುತ್ತಿದ್ದೇನೆ, ಕಾರ್ಯ ನಡೆಯಲಿ" — ಎಂದು ಶ್ರೀಗಳವರು ಅಭಯವನ್ನಿತ್ತರು .... ಅಧಿಕಾರಿಗಳು ಎಲ್ಲ ಬರವಣಿಗೆಗಳನ್ನೂ ಮುಗಿಸಿದರು. ತಮ್ಮ ಸಹಿ ಮತ್ತು ಸೀಲು (ಮುದ್ರೆ) ಹಾಕುವುದು ಮಾತ್ರ ಬಾಕಿ ಉಳಿದಿತ್ತು. ಆ ಸಮಯಕ್ಕೆ ಸರಿಯಾಗಿ ಶ್ರೀಗಳವರ ಪ್ರತಿನಿಧಿಗಳು ಹಣವನ್ನು ತಂದಿಟ್ಟರು ! ಅರಮನೆಯ ಅಧಿಕಾರಿಗಳು ಹಣವನ್ನು ಎಣಿಸಿಕೊಳ್ಳುತ್ತಿದ್ದರು!" ......

## ಭಕ್ತರ ಮನತಣಿಸಿದ ಘನಮನರು

ತೀರ್ಥಕ್ಷೇತ್ರಗಳಿಗೆ ಹೋಗುವುದು ಯಾತ್ರೆ ಎನ್ನಿಸುತ್ತದೆ. ಯಾತ್ರೆ ಕೈಕೊಳ್ಳುವವರಲ್ಲಿ —ಪಾಪಪರಿಹಾರ ಮಾಡಿಕೊಳ್ಳಬೇಕು, ಪುಣ್ಯಾರ್ಜನೆ ಮಾಡಬೇಕು, ಮುಕ್ತಿ ಪಡೆಯಬೇಕು, ಕಷ್ಟನಷ್ಟಗಳು – ಈತಿಬಾಧೆಗಳು ಪರಿಹಾರವಾಗಬೇಕು—ಎನ್ನುವ ಸ್ವಾರ್ಥ ಅಡಗಿರುತ್ತದೆ.

ಊರುಗಳಿಗೆ ಹೋಗುವುದು ಪಯಣ ಎನ್ನಿಸುತ್ತದೆ. ಪಯಣ ಹೋಗುವವರು— ತಮ್ಮ ತಮ್ಮ ಕಾರ್ಯಾರ್ಥ, ಕೌಟುಂಬಿಕ ವ್ಯವಹಾರಗಳಿಗಾಗಿ, ವ್ಯಾಪಾರ-ವ್ಯವಹಾರಗಳಿಗಾಗಿ, ತಾವು ಕೆಲಸ ಮಾಡುತ್ತಿರುವ ಕಛೇರಿಗಳ ಕಾರ್ಯಗೌರವದಿಂದ ಹೋಗುತ್ತಾರೆ. ಇಲ್ಲಿಯೂ ಸ್ವಾರ್ಥ ಹಿನ್ನೆಲೆಯಲ್ಲಿರುತ್ತದೆ.

ಸುಂದರ ನಗರಗಳಿಗೆ, ಪ್ರಕೃತಿನಿಬಿಡ ತಾಣಗಳಿಗೆ, ವಿಶ್ರಾಂತಿಧಾಮಗಳಿಗೆ, ಚಾರಿತ್ರಿಕ ಪ್ರಾಮುಖ್ಯವಿರುವ ಸ್ಥಳಗಳಿಗೆ ಹೋಗಿಬರುವುದು 'ಪ್ರವಾಸ'— ಎನ್ನಿಸುತ್ತದೆ. ಪ್ರವಾಸ ಮಾಡು ವಲ್ಲಿಯೂ – ನಿತ್ಯ ಜಂಜಡಗಳಿಂದ ಮುಕ್ತರಾಗಲು, ನವೋಲ್ಲಾಸ ಹೊಂದಲು,

ಮನಸ್ಸನ್ನು ನಿರಾಳಗೊಳಿಸಿಕೊಳ್ಳಲು, ಜ್ಞಾನ-ಸಾಮಾನ್ಯ ತಿಳುವಳಿಕೆಯ ಪರಿಧಿಯನ್ನು ಹಿಗ್ಗಲಿಸಿಕೊಳ್ಳಲು, ಸುಖವಾಗಿ ಕಾಲಕಳೆಯಲು ಪ್ರವಾಸ ಕೈಗೊಳ್ಳುವಲ್ಲಿಯೂ ಈ ಎಲ್ಲ ಸ್ವಾರ್ಥ ಮಿಳಿತ ವಾಗಿರುತ್ತದೆ.

ಪರ್ಯಟನ— ವಿಶ್ವಪರ್ಯಟನ— ಇವುಗಳಲ್ಲೂ ವೈಯಕ್ತಿಕ ಆಸಕ್ತಿ ಪ್ರಧಾನವಾಗಿರುತ್ತದೆ.

ಅಯಣ—ಎಂದರೆ ಸುತ್ತಾಟ, ತಡಕಾಟ, ಸಂಚಾರ, ಗುರಿ ಸಾಧನೆಗೈಯಲು—ಅಯಣ ಎನ್ನಬಹುದು. ರಾಮಾಯಣ—ರಾಮನ ಅಯಣ—ರಾಮನ ಸುತ್ತಾಟ, ಪತ್ನಿಯ ಹುಡುಕಾಟ, ಅದಕ್ಕಾಗಿ ಎಲ್ಲೆಲ್ಲೋ ಸಂಚಾರ— ಅಯಣವಾಗುತ್ತದೆ.

ಉತ್ತರಾಯಣ— ದಕ್ಷಿಣಾಯಣ—ಸೂರ್ಯ ಸಂಚಾರ ಪಥ ಬದಲಾವಣೆಗೆ ಸಂಬಂಧಿಸಿದ್ದು.

ಅಟನೆ – ಪರ್ಯಟನೆ —ಭಿಕ್ಷಾಟನೆ – ಇದರಲ್ಲೂ ತನ್ನ ಆಸೆ, ಅಭೀಪ್ಸೆ, ಆಕಾಂಕ್ಷೆ, ಈಡೇರಿಕೆ —ಹೀಗೆ ಸ್ವಾರ್ಥ ಮೂಲವಾಗಿರುತ್ತದೆ.

ಸ್ವಾರ್ಥರಹಿತವಾದ ಪಯಣ-ಪರ್ಯಟನೆ-ಅಯಣ-ಹ್ಞಾ ಮತಿವಿಕಲರ ಓಡಾಟ, ಸಂಚಾರ, ಎಲ್ಲೆಲ್ಲಿಗೋ ಪಯಣ —ಇವುಗಳಲ್ಲಿ ಪಾಪ, ಅವರ ಸ್ವಾರ್ಥ ಇದೆ ಎಂದು ಹೇಳ ಲಾಗದು. ಈ ಇದನ್ನು ಪರಿಭ್ರಮಣ-ಮತಿಭ್ರಮಣದಿಂದಾಗಿ ನಡೆಯುವ ಪರಿಭ್ರಮಣ ಎನ್ನ ಬಹುದೇನೋ... !

ಸ್ವಾರ್ಥರಹಿತವಾದ ಪರ್ಯಟನೆ ಮಾಡುವವರು ಇಲ್ಲವೆಂದಲ್ಲ. ಸಾಧು–ಸಂತರು, ಸತ್ಪುರುಷರು, ಶರಣರು, ದಾಸವರೇಣ್ಯರು ಇವರ ಪರ್ಯಟನೆ ಸಂಚಾರ — ಯಾತ್ರೆ– ಪಯಣ–ಅಯಣ – ಯಾವ ಹೆಸರಿನಿಂದ ಕರೆದರೂ – ಇಂಥವರಲ್ಲಿ ಸ್ವಾರ್ಥ ಇರುವುದಿಲ್ಲ ಎನ್ನುವುದರಲ್ಲಿ ತಪ್ಪೇನೂ ಇಲ್ಲ.

ಇಂಥ ಸ್ವಾರ್ಥರಹಿತ ಪ್ರಯಾಣಕ್ಕೆ ಏನೆಂದು ಕರೆಯುವುದು ?!

ಯಾವ ವಿಶೇಷಣವನ್ನೂ ಹಚ್ಚದೆ ಪಯಣ ಎನ್ನಬೇಕಾಗುತ್ತದೆ. ಪಯಣ ಮಾಡುವವರ ವ್ಯಕ್ತಿತ್ವದ ಮೇಲೆ ಆ ಪಯಣ–ಸ್ವಾರ್ಥಪೂರಿತವೋ, ಸ್ವಾರ್ಥರಹಿತವೋ ಆಗಿರುತ್ತದೆ.

ಸುತ್ತೂರು ಶ್ರೀ ವೀರಸಿಂಹಾಸನಾಧೀಶ್ವರ, ಇಪ್ಪತ್ತುಮೂರನೆಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಮಾಡಿದ ಪಯಣವನ್ನು ಸ್ವಾರ್ಥರಹಿತ ಪ್ರಯಾಣ – ಪರಾರ್ಥ ಪ್ರಯಾಣ ಎನ್ನಬಹುದು.

ಹ್ಞಾ, ಆದರೆ, ಶ್ರೀಗಳವರು ಮೊತ್ತಮೊದಲು ಕೈಕೊಂಡ ಪಯಣ–ಕಾಶೀ ಪ್ರಯಾಣ. ಈ ಪ್ರಥಮ ಪ್ರಯಾಣ —ತಾವು ವಿದ್ವಾಂಸರಾಗಬೇಕು ಎಂಬ ಅಭೀಪ್ಸೆಯಿಂದ, ವಿದ್ಯಾಕಾಂಕ್ಷೆ

ಯಿಂದ ವೈಯಕ್ತಿಕ ಜ್ಞಾನಾರ್ಜನೆಯ ಸ್ವಾರ್ಥದಿಂದ –ಶ್ರೀ ಗೌರೀಶಂಕರ ಸ್ವಾಮೀಜಿಯವರ ಗುರುತ್ವಾಕರ್ಷಣೆಗೆ ಒಳಗಾಗಿ ಗೈದ ಕಾಶೀ ಪ್ರಯಾಣವೊಂದನ್ನು ಬಿಟ್ಟರೆ, ಇಗೋ ಈ ಮುಂದಿನ ಪಯಣಗಳೆಲ್ಲಾ ಅವರ ಪರ್ಯಟನೆ – ಸಂಚಾರ– ಇವೆಲ್ಲಾ ಪರಾರ್ಥ ಪ್ರಯಾಣವೇ ....

ಕೆಲವರು ಪ್ರಯಾಣ ಹೊರಡುವ ಮುನ್ನಾದಿನ, ಹೊರಡುವ ದಿನ ನಡೆಸುವ ಸಂಭ್ರಮದ, ಸಡಗರದ, ವೈಭವದ ಕಲಾಪಗಳು –ತಾವು ಪ್ರಯಾಣ ಹೊರಟಿರುವುದು ನಾಲ್ಕು ಜನಕ್ಕೆ ತಿಳಿಯಲಿ ಎಂಬ, ಸಾಧ್ಯವಾದರೆ ನೋಡಿದವರು ತಮ್ಮ ಅದ್ದೂರಿಯನ್ನು ಕಂಡು ಕರುಬಲಿ, ಹೊಟ್ಟೆ ಉರಿದುಕೊಳ್ಳಲಿ –ಎಂಬ 'ದೊಡ್ಡಸ್ತಿಕೆ' ಅಪ್ರಜ್ಞಾಪೂರ್ವಕವಾಗಿ, ಕೆಲವೊಮ್ಮೆ ಪ್ರಜ್ಞಾಪೂರ್ವಕವಾಗಿಯೇ ಅಂಥವರಲ್ಲಿ ಕೆಲಸ ಮಾಡುತ್ತಿರುತ್ತವೆ.

ಇಂತಹ ಅಬ್ಬರದ, ಅದ್ದೂರಿಯ 'ಪಯಣ'ವನ್ನು ಕೆಲವು ಸ್ವಾಮಿಗಳು, ಮಠಾಧೀಶ್ವರರು, ಜಗದ್ಗುರುಗಳು ಶ್ರೀಮದ್ಗಾಂಭೀರ್ಯದಿಂದ 'ಅಡ್ಡಪಲ್ಲಕ್ಕಿ'ಯಲ್ಲೋ, ಅಲಂಕೃತ ರಜತ ರಥಗಳಲ್ಲೋ ಪಯಣಿಸುವುದುಂಟು ! ಅದರಲ್ಲೂ ಭಕ್ತರು ಇಷ್ಟಪಡಲಿ, ಪಡದಿರಲಿ, ಕೆಲವು ಶ್ರೀ ಶ್ರೀಗಳು ಹೊರಡುವುದೇ ಅಡ್ಡಪಲ್ಲಕ್ಕಿಗಳಲ್ಲಿ ನಾಲ್ಕು ಜನರಿಂದ – ಜೀವಂತವಿರುವಾಗಲೇ ಹೊರಿಸಿಕೊಂಡು !! ಇದನ್ನು ಸತ್ಸಂಪ್ರದಾಯ, ಪರಂಪರಾಗತ ಆಚಾರ, ಅನಿವಾರ್ಯ ಪದ್ಧತಿ –ಎಂಬ ಆಡಂಬರದ ಪ್ರಚಾರ ಬೇರೆ !

ತ್ರಿಕರಣಪೂರ್ವಕವಾಗಿ ಎಳ್ಳಷ್ಟೂ ತಮಗಿಷ್ಟವಿಲ್ಲದಿದ್ದರೂ, ಅಸಂಖ್ಯಾತ ಭಕ್ತರ ನಿರಂತರ ಮನವಿ, ಕೋರಿಕೆ, ಒತ್ತಾಯಗಳಿಗೆ ಮಣಿದು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಗಳವರು ಒಮ್ಮೆ, ಒಂದೇ ಒಂದು ಸಲ ಅಡ್ಡಪಲ್ಲಕ್ಕಿ ಮೆರವಣಿಗೆಗೆ ಒಪ್ಪಲೇಬೇಕಾಯಿತು. ಆಮೇಲೆ, ಎಷ್ಟೆಲ್ಲ ಒತ್ತಡಗಳು, ಕೋರಿಕೆಗಳು ಮನವಿಗಳು ಬಂದರೂ, ಮತ್ತೆಂದೂ ಇಂಥ ಅರ್ಥಹೀನ ಆಚರಣೆಯನ್ನು –

"ಹೊರಿಸಿಕೊಂಡು ಹೋದ ಶುನಕ ಮೊಲನೇನು ಹಿಡಿದು ತಂದೀತು"

– ಎಂದು ಅಣ್ಣನ ವಾಣಿಯಂತೆ ಖಡಾಖಂಡಿತವಾಗಿ ನಿರಾಕರಿಸಿಬಿಟ್ಟರು !

ಆದರೆ –ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರ ಜಯಂತ್ಯುತ್ಸವದ ಅಂತಿಮ ದಿನದಂದು –ಚಿನ್ನದ ಕಿರೀಟದ ಭಾರವನ್ನು ತಮ್ಮ ಮಸ್ತಕದ ಮೇಲೆ ಹೊರಲೇ ಬೇಕಾಯಿತು –ಈ ಬಗ್ಗೆ ಯಾವ ಮುಚ್ಚುಮರೆಯಿಲ್ಲದೆ, ತಮ್ಮ ಅಂತರಂಗವನ್ನು ತೆರೆದಿಟ್ಟಿದ್ದಾರೆ –

"ಈ ಕಾರ್ಯಕ್ರಮ ಹಿಂದಿನಿಂದಲೂ ನಡೆದುಕೊಂಡೇ ಬಂದಿದೆ. ಮೊದಲ ಸಲ ಒಪ್ಪಿಕೊಂಡಿದ್ದೇ ತಪ್ಪು. ಒಮ್ಮೆ ಒಪ್ಪಿಕೊಂಡ ಮೇಲೆ ಮಧ್ಯೆ ಬಿಡುವಂತಲ್ಲದಾಗಿದೆ. ಅದಕ್ಕೆ ನಾವು ಮನಸ್ಸಿಲ್ಲದಿದ್ದರೂ ಬದ್ಧರಾಗಿ ಅನುಸರಿಸಿಕೊಂಡು ಬರುತ್ತಿದ್ದೇವೆ. ವೈಯಕ್ತಿಕವಾಗಿ ಇದೆಲ್ಲಾ ನಮಗಂತೂ ಇಷ್ಟವಿಲ್ಲ. ಆದರೆ ಇಷ್ಟು ದಿನವೂ ಹೀಗೆ

ಮಾಡಿಕೊಂಡು ಬಂದು ಒಮ್ಮೆಲೇ ಮಧ್ಯದಲ್ಲಿ ಅದನ್ನು ನಿಲ್ಲಿಸುವುದು ಎಷ್ಟು ಸೂಕ್ತವೋ ತಿಳಿಯದು. ಇದು ನಮ್ಮ ಕಾಲಕ್ಕೆ ಹೀಗೇ ನಡೆಯಲಿ. ನಂತರ ಮುಂದಿನವರಿಗೆ ಬಿಟ್ಟದ್ದು."

ಆ ಮುಂದಿನವರೇ ಇಂದಿನ, ಇಪ್ಪತ್ತನಾಲ್ಕನೆಯ ಜಗದ್ಗುರು ಪರಮಪೂಜ್ಯ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರು – ತಮ್ಮ ಹಿರಿಯ ಗುರುಗಳವರ ಭವಿಷ್ಯವಾಣಿ ಯಂತೆಯೇ, ಚಿನ್ನದ ಕಿರೀಟಧಾರಣೆಯನ್ನು ಖಡಾಖಂಡಿತವಾಗಿ ಪ್ರಾರಂಭದಲ್ಲಿಯೇ ನಿರಾಕರಿಸಿಬಿಟ್ಟಿದ್ದಾರೆ.

ಮೊಟ್ಟಮೊದಲ ಮತ್ತು ಕೊಟ್ಟಕೊನೆಯ ಅಡ್ಡಪಲ್ಲಕ್ಕಿ ಮಹೋತ್ಸವದಲ್ಲಿ ಪೂಜ್ಯ ಶ್ರೀಗಳವರು ತಮಗೆ ಅಸಂಖ್ಯಾತ ಭಕ್ತರು, ಅನೇಕ ಊರುಗಳಲ್ಲಿ ಸಮರ್ಪಿಸಿದ ಕಾಣಿಕೆಯನ್ನೆಲ್ಲಾ –ತಾವು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ವಿನಿಯೋಗಿಸಿಬಿಟ್ಟರು-

...ಅಸಂಖ್ಯಾತ ಭಕ್ತರ ಅವಿರತ ಕೋರಿಕೆಯ ಮೇರೆಗೆ ಪೀಠದ ಸಂಪ್ರದಾಯಕ್ಕನುಗುಣ ವಾಗಿ ಹಿರಿಯ ಜಗದ್ಗುರುಗಳವರು ಶ್ರೀಮಠಕ್ಕಾಗಿ ರಜತ ಸಿಂಹಾಸನವನ್ನು, ರಜತ ಪಲ್ಲಕ್ಕಿಯನ್ನು ಚಿನ್ನದ ಕಿರೀಟವನ್ನು ಮಾಡಿಸಿದರು. ಆದರೆ ಅವುಗಳನ್ನು ತಾವು ಬಳಸಲು ಒಪ್ಪಲಿಲ್ಲ. ಆದರೂ ಒಮ್ಮೆ ಮಾತ್ರ ಮತ್ತೆ ಭಕ್ತರ ಒತ್ತಾಯದ ಮೇರೆಗೆ ತಮ್ಮ ವರ್ಧಂತಿಯ ಶುಭದಿನದಂದು ಸುತ್ತೂರಿನಲ್ಲಿ ಸಿಂಹಾಸನಾರೋಹಣ ಮಾಡಿದರು. ಅಷ್ಟೆ.

ಅನಂತರ ನಂಜನಗೂಡು ತಾಲ್ಲೂಕು ದೇವನೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಏರ್ಪಡಿಸ ಲಾಯಿತು. ಈ ಸಮಾರಂಭದಲ್ಲಿ ಭಕ್ತರ ಸಂದಣಿ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿತು! ವೈಭವೋಪೇತ ಸಮಾರಂಭ –ಮೊದಲ ಬಾರಿಗೆ ಕಿರೀಟಧಾರಣ ಮಾಡುತ್ತಿರುವ ದಿನ – ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ –ತಮ್ಮ ಕರಕಮಲಸಂಜಾತರಿಗೆ ಹಿರಿಯ ಜಗದ್ಗುರುಗಳವರು ತಾವೇ ಕಿರೀಟಧಾರಣ ಮಾಡಿದರು. ಅದಕ್ಕನುಗುಣವಾದ ಯಾವ ಉಡುಪನ್ನು ಧರಿಸಬೇಕೆಂಬುದನ್ನೂ ಸೂಚಿಸಿದರು. ಕಿರಿಯ ಜಗದ್ಗುರುಗಳವರು ಅಡ್ಡಪಲ್ಲಕ್ಕಿ ಯನ್ನು ಆರೋಹಣಮಾಡಿ ಉತ್ಸವ ಹೊರಟಾಗ ಕಣ್ತುಂಬ ನೋಡಿ ಆನಂದಭರಿತರಾದರು. ಉತ್ಸವವು ಮಠಕ್ಕೆ ಹಿಂತಿರುಗಿ ಬರುವಾಗ ಮತ್ತೆ ನೋಡಿ ನೋಡಿ ಆನಂದತುಂದಿಲರಾದರು. ಅವರು ಪಟ್ಟ ಆನಂದ ಅವರ್ಣನೀಯ.

ಈ ಮಹೋತ್ಸವವನ್ನು ಒಂದು ಮಾಸ ಪರ್ಯಂತ ನಿರಂತರವಾಗಿ ಸುತ್ತಮುತ್ತಲ ಗ್ರಾಮಗಳಲ್ಲಿ ನ ಭೂತೋ ನ ಭವಿಷ್ಯತಿ ಎಂಬಂತೆ ಆಚರಿಸಲಾಯಿತು. ಆಯಿತು, ಅದೇ ಕೊನೆ.

ಮತ್ತೆಂದೂ ಶ್ರೀ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಅಡ್ಡಪಲ್ಲಕ್ಕಿಯನ್ನು ಆರೋಹಿಸಲೇ ಇಲ್ಲ !

ಆ ಮಾಸಪರ್ಯಂತ ನಡೆದ ಅಡ್ಡಪಲ್ಲಕ್ಕಿಯ ಪಯಣವೂ ಪರಾರ್ಥಪ್ರಯಾಣ ವಾಗಿಯೇ ಪರಿಣಮಿಸಿತು –

ಸುತ್ತಮುತ್ತಲ ಗ್ರಾಮಗಳವರು – ತಮ್ಮ ಗ್ರಾಮಕ್ಕೆ, ತಮ್ಮ ಗ್ರಾಮಕ್ಕೆ ಪಾದ ಬೆಳೆಸಬೇಕು ಎಂದು ಸಮಷ್ಟಿ ತಮ್ಮ ತಮ್ಮ ಊರುಗಳಿಗೆ ಅನನ್ಯ ಭಕ್ತಿಯಿಂದ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರನ್ನು ಬಿಜಯಂಗೈಸಿ ಅಭೂತಪೂರ್ವವಾಗಿ ಮೆರೆಸಿ, ತಮ್ಮ ಶಕ್ತ್ಯಾನುಸಾರ ದವಸಧಾನ್ಯದ ರೂಪದಲ್ಲಿ ಧನ-ಕನಕ ರೂಪದಲ್ಲಿ ಭಕ್ತಿ ಸಮರ್ಪಣೆ ಮಾಡಿದರು.

ಯಾವ ಗ್ರಾಮಕ್ಕೆ ಬಿಜಯಂಗೈಸಿದರೂ – ಆ ಗ್ರಾಮಗಳಲ್ಲಿ –

ಎಲ್ಲಿ ನೋಡಿದಡಲ್ಲಿ ತೋರಣ
ಎಲ್ಲಿ ನೋಡಿದಡಲ್ಲಿ ಚಪ್ಪರ
ವೆಲ್ಲಿ ನೋಡಿದಡಲ್ಲಿ ನೀರಿನ ಚಳೆಯ ತೋರಿದುದು
ಎಲ್ಲಿ ನೋಡಿದಡಲ್ಲಿ ಕೀರ್ತನ
ವೆಲ್ಲಿ ನೋಡಿದಡಲ್ಲಿ ಗಜಬಜ
ವೆಲ್ಲಿ ನೋಡಿದಡಲ್ಲಿ ವಾದ್ಯ ನಿನಾದದಬ್ಬರಣೆ !

ಪ್ರತಿ ಗ್ರಾಮದಲ್ಲೂ ಸಮಾರಂಭ ; ಸಮಾರಂಭದಲ್ಲಿ, ಚಿಕ್ಕ ಮಕ್ಕಳಿಗೂ ಸುಲಭವಾಗಿ ಅರ್ಥವಾಗುವ ಹಾಗೆ ತಿಳಿಯಾದ ಭಾಷೆಯಲ್ಲಿ ಧರ್ಮಬೋಧೆ ಶ್ರೀಗಳವರಿಂದ ಓತಪ್ರೋತವಾಗಿ ಗಂಗಾಸಲಿಲದಂತೆ ಹರಿಯಿತು.

ಶ್ರೀ ಶಿವಪ್ರಭುಸ್ವಾಮಿಗಳವರು, ಜ್ಯೋತಿಗೌಡನಪುರದ ರುದ್ರಸ್ವಾಮಿ, ಕಾಗಲ್ವಾಡಿ ಮಠದ ಪ್ರಕಾಂಡ ಪಂಡಿತ ಯೋಗಿ ಶ್ರೀ ಶಿವರುದ್ರಸ್ವಾಮಿಗಳು ಸಹಚರರಾಗಿ ಚೆನ್ನಾನಿಂಗನ ಹಳ್ಳಿಗೆ ದಯಮಾಡಿಸಿದರು.

ಗ್ರಾಮದ ಸಮಸ್ತ ಜನರು ಅಣ್ಣತಮ್ಮಂದಿರಂತೆ, ಅವಿಭಕ್ತ ಕುಟುಂಬದವರಂತೆ ಸಾಮೂಹಿಕವಾಗಿ ಉತ್ಸವವನ್ನು ಮಾಡಿ, ಜಯಜಯಕಾರಗಳಿಂದ ಜಗದ್ಗುರುಗಳ ಪಾದಪೂಜೆ ಮಾಡಿ ಭಕ್ತಿಯಿಂದ ಕಾಣಿಕೆ ಅರ್ಪಿಸಿದರು.

ಪರುಷಗೌಡನಪಾಳ್ಯದವರು ಅಲ್ಲಿಗೆ ಬಂದು ತಮ್ಮ ಪಾಳ್ಯಕ್ಕೆ ಸಂಭ್ರಮದಿಂದ ಮೆರವಣಿಗೆಯಲ್ಲಿ ಶ್ರೀಗಳವರನ್ನು ಬಿಜಯಂಗೈಸಿದರು.

ಮುಂದೆ ಒಡೆಯರಪಾಳ್ಯದ ಭಕ್ತರು ತಮ್ಮಲ್ಲಿಗೆ ಬರಮಾಡಿಕೊಂಡು, ಸಂಭ್ರಮಿಸಿ, ಉತ್ಸವಾಚರಣೆ ನಡೆಸಿ, ಅಂದು ರಾತ್ರಿ ಪೂಜ್ಯರಿಗೆ ಪೂಜೆ-ಧ್ಯಾನಗಳಿಗೆ ಏರ್ಪಡಿಸಿದರು. ಇಡೀ ಊರಿಗೆ ಸಮಾರಾಧನೆಯಾಯಿತು. ರಾತ್ರಿಯಿಡೀ ಭಜನೆ ನಡೆಯಿತು.

ಮುಂದೆ ಬಯಲೂರು.

ಬಯಲೂರಿನ ಮುಖಂಡ ಚಿಕ್ಕಣ್ಣನವರು ನಯವಿನಯಸಂಪನ್ನರು. ಪರಮಭಕ್ತರು. ತಮ್ಮೂರಿಗೆ ಬರಮಾಡಿಕೊಂಡು, ವೈಭವದ ಸಮಾರಂಭ ಏರ್ಪಡಿಸಿ, ಅಂದು ರಾತ್ರಿ ತಮ್ಮ ಮನೆಯಲ್ಲಿಯೇ ಜಗದ್ಗುರುಗಳು ಹಾಗೂ ಹರಗುರುಚರಮೂರ್ತಿಗಳ ಪೂಜೆಗೆ ಅಣಿ

ಮಾಡಿದರು. ಭಕ್ತರೆಲ್ಲರೂ ಶ್ರೀಗಳವರೊಂದಿಗೆ ಶಿವಪೂಜಾಮಗ್ನರಾಗಿ, ಪ್ರಸಾದ ಸ್ವೀಕರಿಸಿ, ಕೃತಾರ್ಥರಾದೆವೆಂದು ನಲಿದಾಡಿದರು.

ತಮಿಳುನಾಡಿನ ಗಡಿ ಪ್ರದೇಶದ ಕನ್ನಡಿಗರು, ತಮ್ಮ ತಮ್ಮ ಊರುಗಳಿಗೆ ಬರಮಾಡಿ ಕೊಂಡು ಅತ್ಯುತ್ಸಾಹದಿಂದ, ತಮ್ಮ ಜೀವಮಾನದಲ್ಲೇ ಜಗದ್ಗುರುಗಳ ಪಾದದರ್ಶನ ಇದೇ ಪ್ರಥಮ ಬಾರಿ, ಇದು ತಮ್ಮ ಜನ್ಮಜನ್ಮಾಂತರ ಸುಕೃತ ಎಂದು ಹಿಗ್ಗಿ ಕುಣಿದಾಡಿದರು. ಸಾಕ್ಷಾತ್ ಶಿವಲಿಂಗಕ್ಕೆ ಪೂಜೆ ಮಾಡುವ ಹಾಗೆ. ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಪೂಜಿಸಿದರು, ಭಕ್ತಿಗೀತೆಗಳನ್ನು ಗಂಡಸರೂ, ಹೆಂಗಸರೂ – ಒಬ್ಬರ ಗುಂಪು ಹಾಡಿದ ಮೇಲೆ ಮತ್ತೊಬ್ಬರ ಗುಂಪು ಸ್ಪರ್ಧಾಮನೋಭಾವದಿಂದ ಹಾಡಿ ಹಾಡಿ ತಣಿಯದಾದರು...!

ಅಸಂಖ್ಯಾತ ಭಕ್ತರು ಅರ್ಪಿಸಿದ ಸುಮಾರು ಏಳೆಂಟುನೂರು ಪಲ್ಲ ದವಸಧಾನ್ಯಗಳನ್ನು ಮರುದಿನ ಜಗದ್ಗುರುಗಳವರು ಉಚಿತ ವಿದ್ಯಾರ್ಥಿನಿಲಯಗಳಿಗೆ ಕೊಂಡೊಯ್ಯುವ ವ್ಯವಸ್ಥೆ ಮಾಡಿದರು.

ಪ್ರತಿ ಹಳ್ಳಿಯಲ್ಲೂ, ಸಮಾರಂಭದ ಅಂತ್ಯದಲ್ಲಿ, ಜಗದ್ಗುರುಗಳವರು ನೆರೆದ ಜನಸಮೂಹಕ್ಕೆ ಧರ್ಮದ ಕುರಿತು ಹೇಳುತ್ತ, ವಿದ್ಯೆಯ ಸತ್ಪರಿಣಾಮಗಳನ್ನು ಮನಗಾಣುವಂತೆ ವಿವರಿಸಿ, ತಮ್ಮ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು, ನೀವು ಕೊಟ್ಟಿರುವ, ಅರ್ಪಿಸಿರುವ ದವಸ ಧಾನ್ಯ ಕಾಣಿಕೆಗಳೆಲ್ಲವೂ ನಾವು ಅಲ್ಲಲ್ಲಿ ಸ್ಥಾಪಿಸಿರುವ ವಿದ್ಯಾರ್ಥಿ ನಿಲಯಗಳಿಗೆ ಮೀಸಲಾಗಿದೆ. ನಿಮ್ಮ ಮಕ್ಕಳಿಗೆ ಉಚಿತ ಅಶನವನ್ನು ವಸತಿಯನ್ನು ಒದಗಿಸುತ್ತೇವೆ. ನಿಮ್ಮ ನಿಮ್ಮ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಿಕೊಡಿ. ಅವರು ದೊಡ್ಡವ ರಾದ ಮೇಲೆ, ತಂದೆ-ತಾಯಿಗಳಾದ ನಿಮ್ಮನ್ನು ಸದಾ ಕೃತಜ್ಞತೆಯಿಂದ ನೆನೆದುಕೊಳ್ಳುತ್ತಾರೆ; ತಾವೂ ಸುಖಪಡುತ್ತಾರೆ, ತಮ್ಮ ಗ್ರಾಮಗಳನ್ನೂ ಸುಧಾರಿಸುತ್ತಾರೆ – ಎಂದು ಮನದಟ್ಟು ಮಾಡಿದರು .......

ಆ ಗ್ರಾಮಸ್ಥರು ಇದಕ್ಕೆ ತಮ್ಮ ಒಪ್ಪಿಗೆಯಿದೆ ಎಂದು ತಿಳಿಸುವಂತೆ –

"ಜಗದ್ಗುರು ಪರಮ ಪೂಜ್ಯ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಉಘೇ ! ಉಘೇ !" –ಎಂದು ಜಯಘೋಷ ಮಾಡಿದರು.

ಒಂದೊಂದು ಊರಿನಲ್ಲಂತೂ ಕಾಗಲ್ವಾಡೀ ಶ್ರೀ ಶಿವರುದ್ರಸ್ವಾಮಿಗಳವರಂತೂ, ತಾವು ಪ್ರಕಾಂಡಪಂಡಿತರಾದಾಗ್ಯೂ, ಆಯಾ ಗ್ರಾಮಸ್ಥರ ಆಡುಭಾಷೆಯಲ್ಲಿಯೇ ಬಹಳ ಸ್ವಾರಸ್ಯ ವಾಗಿ, ಮನಂಬುಗುವಂತೆ, ವಿದ್ಯಾಪಾರಮ್ಯವನ್ನು ವಿವರಿಸುತ್ತಿದ್ದರು.

ಜನರೆಲ್ಲ ಹೌದು ಹೌದು. ಆಗಲಿ ಆಗಲಿ ನಮ್ಮ ಮಕ್ಕಳನ್ನು ಜಗದ್ಗುರುಗಳ ಪಾದ ಸನ್ನಿಧಿಗೆ ಅರ್ಪಿಸುತ್ತೇವೆ –ಎಂದೆಲ್ಲ ವಚನ ನೀಡಿದರೆಂದೇ ಹೇಳಬಹುದು!

* * *

ಮುಂದಿನ ಗ್ರಾಮ ಗೇರುಮಾಳ.

ಗೇರುಮಾಳದ ಮುಂದಾಳು ಹಲಗೆಗೌಡರು. ಅವರ ಹಟ್ಟಿಯಲ್ಲಿ ಶ್ರೀಗಳವರ ವಾಸ್ತವ್ಯ. ಶಿವಪೂಜೆ - ಪಾದಪೂಜೆ – ಪ್ರಸಾದವಿನಿಯೋಗ – ಅಂದು ಆ ಕುಟುಂಬಕ್ಕೆ ಸೀಮಿತ.

ಮರುದಿನ –

ಊರವರನ್ನೆಲ್ಲಾ ಹೇಗೆ ಒಗ್ಗೂಡಿಸುವುದು ಎಂದು ಹಲಗೆಗೌಡರ ಚಿಂತೆ. ಕಾರಣ ಊರಲ್ಲಿ ಜಾತಿ ದ್ವೇಷದಿಂದಾಗಿ ಎರಡು ಪ್ರಬಲ ಗುಂಪುಗಳಲ್ಲಿ ರಕ್ತದಾಹ !

ಊರಿನ ವೃದ್ಧರು ಹಲವರು ಆ ಗುಂಪಿನ ನಾಯಕರ ಕಣ್ತಪ್ಪಿಸಿ ಬಂದು, ಶ್ರೀಗಳವರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿ, ಎದ್ದು ಕೈಕಟ್ಟಿಕೊಂಡು ನಿಂತು –

"ಬುದ್ದೀ, ಈ ಊರಿನ್ಯಾಗ ಎಲ್ಲು ಪಾಲ್ಟಿ ಆಗೈತೆ... ಮಾತೆತ್ತಿದರೆ ಹೊಡೆದಾಟ ಕಡಿದಾಟ, ನಮ್ಮಾತ್ನ ಯಾರೂ ಕೇಳಂಗಿಲ್ಲ. ನಾವ್ಯಾಕಾದ್ರೂ ಇನ್ನೂ ಬದುಕಿದ್ದೀವೋ ಅಂತ ಭೋ ಸಂಕಟ ಆಗೈತಿ. ತಾವೇ ಏನಾರಾ ಮಾಡಿ ಎಲ್ಲು ಪಾರ್ಟೀನ ಒಂದು ಮಾಡಬೇಕ್ರಾ ಬುದ್ದೀ..."

ಶ್ರೀಗಳವರು ನಾವು ಬರಹೇಳ್ತಿದೀವಿ ಅಂತ ಹೇಳಿ ಮುಖಂಡರನ್ನು ಕರೆತನ್ನಿ ಎಂದರು. ಇನ್ನಾರಾದರೂ ಕರೆಕಳಿಸಿದ್ದರೆ ಬರುವುದು ಸಾಧ್ಯವಿತ್ತೇ ? 'ಮೈಸೂರು ರಾಜರಿಂದ ಪೂಜಿತರಾದ, ಸನ್ಮಾನಿತರಾದ ಮಹಾನ್ ಗುರುಗಳವರು ಕರೆಕಳಿಸಿದಾರೆ ! ನಾನಾಗಲೇ ಹೋಗಿ ದರ್ಶನ ಮಾಡಿಕೋಬೇಕಾಗಿತ್ತು. ಈಗ ಅವರೇ ಕರೆಸಿದ್ದಾರೆ. ಹೋಗದೇ ಇದ್ದರೆ ದೇವರು ಮೆಚ್ಚು ವುದಿಲ್ಲ...'– ಎಂದು ಅಂದುಕೊಳ್ಳುತ್ತ, ನಾನಾಗಿಯೇ ಹೋಗಲಿಲ್ಲವಲ್ಲಾ ಎಂದು ಅಂಜುತ್ತ, ಹಿಂಜರಿಯುತ್ತ, ಅಳುಕುತ್ತಾ, ಮುಖಂಡರು ಒಬ್ಬೊಬ್ಬರಾಗಿ ಬಂದರು. 'ಏನೋ ನಡೆಯಲಿದೆ' – ಎಂದು ಗ್ರಹಿಸಿದ, ಊಹಿಸಿದ, ನಿರೀಕ್ಷಿಸಿದ ಒಂದಿಬ್ಬರು ಅಜ್ಜಮ್ಮಂದಿರು ಟೊಂಕದ ಮೇಲೆ ಕೈ ಊರಿಕೊಂಡು ನಿಧಾನವಾಗಿ ಬಂದು ಸೇರಿಕೊಂಡರು. 'ಅಲ್ಲಿ ಏನಾಗುತ್ತೋ? ಎಂತೋ ? ಎಲ್ಲಿ ಇವ್ರು ಕಾದಾಡಿ ಕಡಿದಾಡ್ತರೋ ಏನು ಕಥೆಯೋ ?' – ಎಂದು ಭಯಭೀತರಾಗಿ ಎರಡೂ ಗುಂಪಿನ ಗೃಹಿಣಿಯರು ಹಲವರು ಸದ್ದಿಲ್ಲದೆ ಬಂದು ಗುಂಪಿನಲ್ಲಿ ಸೇರಿಕೊಂಡರು. ಕುತೂಹಲಗ್ರಸ್ತರಾದ ತರುಣ ತರುಣಿಯರು ಆತಂಕದಿಂದ ಒಬ್ಬೊಬ್ಬರಾಗಿ ಬಂದು ತಮ್ಮ ತಮ್ಮ ನಾಯಕರ ಬೆಂಬಳಿಯಲ್ಲಿ ನಿಂತರು !

ಜಗದ್ಗುರುಗಳವರು ಮೌನವನ್ನು ಮುರಿದರು –

"ಪಾಂಡವರು – ಕೌರವರು ಯಾರು ಹೇಳಿ ?"

– ಮುಖಂಡರು ಮಿಕಿ ಮಿಕಿ ನೋಡಿದರು.

"ಅವರಿಬ್ಬರೂ ಅಣ್ಣತಮ್ಮಂದಿರಲ್ಲವೇ ?"

"......."

–ಹೌದು ಎನ್ನುವಂತೆ ಒಂದಿಬ್ಬರು ತಲೆಯಾಡಿಸಿದರು.

"ಅವರು ಕಾದಾಡಿದ್ದು ಯಾಕೆ ?"

"ಭೂಮಿಗಾಗಿ ಬುದ್ದೀ"

–ಎಂದರು ವೃದ್ಧರೊಬ್ಬರು.

"ರಾಮ - ರಾವಣರು ಯುದ್ಧ ಮಾಡಿದ್ದು ಯಾಕೆ ?"

"ಸೀತಮ್ಮನಿಗಾಗಿ"

–ಎಂದರು ಒಬ್ಬ ಅಜ್ಜಿ !

"ರಾಜ ರಾಜರುಗಳು ಯುದ್ಧ ಮಾಡೋದು ಯಾಕೆ ?"

" ....... "

"ರಾಜ್ಯಕ್ಕಾಗಿ, ಐಶ್ವರ್ಯಕ್ಕಾಗಿ, ಸಂಪತ್ತಿಗಾಗಿ, ಅಲ್ವೇ ?"

"ಊಂ ಬುದ್ದೀ....."

"ಅವರೆಲ್ಲ ಏನಾದ್ರು ? ಸುಖಪಟ್ಟರೆ ? ಅಂತೂ ಇಂತೂ ಕುಂತೀ ಮಕ್ಕಳಿಗೆ ರಾಜ್ಯ ಇಲ್ಲ ಅಂತ ಜನ ಆಡಿಕೊಳ್ಳುವಂತಾಯ್ತು. ಸೀತೆ ಅಗ್ನಿಪರೀಕ್ಷೆಗೊಂಡಾಗ ಭೂಮಿತಾಯಿಯ ಮಡಿಲಿಗೆ ಸೇರಿಕೊಂಡುಬಿಟ್ಟಳು. ನಾನು ರಾಜಾಧಿರಾಜ, ನಾನು ಚಕ್ರವರ್ತಿ, ನಾನು ಸಾಮ್ರಾಟ ಎಂದವರೆಲ್ಲಾ ಏನಾಗಿಹೋದರು ? ಮಣ್ಣುಮುಕ್ಕಿದರು....ಮಣ್ಣಾಗಿ ಹೋದರು – ಈ ದ್ವೇಷದಲ್ಲಿ. ಹೆಣ್ಣಿಗಾಗಿ, ಮಣ್ಣಿಗಾಗಿ, ಹೊನ್ನಿಗಾಗಿ, ಹೊಡೆದಾಡಿದವರನ್ನು ಜನ ನೆನಪು ಮಾಡಿಕೊಂಡು ಸಂತೋಷಪಡ್ತಾ ಇದಾರೋ ?"

"......"

"ಜನ ಯಾರನ್ನ ನೆನಸ್ಕೋತಾರೆ, ಯಾರನ್ನ ಪೂಜಿಸ್ತಾರೆ ?"

"ಮಾತ್ಮರನ್ನ ಬುದ್ದೀ...."

–ಎಂದ ಒಬ್ಬ ವೃದ್ಧ.

"ಮಹಾತ್ಮರನ್ನ ನೆನಸಿಕೊಂಡು ಪೂಜೆ ಮಾಡಿದರೆ ಆಯ್ತೇ ? ಅಷ್ಟೇ ಸಾಕೇ ? ..... 'ಹೆಣ್ಣು ಹೊನ್ನು ಮಣ್ಣು ಮಾಯೆ ಎಂಬರು. ಹೆಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ, ಮಣ್ಣು ಮಾಯೆಯಲ್ಲ. ಮನದ ಮುಂದಣ ಆಸೆಯೇ ಮಾಯೆ!' – ಎಂದರು ಅಲ್ಲಮಪ್ರಭು ಗಳು. ಎರಡು ಸಾವಿರ ವರ್ಷಗಳ ಹಿಂದೆ ಇದ್ದ ಬುದ್ಧ ಭಗವಾನ್ 'ಆಸೆಯೇ ದುಃಖಕ್ಕೆ ಮೂಲ'– ಎಂದು ಬೋಧಿಸಿದ. 'ಕೊಲ್ಲದಿರುವುದೇ ಧರ್ಮ' ಎಂದು 'ಅಹಿಂಸೆಯೇ ಪರಮ ಧರ್ಮ' – ಅಂತ ಮಹಾವೀರ ಬೋಧಿಸಿಲ್ಲವೇ ?"

"........"

"ಇವರನ್ನು ಆಗಾಗ ನೆನಸಿಕೊಂಡು, ಜಯಂತಿ ಮಾಡಿದರಷ್ಟೇ ಸಾಕೇ? ಅಥವಾ ಅವರು ಬೋಧನೆ ಮಾಡಿದಂತೆ ಬದುಕಿ, ಬಸವಣ್ಣನವರು ಹೇಳಿದಂತೆ 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ' –ಅಂದರೆ, ಇಲ್ಲಿ ಎಲ್ಲರಿಗೂ ಬೇಕಾದವರಾಗಿ, ಒಳ್ಳೆಯವರಾಗಿ ಬಾಳಿ ಬದುಕಿದರೆ, ಅಲ್ಲಿಯೂ ಅಂದರೆ ಕೈಲಾಸದಲ್ಲಿಯೂ ಸಲ್ಲುತ್ತಾರೆ, ಶಿವನು ಮೆಚ್ಚುತ್ತಾನೆ – ಹೌದೋ ಅಲ್ಲವೋ ?...."

"ನಿಜ, ನಿಜ ಬುದ್ದೀ"

– ನಾಲ್ಕಾರು ಕಂಠಗಳು.

"ಅಂದಮೇಲೆ ಜಾತಿ-ಪಂಗಡ ಅಂತ ಸಿಡಿದು ಹೋಗಿ, ಕಾದಾಡಿ ಸಾಧಿಸೋದಾದರೂ ಏನು? ಹೋಗುವಾಗ ಹೊತ್ತುಕೊಂಡು ಹೋಗೋದಾದ್ರೂ ಏನು ? 'ಸರ್ವೇ ಜನಾಃ ಸುಖಿನೋ ಭವಂತು' – ಎಂದು ಮಹಾಋಷಿಗಳು ಸಾವಿರಾರು ವರ್ಷಗಳ ಹಿಂದೆಯೇ ಹೇಳಿದ್ದಾರೆ. 'ಸರ್ವ ಜನರೂ ಸುಖವಾಗಿರಲಿ' – ಎಂದು ಬೋಧಿಸಿದ್ದಾರೆ ! ಅಂದಮೇಲೆ ಇಂಥ ಮಹಾತ್ಮರ ನಾಡಿನಲ್ಲಿ ಹುಟ್ಟಿದ ನಾವು ನೀವೆಲ್ಲಾ ಹೇಗಿರಬೇಕು ? ...."

"ಅಯ್ ಬುದ್ಯೋರ ! ನಾವು ಹೆಮ್ಮಕ್ಳಿಗೆ ಇದೆಲ್ಲಾ ಬೇಡವಾಗೈತೆ. ನಾವು ನಾವು ಅಕ್ಕ-ತಂಗಿಯರಂಗೆ ಇರೋಕೆ ನಮ್ಮನೇವ್ರು ಬಿಡ್ತಾ ಇಲ್ಲ. ನಮ್ ತಪ್ಪೇನೂ ಇಲ್ಲ ಬುದ್ಧೀ...."

– ಧೈರ್ಯವಹಿಸಿ, ಇದುವರೆಗೂ ಗಂಡನ ದಬ್ಬಾಳಿಕೆ ಸಹಿಸಿ ರೋಸಿದ ಒಬ್ಬ ಗೃಹಿಣಿ ಗುಂಪಿನಿಂದ ಹೇಳಿಯೇಬಿಟ್ಟಳು.

"ಹೌದ್ರಾ.... ಬುದ್ಧೀ...... ನಮ್ ಹೈಕ್ಳೂ, ಅವ್ರ ಹೈಕ್ಳೂ ಒಟ್ಟಾಗಿ ಆಡೋಕೇ ನಮ್ಮ ಗಂಡುಸ್ರು ಬಿಡಂಗಿಲ್ಲ ಬುದ್ಯೋರಾ...."

– ಮತ್ತೊಬ್ಬ ಗೃಹಿಣಿ.

ಪಡ್ಡೆ ಹುಡುಗರು ಯಾರೋ ಒಬ್ಬರು ಸಿಳ್ಳೆ ಹಾಕಿದರು. ನಾಲ್ಕಾರು ಸಿಳ್ಳೆಗಳು ಹೊಮ್ಮಿದುವು.....

ಮೀಸೆ ಹೊತ್ತ, ಮೀಸೆ ಬಿಟ್ಟ, ಪುರುಷಪುಂಗವರು–ಮುಖಂಡರು ತಲೆತಗ್ಗಿಸಿ ಬೆವೆತ ಮುಖಗಳ ಮೇಲೆ ಉತ್ತರೀಯವನ್ನು ಸರಿದಾಡಿಸಿಕೊಂಡರು.

ದಟ್ಟ ಮೌನ ವ್ಯಾಪಿಸಿತು.

"ಸರಿ ಹಾಗಾದರೆ ನಿಮ್ಮಿಷ್ಟ. ನೀವು ಹೀಗೇ ಇರ್ತೀವಿ ಅಂದರೆ ನಮ್ಮದೇನೂ ಅಭ್ಯಂತರ ವಿಲ್ಲ. ಆದರೆ ನಾವು ಇಲ್ಲಿಯೇ ಉಪವಾಸಮಾಡಿ, ಇಲ್ಲಿಂದಲೇ ಸುತ್ತೂರಿಗೆ ಹೊರಟು ಬಿಡ್ತೀವಿ. ಮಹಾಶರಣೆ ಅಕ್ಕಮಹಾದೇವಿ ಹೇಳಿದ್ದಾಳೆ –

"ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯಾ ನೀನು !
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯಾ ನೀನು !
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯಾ ನೀನು
ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯಾ ನೀನು
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯಾ ನೀನು
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯಾ ನೀನು
ಹೃದಯ ಕಮಲವರಳದವರಲ್ಲಿ ಇರಲೊಲ್ಲೆಯಯ್ಯಾ ನೀನು
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ
ಚೆನ್ನಮಲ್ಲಿಕಾರ್ಜುನಾ?"

–ಎಂದು ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಹೇಳು ಹೇಳುತ್ತಿರುವಂತೆಯೇ –ಮುಖಂಡರ ಮುಖಗಳಲ್ಲಿ ಮಹತ್ತರ ಬದಲಾವಣೆಗಳಾಗು ತ್ತಿರುವುದರ ಸೂಚನೆಯನ್ನು ಸೂಕ್ಷ್ಮವಾಗಿ ಗಮನಿಸಿದ ಕಾಗಲ್ವಾಡಿ ಶ್ರೀ ಶಿವರುದ್ರಸ್ವಾಮಿ ಗಳವರು ಸ್ಫೂರ್ತಿಯುತರಾಗಿ, ತಟ್ಟನೆ ಎದ್ದು ನಿಂತು –ಗುಡುಗಿನ ಧ್ವನಿಯಿಂದ ಗಂಭೀರವಾಗಿ ಅಕ್ಕನ ವಚನವನ್ನು ಬಿಡಿಬಿಡಿಸಿ ವಿವರಿಸಿದರು.

ಎಂದೂ ಸಭೆಗಳಲ್ಲಿ ಎದ್ದು ನಿಂತು ಮಾತನಾಡಿದವರೇ ಅಲ್ಲ ಶ್ರೀ ಶಿವಪ್ರಭುಸ್ವಾಮಿ ಗಳವರು! ಅಂಥವರು ಆವೇಶಗೊಂಡವರ ಹಾಗೆ ಧಿಗ್ಗನೆ ಎದ್ದು ನಿಂತು, ಗ್ರಾಮ್ಯ ಭಾಷೆಯಲ್ಲಿ ಘಟ್ಟಿಸಿ ಘಟ್ಟಿಸಿ ವಚನ ವ್ಯಾಖ್ಯಾನ ಮಾಡಿಬಿಟ್ಟರು !

ಗುಡುಗು - ಅಬ್ಬರದ ಮಳೆಗಳಲ್ಲಿ ತೊಯ್ದು ಹೋದರು, ಕರಗಿಹೋದರು ಮುಖಂಡರು!

ಮುಖಂಡರೆಲ್ಲ ಒಮ್ಮೆಗೇ ಒಟ್ಟಾಗಿ, ಒಂದೇ ಹಗ್ಗದಲ್ಲಿ ಕಟ್ಟಲ್ಪಟ್ಟವರಂತೆ, ನುಗ್ಗಿ ಬಂದು, ಸಾಗರ ಬಿದ್ದು ಬಂದು ಪೂಜ್ಯರ ಪಾದಗಳ ಮುಂದೆ ಮುಖ ಅಡಿಯಾಗಿ ಸಾಷ್ಟಾಂಗ ಬಿದ್ದು, ಪಶ್ಚಾತ್ತಾಪದ, ಸಂತಸದ, ಸಂಭ್ರಮದ, ದೃಢ ನಿರ್ಧಾರದ ಕಣ್ಣೀರ ಧಾರೆಯನ್ನು ಹರಿಸುತ್ತ –

"ಭೋ ತಪ್ಪಾಯ್ತು ಬುದ್ದೀ, ನಾವು ಹಳ್ಳಿ ಗಮಾರರು, ಏನೂ ಅರಿಯದ ಮುಕ್ಕರು. ನಮ್ ತೆಪ್ಪನ್ನು ಹೊಟ್ಟೆಗಾಕ್ಕೊಳ್ಳಿ ಬುದ್ದೀ. ನಮ್ಮನ್ನು ಕ್ಷಮಿಸೋಗಂಟ ನಿಮ್ ಪಾದ ಬಿಡೋಂಗಿಲ್ಲ...."

– ಎಂದುದನ್ನು ಕೇಳಿ, ಆನಂದಾಶ್ರುಗಳನ್ನು ಶ್ರೀಗಳವರು ಅವರ ಶಿರಸ್ಸುಗಳ ಮೇಲೆ ಆಶೀರ್ವಾದದ ರೂಪದಲ್ಲಿ ಸುರಿಸಿ, ಸಂತೋಷಾಧಿಕ್ಯದಿಂದ ಗದ್ಗದಿತರಾಗಿ –

"ಇದೀಗ ಶಿವ ಮೆಚ್ಚುವ ಮಾತು. ಏಳಿ ಏಳಿ ! ಇನ್ಮೇಲಿಂದ ನೀವೆಲ್ಲ ಅಣ್ಣ ತಮ್ಮಂದಿರಂತೆ ಬಾಳಿ ಬದುಕಿ.... ಅಗೋ ನಿಮ್ಮೂರಿನ ಹಿರಿಯರಾದ ಅಜ್ಜಅಜ್ಜಮ್ಮಂದಿರಿಗೆ

ನಮಸ್ಕರಿಸಿ"—ಎಂದು ನುಡಿಯುತ್ತಿರುವಂತೆಯೇ ಅವರೆಲ್ಲ ಗ್ರಾಮ ವೃದ್ಧ ಮಾತಾಪಿತರ ಪಾದಾಭಿವಂದನೆ ಮಾಡಿದರು.

ಗುಂಪಿನ ಮಧ್ಯದಲ್ಲಿ, ಮರೆಯಲ್ಲಿದ್ದುಕೊಂಡು ಇವರ ಬಗ್ಗೆ ಟೀಕಾಸ್ತ್ರಗಳನ್ನೆಸೆದ ಆ ಗೃಹಿಣಿಯರು ಆನಂದದ ಕಣ್ಣೀರು ತಮ್ಮ ಕೆನ್ನೆ-ಗಲ್ಲಗಳನ್ನು ತೋಯಿಸುತ್ತಿರಲು, ಮುಂದೆ ಬಂದು ತಮ್ಮ ಗಂಡಂದಿರ ಕಾಲಿಗೆ ಬಿದ್ದರು !

"ಇರ್ಲಿ ಏಳಮ್ಮೀ......ನೀನೊಳ್ಳೇ ಕೆಲಸ ಮಾಡ್ದೆ. ಅವೊತ್ತೇ ನೀ ಏಳ್ದಂಗೆ ನಾನು ಕೇಳ್ಬೇಕಿತ್ತು"......ಎಂದು ನಕ್ಕು ನುಡಿದು, ಅದುವರೆಗಿನ ತನ್ನ ಕಡುವೈರಿಯಾಗಿದ್ದ ಇನ್ನೊಂದು ಗುಂಪಿನ ಮುಖದ ಕಡೆಗೆ ಮುಖ ಮಾಡಿ —

"ಅಲ್ಲವೇನ್ಲಾ ಮರಿಯಾ ?" —ಎಂದ.

"ಹೌದು ಕಲ್ಲಾ ..... ನಾನೂ ಅಷ್ಟೇಯಾ ?"

—ಎಂದು ಅವನು ಓಡಿಬಂದು, ಇಬ್ಬರೂ ತಬ್ಬಿಕೊಂಡರು !

"ಅಯ್ ಹಿಂಗೇ ಕಾಲಕಳೆದು, ಬುದ್ಯೋರನ್ನು ಉಪಾಸ ಕೆಡವುತೀರೋ ಹೆಂಗೆ ? ನಡೀತಮ್ಮಾ, ಜಟ್‌ನೆ, ಚಿಟಿಕೆ ಹಾಕೋಷ್ಟರಲ್ಲಿ ಒಬ್ಬಟ್ಟು ಪಾಯಸ ಮಾಡೋಣ ಬನ್ರೇ...." — ಎಂದು ಹೆಂಗಸರು ಸರಸರ ಊರಿನತ್ತ ಹೊರಟರು.

ಚಿಳ್ಳೆಪಿಳ್ಳೆಗಳು ಕುಣಿದು ಕುಪ್ಪಳಿಸಿ ಕೇಕೆ ಹಾಕಿದುವು.

ಎಲ್ಲ ಶ್ರೀಗಳವರ ಜಳಕಕ್ಕೆ ಅಣಿಗೊಳಿಸಲಾಯಿತು.

ಪೂಜಾಮಗ್ನರಾದರು.... ಮನದಣಿಯೆ ಪೂಜೆಗೈದರು.

ಅದ್ಯಾವ ಮಾಯೆಯಲ್ಲೋ ಸಂಜೆ ಎಲ್ಲ ಶ್ರೀಗಳವರನ್ನು ನಡೆಮಡಿ ಹಾಸಿ, ಉತ್ಸವದ ಮೂಲಕ ಊರೊಳಗೆ ಬಿಜಯಂಗೈಸಲು, ಪ್ರತಿ ಮನೆಯ ಮುಂದೆ ಅಂಗಳಗಳಲ್ಲಿ ರಂಗೋಲಿ, ಹೊಸಿಲಲ್ಲಿ ಹಣತೆಗಳು, ಇಡೀ ಗ್ರಾಮ ಅಭ್ಯಂಜನ ಸ್ನಾನ ಮಾಡಿದಂತೆ ಶುಭ್ರ ನಿರ್ಮಲ ! ಆಬಾಲವೃದ್ಧರಾದಿಯಾಗಿ ಎಲ್ಲರೂ ಟ್ರಂಕುಗಳಡಿಯಿಂದ, ಪೆಟಾರಿಗಳ ತಳದಿಂದ, ಜಾಯಿಕಾಯಿ ಪೆಟ್ಟಿಗೆಗಳ ಬುಡದಿಂದ ಪಟ್ಟೆ-ಪೀತಾಂಬರ, ರೇಷ್ಮೆ ವಸ್ತ್ರಗಳನ್ನು ಹೊರತೆಗೆದು ಧರಿಸಿ ಸಡಗರದಿಂದ ಓಡಾಡುತ್ತಿದ್ದಾರೆ !

ವಾದ್ಯಗಳು ಹೊರಬಂದು ರಾತ್ರಿಯಿಡೀ ನಿನದಿಸಿದುವು.

ಸಾಮೂಹಿಕ ಭಜನೆ ಬೆಳ್ಳಂಬೆಳಗಿನ ತನಕ ಅನುರಣನಗೈದಿತು !

* * *

ಮರುದಿನ ಹತ್ತಿರದ ಹಾಸನೂರನು ಸೇರಿ, ಅಲ್ಲಿ ಭಕ್ತರೊಬ್ಬರ ಮನೆಯಲ್ಲಿ ಶಿವಪೂಜೆ ಮುಗಿಸಿದ ನಂತರ —

"ಈಗ ದೊಡ್ಡ ಸಂಪಿಗೆಯತ್ತ ಹೊರಡೋಣ, ಅಲ್ಲಿ ಮನತಣಿವ ತನಕ ಲಿಂಗಪೂಜೆ ಮಾಡೋಣ—ಎಂಬ ಅಪೇಕ್ಷೆ ಬಹಳ ದಿನಗಳಿಂದ ಇದೆ."

– ಎಂದು ನವೋತ್ಸಾಹದಿಂದ ಘೋಷಿಸಿದರು ಜಗದ್ಗುರುಗಳವರು !

ಹಾಸನೂರವರು ಹೌಹಾರಿದರು !

'ಬೇಡ' ಎನ್ನಲು ಬಾಯಿಬರಲಿಲ್ಲ. ಎಲ್ಲಿ ಅಪಶಕುನ ಇದು — ಎಂದಂದುಕೊಳ್ಳುತ್ತಾರೋ ಎಂದು ಬಾಯಿಬಿಡದೇ ಹೋದರೂ ಒಳಗೊಳಗೇ ಭೀತಿ, ತಲ್ಲಣ.

ಅದು ಹೇಗೋ ಈ ವಿಷಯ ಕೂಗಳತೆಯ ದೂರದಲ್ಲಿರುವ, ಹಿಂದಿನ ಊರು ಅದೇ ಗೇರುಮಾಳಕ್ಕೆ ತಲುಪಿತು !

ಅಲ್ಲಿನ ಗಟ್ಟಿ ಎದೆಗಾರರೂ ಭಯಭ್ರಾಂತರಾದರು !

ಏನೇ ಆಗಲಿ ನಾವೂ ಜೊತೆಗಿರೋಣ, ಬೆಂಗಾವಲಿಗೆ ! —ಎಂದು ಚಿಕ್ಕಣ್ಣಪ್ಪ, ಕೆಂಪೇಗೌಡ, ಮಾದೇಗೌಡ —ಈ ಮೂರು ಜನ ಧಾವಿಸಿ ಬಂದು —

'ವಿಷಯ ತಿಳೀತು ಬುದ್ದೀ..... ನಾವೂ ಬರ್‍ತೀವಿ'

—ಎಂದು ಸಿದ್ಧರಾದರು.

ಹಾಸನೂರಿನವರ ಮಾತಿಲ್ಲದ ಹಾವಭಾವ, ಕಣ್ಣುಗಳಲ್ಲಿ ಏನೋ ಎಂತೋ ಎಂಬ ಭೀತಿಯ ಕಳೆ, ಇದೀಗ ಕಟ್ಟಾಳುಗಳಾದ ಈ ಮೂವರೂ ಗೇರುಮಾಳದಿಂದ ಬಂದುದೂ - ಇದನ್ನೆಲ್ಲ ಗಮನಿಸಿದ ಶ್ರೀ ಶಿವಪ್ರಭುಸ್ವಾಮಿಗಳವರಿಗೆ ಏನೋ ಆಶಂಕೆ, ಆತಂಕ ಮೂಡಿತು. ಅವರೂ ಕಟ್ಟಾಳುಗಳೇ. ಮಹಾ ಧೈರ್ಯಶಾಲಿಗಳೇ.

'ಅದೇನಾದ್ದು, ನೋಡಿಯೇ ಬಿಡೋಣ. ಎಲ್ಲದಕ್ಕೂ ಶಿವರಾತ್ರೀಶನಿದ್ದಾನೆ!'—ಎಂದು ಒಳಗೊಳಗೇ ಸಮಾಧಾನ ಮಾಡಿಕೊಂಡರು !

ಬಿಳಿಗಿರಿರಂಗನ ಗಗನಚುಂಬಿ ಪರ್ವತಗಳ ಸಾಲುಸಾಲು ...

ಕಾರು ಮುಲುಕುತ್ತ, ತೇಕುತ್ತ, ಸಾಗುತ್ತಿದೆ.

ಸ್ವಲ್ಪ ದೂರದಲ್ಲಿ ವೃಕ್ಷರಾಜಿಯ ಮಧ್ಯೆ ಕಂಡೂಕಾಣದಂತೆ ಬಂಗಲೆ ಕಾಣಿಸುತ್ತಲೇ, ಶ್ರೀಗಳವರು ಕಾರಿನ ಚಾಲಕನಿಗೆ ಹೇಳಿದರು—

"ಆ ಬಂಗ್ಲೆಗೆ ಹೋಗಿ, ಹತ್ತಿರದ ದಾರಿ ದೊಡ್ಡಸಂಪಿಗೆಗೆ ತಿಳಿದುಕೊಂಡು ಬಾ"

—ಎಂದರು.

ಚಾಲಕನು ಹಿಂತಿರುಗಿ ಬಂದ -- ಜೊತೆಯಲ್ಲಿ ಆಂಗ್ಲ ದಂಪತಿಗಳು !

ಬಳಿಗೆ ಬಂದು, ಗ್ರಾಂಥಿಕ ಕನ್ನಡದಲ್ಲಿ —

"ನಿಮಗೆ ಎಲ್ಲರಿಗೂ ನನ್ನ ಸ್ವಾಗತವು. ದಯಮಾಡಿ ಎಲ್ಲರೂ ಬನ್ನಿರಿ, ನಮ್ಮ ಮನೆಗೆ."

"ದೊಡ್ಡಸಂಪಿಗೆಗೆ ಹೋಗಬೇಕೆಂದಿದ್ದೇವೆ. ಹತ್ತಿರದ ದಾರಿ ದಯವಿಟ್ಟು ತಿಳಿಸಿ."

"ಅದು ಈಗ ಹೋಗುವುದು ಬೇಡ. ರಾತ್ರಿ ಆಗುತ್ತಿದೆ. ಅಡವಿ ಬಹಳ ಭಯಂಕರ ಆಗಿದೆ."

"ದೇವರಿದ್ದಾನೆ."

"ಓ ಗಾಡ್ ! ದೇವರು ಇದ್ದಾನೆ ! ಕ್ರೂಯಲ್.... ಕ್ರೂರ.... ಕ್ರೂರ ಜಂತುಗಳು – ಟೈಗರ್ – ಟೈಗರ್ – ಹುಲಿಗಳು, ದೊಡ್ಡ ದೊಡ್ಡ ಎಲಿಫೆಂಟ್ಸ್.... ದಯವಿಟ್ಟು ನೀವು ಹೋಗುವುದು ಬೇಡ. ಈ ರಾತ್ರಿ ನೀವು ಎಲ್ಲರೂ ನಮ್ಮ ಗೆಸ್ಟ್ ಆಗಿ. ಅರ್ಲಿಮಾರ್ನಿಂಗ್ ಹೋಗಬಹುದು...."

"ಪ್ಲೀಜ್ ಕಮ್ ಸನ್ಯಾಸಿಗಲೇ !" (ಅವರ ಭಾಷೆಯಲ್ಲಿ "ಳ"ಕಾರವಿಲ್ಲವಲ್ಲ!)

– ಎಂದು ತಡವರಿಸುತ್ತ ಆಂಗ್ಲ ಮಹಿಳೆ ವಿನಂತಿಸಿದಳು.

"ನಾಳೆ ಹಿಂತಿರುಗಿ ಬರುವಾಗ ಖಂಡಿತ ನಿಮ್ಮ ಬಂಗ್ಲೆಗೆ ಬರ್ತೇವೆ."

"ಹೋ ! ಐಸೀ !"

"ಸೂಸಾನ್, ಗೋ ಅಂಡ್ ಗೆಟ್ ದ ಪೆಟ್ರೋಮ್ಯಾಕ್ಸ್."

—ಎಂದ ಆಕೆಯ ಪತಿ.

ಚಾಲಕನನ್ನು ಹಿಂದಿಟ್ಟುಕೊಂಡು, ಪೆಟ್ರೋಮ್ಯಾಕ್ಸ್ ಜೊತೆಗೆ ಹಿಂತಿರುಗಿ ಬಂದರು.

"ತುಂಬಾ ಥ್ಯಾಂಕ್ಸ್, ಜಂಟಲ್‌ಮನ್ ಅಂಡೇ ಲೇಡಿ"

—ಎಂದರು ಕಾಗಲ್ವಾಡಿ ಶ್ರೀ ಶಿವರುದ್ರಸ್ವಾಮಿಗಳು !

ಆ ದಂಪತಿಗಳು ನಿರ್ಮಲ ನಗೆ ನಕ್ಕು—

"ಗಾಡ್ ಬಿ ವಿದ್‌ಯೂ"

—ಎಂದು ಬೀಳ್ಕೊಂಡರು ! — ಹತ್ತಿರದ ಮಾರ್ಗ ನಿರ್ದೇಶಿಸಿ.

ಕಾರು ಚಲಿಸಿ ಅಷ್ಟು ದೂರ ಹೋಗುತ್ತಲೆ —ಆ ದಂಪತಿಗಳು —ತಮ್ಮ ಎದೆಯ ಮೇಲೆ ಶಿಲುಬೆಯನ್ನು ಕೈಗಳಿಂದ ರಚಿಸಿ, ಎಲ್ಲರ ಕ್ಷೇಮಕ್ಕೆ ಪ್ರಾರ್ಥಿಸಿಕೊಂಡರು !

ಗೊಂಡಾರಣ್ಯದ ಅಂತರಾಳದಲ್ಲೆಲ್ಲೋ ಸುದೂರದಲ್ಲಿ ಎಂಥೆಂಥವೋ ಶಬ್ದಗಳು.

ಮರಗಳಲ್ಲಿ ರೆಕ್ಕೆಗಳ ಪಟಪಟ ಸದ್ದು. ಮಂಗಗಳ ಹೂಂ ಹೂಂ ಹುವುಂ ಕೂಗುಗಳು!

ಅಲ್ಲೆಲ್ಲೋ ಗುರ್....ಗ್ರರ್....ಗ್ರರರ್....ಗರ್ಜನೆಯ ಮೊದಲ ಹಂತ....

ಜೀರುಂಡೆಗಳ ಮೇಳಗಾನ....ಗಾಳಿಯ ಹೊಯ್ದಾಟ...ದೂರ ದಿಗಂತದಲ್ಲಿ ಕಾಡೆಮ್ಮೆಗಳ ಹಿಂಡಿನಂಥ ಕಪ್ಪು ಮೋಡ ಕ್ಷಣಕ್ಷಣಕ್ಕೆ ಊದಿಕೊಳ್ಳುತ್ತ, ಉಬ್ಬುತ್ತಲಿದೆ.... ಬಂಡೆಯ ಮೇಲೆ ರುಬ್ಬುಗುಂಡು ಉರುಳಿಸಿದ ಹಾಗೆ ಗುಡುಗುಡು....

ಕಾರು ಕೆಮ್ಮುತ್ತ, ಬುಸುಗರೆಯುತ್ತ ಸಾಗಿಹೋಯಿತು.

ಅಗೋ ಎತ್ತರದ ದಿಬ್ಬದ ಮೇಲೆ ಮುಗಿಲೆತ್ತರಕ್ಕೆ ನಿಂತ ದೊಡ್ಡ ಸಂಪಿಗೆ !

ಪಕ್ಕದಲ್ಲೇ ಕಲ್ಲುಗುಂಡುಗಳಿಗೆ ಢಿಕ್ಕಿ ಹೊಡೆದು, ಲಚ್ ಲಚ್ ಸದ್ದುಗೈಯುತ್ತ ರಭಸವಾಗಿ ಹರಿಯುತ್ತಿರುವ ತೊರೆ....ಅಲ್ಲಲ್ಲಿ ವನಸುಮಗಳ ಪೊದೆಗಳು.....ಅಲ್ಲಲ್ಲಿ ನಾಲ್ಕಾರು ತಾವೇ ತಾವಾಗಿ ಬೆಳೆದ ಬಿಲ್ವ ವೃಕ್ಷಗಳು.

ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರಿಗೆ ಆ ಪ್ರಶಸ್ತ ವಾತಾವರಣ ನೋಡಿ ಆನಂದವೋ ಆನಂದವಾದರೆ, ಉಳಿದೆಲ್ಲರಿಗೆ ಆತಂಕವೋ ಆತಂಕ !

"ಸ್ನಾನ ಮಾಡಿ, ಪೂಜೆ ಮಾಡೋಣ. ನಾವು ದಿಬ್ಬದ ಮೇಲೆ, ದೊಡ್ಡಸಂಪಿಗೆಯಡಿಯಲ್ಲಿ ಪೂಜೆ ಮಾಡ್ತೀವಿ. ನೀವೂ ಪೂಜೆಗೆ ಪ್ರಶಸ್ತ ಸ್ಥಳ ಹುಡುಕಿಕೊಳ್ಳಿ. ಯಥೇಚ್ಛವಾಗಿ ಹೂಗಳು ಬಿಲ್ವಪತ್ರೆ ಇವೆ. ಭಗವಂತನ ಕೃಪೆ ಎಂದರೆ ಇದಲ್ಲವೇ ?"

– ಎಂದು ಮುಂಚೆ ತಾವೇ ತೊರೆಗಿಳಿದರು. ಎಲ್ಲರೂ ಹಿಂಬಾಲಿಸಿದರು. ತನುಗಳ ದಣಿವು ಹಾರಿಹೋಗುವ ತನಕ, ಮನಸ್ಸು ತಣಿಯುವ ತನಕ ರಾತ್ರಿಯ ಬೆಚ್ಚಗಿನ ತೊರೆಯ ನೀರಲ್ಲಿ ಮಿಂದು ಶುಚಿರ್ಭೂತರಾದರು.

ಸಾಕು ಸಾಕೆಂಬಷ್ಟು ಹೂಗಳು, ಬಿಲ್ವಪತ್ರೆಗಳನ್ನು ತಿರಿದು ಮಡಿ ವಸ್ತ್ರದ ಗಂಟುಕಟ್ಟಿ ತಂದು, ಶ್ರೀಗಳವರ ಪೂಜೆಗೆ ಅಣಿಮಾಡಿ, ಪೆಟ್ರೋಮ್ಯಾಕ್ಸ್ ಬೆಳಗಿಸಿಟ್ಟರು. ಕೆಳಗಿಳಿದು ಬಂದು, ತಮತಮಗೆ ಪ್ರಶಸ್ತವೆಂದು ತೋರಿದ ಸ್ಥಳಗಳಲ್ಲಿ ಲಿಂಗಪೂಜಾವಿಧಿಯಲ್ಲಿ ಮಗ್ನರಾದರು.....

ಇದ್ದಕ್ಕಿದ್ದಂತೆ –

ದಪ್ಪದಪ್ಪನೆಯ ಕವಡೆಗಳ ಗಾತ್ರದ ಮಳೆಹನಿಗಳು...

ಮಿಂಚಿನ ಬಳ್ಳಿಗಳು.....ಗುಡುಗುಗಳ ಆರ್ಭಟ .... ಗಾಳಿಯ ರಭಸ .....

ಶ್ರೀ ಶಿವಪ್ರಭುಸ್ವಾಮಿಗಳವರಿಗೆ ಪೂಜೆಯಲ್ಲಿ ಮನ ಸಂಲಗ್ನಗೊಳ್ಳುತ್ತಿಲ್ಲ. ನಾಭಿಯಿಂದ ಭಯ ತರಂಗ ತರಂಗವಾಗಿ ಮೇಲೇರಿ, ಇಡೀ ದೇಹವನ್ನು ತಲ್ಲಣಿಸಿ, ಥರಗುಟ್ಟಿಸಿತು. ಮನಸ್ಸು ಅಲ್ಲಕಲ್ಲೋಲ.... ಹೃದಯ ನಗಾರಿ ಬಾರಿಸುತ್ತಿದೆ.....

ಅಲ್ಲಿ ಎಂತೋ ಏನೋ....!

ಅವರು ಒಬ್ಬರೇ! ಸದ್ದಿಲ್ಲ, ಸಪ್ಪಳವಿಲ್ಲ.....

ಮಳೆ ಮುಸಲಧಾರೆಯಾಯಿತು....

ಎಲ್ಲರೂ ತೊಯ್ದು ಮುದ್ದೆಯಾದರೂ. ಲಿಂಗಪೂಜೆ ಮುಗಿವತನಕ ಮೇಲೇಳಲಿಲ್ಲ ! "ಶಿವನೇ ನಮ್ಮ ಅಂಗೈ ಮೇಲಣ ತನಗೆ ತಾನೇ ಅಭಿಷೇಕ ಮಾಡಿಕೊಳ್ಳುತ್ತಿದ್ದಾನೆ. ಮಿಂಚಿನ

ದೀಪದ ಕುಡಿಗಳನ್ನು ಚಾಚಿ ಚಾಚಿ ಬೆಳಗಿಸಿಕೊಳ್ಳುತ್ತಿದ್ದಾನೆ.... ಗುಡುಗಿನ ಮದ್ದಳೆಯನ್ನು ನುಡಿಸಿಕೊಳ್ಳುತ್ತಿದ್ದಾನೆ. ವರ್ಷಧಾರೆಗೆ ಮರದ ಎಲೆಗಳ ಮರ್ಮರ ಧ್ವನಿಯಿಂದ ಮಂತ್ರ ಘೋಷ ಮಾಡಿಸುತ್ತಿದ್ದಾನೆ.... ನಾವೇ ಧನ್ಯರು. ನಾವೇ ಭಾಗ್ಯಶಾಲಿಗಳು" – ಎಂದರು ಕಾಗಲ್ವಾಡಿ ಶ್ರೀ ಶಿವರುದ್ರಸ್ವಾಮಿಗಳು –ಪೂಜಾವಿಧಿ ಮುಗಿಯುತ್ತಲೆ !

ಶ್ರೀಗಳವರತ್ತ ಆತುರ-ಕಾತರ, ಕಳವಳಗಳಿಂದ ಧಾವಿಸಿ ಹೋದರು !

ಎಷ್ಟೋ ಜನರ ಅನುಭವಕ್ಕೆ ಬಂದಿರಬಹುದು –ತಮ್ಮ ಎದುರುಗಡೆ ಮಳೆ ಬೀಳುತ್ತಿರುತ್ತದೆ. ತಮ್ಮ ಮೇಲೆ ಬೀಳುತ್ತಿಲ್ಲ ! –ಕಾರಣ ಮೋಡದ ವ್ಯಾಪ್ತಿ ಅಲ್ಲಿಗೆ ಕೊನೆಗೊಂಡಿದೆ. ಆದ್ದರಿಂದ ಅಲ್ಲಿ ಮಾತ್ರ ಮಳೆ. ಇಲ್ಲಿ ಇಲ್ಲ!

ಬಸ್ಸಿನಲ್ಲೋ, ಕಾರಿನಲ್ಲೋ, ಯಾವುದಾದರೂ ವಾಹನದಲ್ಲಿ ಪ್ರಯಾಣ ಮಾಡುತ್ತಿರುವಾಗ ಮಳೆಯಲ್ಲಿ ನೆನೆಯುತ್ತ ಹೋಗುತ್ತಿದ್ದವರಿಗೆ, ಸ್ವಲ್ಪ ದೂರ ಕ್ರಮಿಸುತ್ತಲೇ – ತಟ್ಟನೆ ತಮ್ಮ ಎದುರುಗಡೆ ತಾವು ಹೋಗಬೇಕಾದ ರಸ್ತೆ ಒಣಗಿ ಚಾಚಿಕೊಂಡಿರುವುದು ಕಾಣಿಸುತ್ತದೆ.

ಅಲ್ಲಿ ಶ್ರೀಗಳವರು ಕುಳಿತ ಕಡೆ ಒಂದಾದರೂ ಮಳೆಹನಿ ನೆಲ ಸೋಂಕಿಲ್ಲ. ಮಳೆಯೇ ಇಲ್ಲ. ಮಳೆಕರೆಯುತ್ತಿರುವ ಮೋಡ ಮುನ್ನುಗ್ಗಿ ಬರಲು ಬಿಡದೆ, ಎದುರುಗಡೆಯಿಂದ ಗಾಳಿ ರಭಸವಾಗಿ ಬೀಸಿ, ತಡೆದು ನಿಲ್ಲಿಸಿ, ಅತ್ತ ಮಳೆ ಸುರಿಸುವಂತೆ ಮಾಡಿದೆ !

ಶ್ರೀಗಳವರನ್ನು ನೋಡಿ ಸ್ತಂಭೀಭೂತರಾದರು ! –

ಶ್ರೀಗಳವರು ಅಂಗೈಮೇಲಣ ಲಿಂಗಕ್ಕೆ ಹೂ-ಬಿಲ್ವಪತ್ರೆಗಳನ್ನು ಮುಡಿಸಿದ್ದಾರೆ. ಪೂಜಾವಿಧಿ ಮುಗಿದಿದೆ. ಆದರೆ ಅವರದು ಅಖಂಡ ಪೂಜೆ, ಧ್ಯಾನಮುದ್ರೆ. ಲಿಂಗಾರ್ಚನೆಯ ಸಮಯದ ಕ್ರಿಯೆಗಳಾವುವೂ ಇಲ್ಲ, ಇದೀಗ ಧ್ಯಾನಸ್ಥ ಶ್ರೀಗಳು –ಒಂದು ಕಡೆದ ಶಿಲ್ಪದಂತೆ ಕಂಗೊಳಿಸುತ್ತಿದ್ದಾರೆ. ಅವರ ಕಾಯ ಕಾದ ಕೆಂಡದಂತೆ ಪ್ರಜ್ವಲಿಸುತ್ತಿದೆ! ನಖಶಿಖಾಂತ ಅಗ್ನಿತೇಜದಿಂದ ಬೆಳಗುತ್ತಿರುವ ಕಾಯ ! ಅವರ ಕಾಯದ ಹೊಳಪು ಜ್ವಲಿಸುತ್ತ, ಪ್ರಜ್ವಲಿಸುತ್ತ ಅವರ ಮುಖಮಂಡಲದ ಸುತ್ತ ಬೆಳಕಿನ ಪರಿಧಿಯೊಂದು ಆವರಿಸಿಕೊಂಡಿದೆ ! ಶ್ರೀಗಳವರು ಉಸಿರಾಡುತ್ತಿದ್ದಾರೆನ್ನುವುದಕ್ಕೆ ಸಾಕ್ಷಿ – ಅವರ ಎಡ ಅಂಗೈ ಮೇಲಣ ಲಿಂಗದ ಮೇಲೆ ಧರಿಸಿದ ಎಲ್ಲಕ್ಕಿಂತ ಮೇಲಿನ ಪುಷ್ಪವೊಂದರ ಪಕಳೆ ಉಸಿರಾಟಕ್ಕೆ ತಕ್ಕಂತೆ ಚಲಿಸುತ್ತಿದೆ.

ಅವರು ಕಡೆದ ಪ್ರತಿಮೆ.

ಇವರು ಚಿತ್ರದ ಬೊಂಬೆಗಳು.

ಎಷ್ಟೋ ಹೊತ್ತಾದ ಮೇಲೆ, ನಿಧಾನವಾಗಿ ಕಣ್ತೆರೆದರು !

ಇವರೆಲ್ಲರ ನಿಂತೇಹೋದಂತಿದ್ದ ಶ್ವಾಸ ಆಡತೊಡಗಿತು !....

## ಅಧರಕ್ಕೂ ಸಿಹಿ, ಉದರಕ್ಕೂ ಸಿಹಿಯಾದ ಮೃದುಮಧುರ ಮಾತು

೧೯೪೮ನೇ ಸಂವತ್ಸರ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಒಂದು ವರ್ಷ ಕಳೆದಿದೆ.

ಭಾರತದ ಏಳು ಲಕ್ಷ ಹಳ್ಳಿಗಳಲ್ಲಿ ಬಡತನ, ಅಜ್ಞಾನ, ದಾರಿದ್ರ್ಯಗಳು ರಿಂಗಣಗುಣಿಯುತ್ತಿದ್ದುವು.

ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳವರು ಏಳೆಂಟು ವರ್ಷಗಳಿಂದ ನಿತ್ಯಕಾಯಕವಾಗಿ ಹಳ್ಳಿಹಳ್ಳಿಗಳಿಗೆ ಸಂಚರಿಸಿ, ತಾವು ನಡೆಸುತ್ತಿರುವ ಉಚಿತ ವಿದ್ಯಾರ್ಥಿನಿಲಯಗಳಿಗೆ ದವಸಧಾನ್ಯ ಸಂಗ್ರಹಣೆ ನಡೆಸುತ್ತಿದ್ದರು. ಕೇವಲ ಅದೊಂದೇ ಗುರಿಯಾಗಿರಲಿಲ್ಲ. ತಾವು ಹೋದ ಹಳ್ಳಿಯ ಮುಖಂಡರನ್ನು, ವಯೋವೃದ್ಧರನ್ನು ಒಂದೆಡೆ ಸೇರಿಸಿ ವಿದ್ಯಾಪ್ರಸಾರದಿಂದ ಏನೆಲ್ಲ ಸತ್ಪರಿಣಾಮಗಳಾಗುತ್ತವೆ, ವಿದ್ಯಾವಂತರಾಗುವುದರಿಂದ ಏನು ಫಲ? – ಎಂಬುದನ್ನು ಮನದಟ್ಟುಮಾಡುತ್ತಿದ್ದರು. ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಹುರಿದುಂಬಿಸುತ್ತಿದ್ದರು. ಕೆಲವೊಮ್ಮೆ ಕೆಲವರ ವೈಯಕ್ತಿಕ ಸಮಸ್ಯೆಗಳಿಗೆ ಸರಳ–ಸೂಕ್ತ ಪರಿಹಾರಗಳನ್ನು ಸೂಚಿಸು ತ್ತಿದ್ದರು. ಧರ್ಮಾಚರಣೆ, ಸಾಮಾಜಿಕ–ನ್ಯಾಯ ನೀತಿಗಳ ಬಗ್ಗೆಯೂ ಸರಳವಾಗಿ ವಿವರಿಸುತ್ತಿ ದ್ದರು. ಅವರಲ್ಲಿ ಪೇರಿಕೊಂಡಿದ್ದ ಕಂದಾಚಾರವನ್ನು ಕಿತ್ತೊಗೆಯುವಂತೆ ಪ್ರೇರೇಪಿಸುತ್ತಿದ್ದರು. ಮೂಢ ನಂಬಿಕೆಗಳನ್ನು ಗುಡಿಸಿಹಾಕಲು ಒತ್ತಾಯಿಸುತ್ತಿದ್ದರು. ಮನಃ ಪರಿವರ್ತನೆ ಆನುಷಂಗಿಕ ವಾಗಿ ನಡೆಯುತ್ತಿತ್ತು....

ಒಮ್ಮೆ ಚಾಮರಾಜನಗರ ತಾಲ್ಲೂಕಿನ ಹೊನ್ನೂರಿಗೆ ದಯಮಾಡಿಸಿದರು.

ಆ ದಿನ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಧಾನ್ಯ ಸಂಗ್ರಹಣೆಯಾಯಿತು. ಮಧ್ಯಾಹ್ನ ಊರಿನ ಹಲವಾರು ಹಿರಿಯರು, ಮುಖಂಡರು, ವಯೋವೃದ್ಧರು ದರ್ಶನಾರ್ಥಿಗಳಾಗಿ ಬಂದರು. ಎಲ್ಲರ ಯೋಗಕ್ಷೇಮಗಳನ್ನು ಪ್ರಶಾಂತ ಮುಖಮಂಡಲದಲ್ಲಿ ಮನೋಹರ ಮಾಂತ್ರಿಕ ಮಂದಹಾಸದಿಂದ ವಿಚಾರಿಸುತ್ತಿರುವಾಗ, ಒಬ್ಬರು –

"ಬುದ್ದಿ ನಮ್ಮೂರಲ್ಲಿ ಒಂದು ದೆವ್ವದ ಮನೆ ಐತೆ. ಮನೆ ಅರಮನೆ ಇದ್ದಂಗೈತೆ. ಆದರೆ ಆ ದಯ್ಯದಿಂದಾಗಿ ಪಾಪ, ಮನೆಯವರು ಅಲ್ಲಿ ವಾಸಮಾಡೋಕ್ಕಾಗ್ತಾ ಇಲ್ಲ. ಭೋ ಪರದಾಡ್ತವರೆ...."

– ಎಂದರು.

ಶ್ರೀಗಳವರು ಒಂದು ನಿಮಿಷ ಗಂಭೀರ ಮುಖಭಾವದಿಂದ, ಕಣ್ಣು ಮುಚ್ಚಿಕೊಂಡು ಏನೋ ಧ್ಯಾನಿಸಿದರು. ಅನಂತರ ಶಾಂತ ಪ್ರಶಾಂತ ನೋಟ ಬೀರುತ್ತ –

"ಆ ಮನೆಯನ್ನು ಗುಡಿಸಿ, ಸಾರಿಸಿ, ಸ್ವಚ್ಛಗೊಳಿಸಲು ವ್ಯವಸ್ಥೆ ಮಾಡಿ. ಈ ದಿನ ರಾತ್ರಿ ನಾವು ಅಲ್ಲಿಯೇ ಸ್ನಾನ-ಪೂಜೆ, ಪ್ರಸಾದ ಮಾಡುತ್ತೇವೆ. ನಾಳೆ ಬೆಳಿಗ್ಗೆಯೂ ಸಹ."

– ಎನ್ನುತ್ತಲೇ, ಆ ಪ್ರಸ್ತಾಪ ಮಾಡಿದ ವ್ಯಕ್ತಿ ಭಯಭೀತನಾಗಿಬಿಟ್ಟ !

"ಬ್ಯಾಡಿ ಬುದ್ದೀ.... ಮೊದಲೇ ದೆವ್ವ... ಏನಾರಾ....?"

—ಎಂದು ಹೇಳುತ್ತಿರುವಂತೆಯೇ, ಆ ವ್ಯಕ್ತಿಯ ಮಾತನ್ನು ಮಧ್ಯದಲ್ಲಿಯೇ ತಡೆದು-

"ನೀವೆಲ್ಲರೂ ಸ್ನಾನ ಮಾಡಿ ಬನ್ನಿ. ಅಲ್ಲಿಯೇ ನಮ್ಮ ಜೊತೆಗೆ ಲಿಂಗಪೂಜೆ ಮಾಡಿ. ನಮ್ಮನ್ನು ನೋಡಿ ಭಯಪಡದ ದೆವ್ವ, ನಿಮ್ಮನ್ನು ನೋಡಿ ಖಂಡಿತ ಓಡಿಹೋಗಿಬಿಡುತ್ತೆ"

—ಎಂದು ಹೊಟ್ಟೆ ತುಂಬ ನಕ್ಕರು !

ಶ್ರೀಗಳವರ ಆದೇಶದಂತೆ ಎಲ್ಲರೂ ಲಿಂಗವಂತರೂ, ಲಿಂಗವಂತರಲ್ಲದವರೂ ಸ್ನಾನಮಾಡಿ ಸ್ವಚ್ಛಗೊಳಿಸಿದ ಆ ಮನೆಗೆ ರಾತ್ರಿ ಬಂದರು. ಶ್ರೀಗಳವರ ಜೊತೆಯಲ್ಲಿ ಇಷ್ಟಲಿಂಗ ಪೂಜೆಗೆ ತೊಡಗಿದರು. ಇತರರು ಕೈಮುಗಿದು, ಕಣ್ಣುಮುಚ್ಚಿ ತಮ್ಮ ಇಷ್ಟದೇವತಾ ಪ್ರಾರ್ಥನೆಗೆ ತೊಡಗಿದರು.

ಪ್ರಣತಿಗಳು ಬೆಳಗುತ್ತಿವೆ.

ಸಮೇವುಗಳು ಸುತ್ತಲೂ ದೀಪದ ಕುಡಿಗಳಿಂದ ಹಳದಿ ಬೆಳಕನ್ನು ಹರಡುತ್ತಿವೆ.

ಮಧ್ಯ ಮಧ್ಯೆ ಗಂಟೆಯಿಂದ ಓಂಕಾರ ನಾದ ತರಂಗ ತರಂಗವಾಗಿ ವ್ಯಾಪಿಸುತ್ತಿದೆ.

ಓಂ ನಮಃ ಶಿವಾಯಃ ಮಂತ್ರಘೋಷ ಮನೆಯ ಮೂಲೆ-ಮೊಡಕುಗಳಲ್ಲಿ ತುಂಬಿ ತುಳುಕಿತು.

ಸಾಂಗೋಪಾಂಗವಾಗಿ ಪೂಜೆ ಮುಗಿಯಿತು.

ಪ್ರಸಾದ ವಿನಿಯೋಗವಾಯಿತು.

ಮನೆಗಳಲ್ಲಿ ಪೂಜೆ, ಜಪ-ತಪಗಳ ನಡೆಸುವುದರ ಕುರಿತು, ಪೂಜಾ ಮಹತ್ವದ ಕುರಿತು ಸರಳವಾಗಿ, ಆದರೆ ಮನಸ್ಸಿಗೆ ನಾಟುವಂತೆ ವಿವರಿಸಿದರು. ಇಂತಹ ಆಚರಣೆಗಳಿಂದ ದುಷ್ಟಶಕ್ತಿಗಳು ದೂರವಾಗುತ್ತವೆ. ಅಲ್ಲದೆ ಜನರ ಮನಸ್ಸಿನಲ್ಲಿ ಧಾರ್ಮಿಕ ಭಾವನೆಗಳು ಮೂಡಿ, ಜನ ನೀತಿವಂತರಾಗುತ್ತಾರೆ ಎಂದೆಲ್ಲ ಬೋಧಿಸಿ —

"ಯದ್ಭಾವಂ ತದ್ಭವತಿ" – ಎಂದು ದೊಡ್ಡವರು ಹೇಳುತ್ತಾರೆ. ಅಂದರೆ ನಮ್ಮ ಮನಸ್ಸಿನಲ್ಲಿ ಯಾವ ಭಾವ ಇರುತ್ತೋ, ಅದೇ ಹೊರಗೆ ಸೃಷ್ಟಿಯಾಗುತ್ತೆ. ಹಾಗೆ ಕಾಣಿಸುತ್ತೆ. ಮನಸ್ಸಿನಲ್ಲಿ ದೆವ್ವ ದೆವ್ವ ಅಂದುಕೊಂಡಿದ್ದರೆ, ನಸುಗತ್ತಲಲ್ಲಿ ಹೆತ್ತ ತಾಯಿಯೂ ದೆವ್ವದಂತೆ ಕಾಣಿಸುತ್ತಾಳೆ. ನಮ್ಮ ಮನಸ್ಸಿನ ಭ್ರಾಂತಿ ಹಾಗೆ ಮಾಡಿಸುತ್ತೆ. ಅದಕ್ಕೆ ಬಸವಣ್ಣನವರು ಹೀಗೆ ಹೇಳಿದ್ದಾರೆ—

ವಚನದಲ್ಲಿ ನಾಮಾಮೃತ ತುಂಬಿ
ನಯನದಲಿ ನಿಮ್ಮ ಮೂರುತಿ ತುಂಬಿ

ಕಿವಿಯಲ್ಲಿ ನಿಮ್ಮ ಕೀರುತಿ ತುಂಬಿ
ಮನದಲಿ ನಿಮ್ಮ ನೆನಹು ತುಂಬಿ
ಕೂಡಲ ಸಂಗಮದೇವಾ, ನಿಮ್ಮ ಚರಣ ಕಮಲದಲ್ಲಿ ಆನು ತುಂಬಿ !

—ಎಂದರೆ, ನಮ್ಮ ಮಾತುಗಳಲ್ಲಿ ಭಗವಂತನ ವಿಷಯ ಪದೇ ಪದೇ ಬರುತ್ತಿರಬೇಕು. ಭಗವಂತನ ನಾಮಸ್ಮರಣೆ ಸಮಯಾವಕಾಶ ಸಿಕ್ಕಾಗಲೆಲ್ಲ ಮಾಡುತ್ತಿರಬೇಕು. ಕಣ್ಣುಗಳಲ್ಲಿ ಭಗವಂತನನ್ನು ತುಂಬಿಕೊಳ್ಳಬೇಕು. ನೋಡಿ ನಾವು ಕನ್ನಡಕ ಹಾಕಿಕೊಳ್ತೇವೆ. ಗಾಜು ಯಾವ ಬಣ್ಣದ್ದಾಗಿರುತ್ತೋ, ಹೊರಗಿನದೆಲ್ಲಾ ಅದೇ ಬಣ್ಣದ್ದಾಗಿ ಕಾಣಿಸುತ್ತೆ. ನಮ್ಮ ಕಣ್ಣಲ್ಲಿ ಭಗವಂತನ ಸ್ವರೂಪ ತಳೆದು ನೋಡಿದಾಗ, ಪ್ರತಿಯೊಬ್ಬರೂ, ಪ್ರತಿಯೊಂದು ಜೀವಿಯೂ ಆ ಭಗವಂತನಂತೆಯೇ ಕಾಣಿಸುತ್ತದೆ. ಅಲ್ಲವೆ ? ಭಗವಂತನ ವಿಷಯಕ್ಕೆ ನಾವು ಕಿವಿ ಕೊಡಬೇಕು. ಆ ವಿಷಯ ಮನಸ್ಸಿಗಿಳಿದು ಮನಸ್ಸು ಪರಿಶುದ್ಧವಾಗುತ್ತದೆ. ಅದು ಬಿಟ್ಟು ಪಾಪದ ವಿಚಾರಗಳನ್ನು ಕಿವಿಗಳಿಂದ ಕೇಳಿದರೆ, ಮನಸ್ಸೂ ಪಾಪದಿಂದ ತುಂಬಿಬಿಡುತ್ತೆ. ಮನಸ್ಸಿನಲ್ಲಿ ಸದಾ ಭಗವಂತನ ಧ್ಯಾನ ಮಾಡುತ್ತಿರಬೇಕು. ಅಲ್ಲದೆ ಭಗವಂತನ ದಿವ್ಯ ಚರಣಗಳಲ್ಲಿ ಇಡೀ ನಮ್ಮನ್ನೇ ತುಂಬಿಬಿಡಬೇಕು —ಕಮಲದ ಹೂವಿನಲ್ಲಿಯೇ ತುಂಬಿ ಇರುವ ಹಾಗೆ ! —ಹೀಗಿದ್ದರೆ ನಮಗಾವ ದುಷ್ಟಶಕ್ತಿಗಳ ಕಾಟವೂ ಇಲ್ಲ. ಮುಖ್ಯವಾಗಿ ದೆವ್ವ ಅನ್ನುವುದು ಇಲ್ಲ. ಅದು ನಮ್ಮ ಮನಸ್ಸಿನಲ್ಲಿ ನಾವು ಕಲ್ಪಿಸಿಕೊಂಡ ಭೂತ. ಅದೇ ನಮಗೆ ಹೊರಗೆ ಕಾಣಿಸುತ್ತದೆ, ಅಷ್ಟೇ. ಅಲ್ಲದೆ, ನಾವು ಒಳ್ಳೆಯವರಾಗಿದ್ದರೆ, ನಮಗೆ ಕಾಣುವುದೆಲ್ಲವೂ ನಾವು ನೋಡುವವರೆಲ್ಲರೂ ಉತ್ತಮರೇ ಆಗಿ ಕಾಣಿಸುತ್ತಾರೆ. ನಾವೇ ಕೆಟ್ಟವರಾಗಿದ್ದರೆ, ದುಷ್ಟರಾಗಿದ್ದರೆ —ನಾವು ನೋಡಿದ್ದೆಲ್ಲವೂ ಕೆಟ್ಟದಾಗಿ ಕಾಣಿಸುತ್ತೆ. ನಾವು ನೋಡಿದವರೆಲ್ಲರೂ ದುಷ್ಟರಾಗಿ ಕಾಣಿಸುತ್ತಾರೆ. ಹೌದೋ ಅಲ್ಲವೋ ? ನೋಡಿ, ಒಮ್ಮೆ ಕೃಷ್ಣಪರಮಾತ್ಮ ದುರ್ಯೋಧನನ್ನು, ಧರ್ಮರಾಯನನ್ನು ಪ್ರತ್ಯೇಕವಾಗಿ ಕರೆದು, —

"ನೀವು ಜಗತ್ತನ್ನು ಸುತ್ತಾಡಿ ಜಗತ್ತು ಹೇಗಿದೆಯೋ ಬಂದು ನನಗೆ ತಿಳಿಸಿ' —ಎಂದನಂತೆ. ಅದರಂತೆ ಅವರಿಬ್ಬರೂ ಪ್ರಪಂಚ ಸುತ್ತಿಬರಲು ಹೋದರು. ಕೆಲವು ಕಾಲವಾದ ಮೇಲೆ ಮೊದಲು ದುರ್ಯೋಧನ ಬಂದ. ಬಂದವನೇ —

"ಏನು ಕೃಷ್ಣಾ ! ಎಂಥ ಜಗತ್ತು! ಛೀ! ಛೀ ! ಎಲ್ಲಿ ನೋಡಿದರೂ ದುಷ್ಟರೇ !"— ಎಂದು ಮುಖ ಸಿಂಡರಿಸಿಕೊಂಡನಂತೆ.

ಆಮೇಲೆ ಧರ್ಮರಾಯ ಬಂದನಂತೆ. ಬಂದವನು —

"ಕೃಷ್ಣಪರಮಾತ್ಮ ! ಏನು ನಿನ್ನ ಲೀಲೆ ! ಎಂಥಾ ಸೃಷ್ಟಿ ನಿನ್ನದು. ಎಲ್ಲಿ ನೋಡಿದರೂ ಎಲ್ಲರೂ ಧರ್ಮಾತ್ಮರೇ. ಒಳ್ಳೆಯವರಿಂದ ಈ ಜಗತ್ತು ತುಂಬಿ ತುಳುಕುತ್ತಿದೆ"

—ಎಂದನಂತೆ.

ಕೃಷ್ಣ, ಹೌದೇ ?... ಅಂತ ಮುಗುಳು ನಕ್ಕನಂತೆ, ಅಷ್ಟೆ.

ಇದರಿಂದ ಗೊತ್ತಾಗುವುದೇನು ? ಅರ್ಥವಾಗಿರಬೇಕಲ್ಲಾ ನಿಮಗೆ ! ನಾವು ಒಳ್ಳೆಯವರಾಗಿದ್ದಾರೆ, ನಮಗೆ ಜಗತ್ತು ಒಳ್ಳೆಯದಾಗಿ ಕಾಣಿಸುತ್ತೆ. ನಾವೇ ಕೆಟ್ಟವರಾಗಿದ್ದರೆ ಇಡೀ ಜಗತ್ತೇ ಕೆಟ್ಟದಾಗಿ ಕಾಣಿಸುತ್ತೆ ! ಆದ್ದರಿಂದ ನಾವು ನಮ್ಮ ಮನಸ್ಸನ್ನು, ಕಣ್ಣು, ಕಿವಿ, ನಾಲಗೆಗಳನ್ನು ಪರಿಶುದ್ಧವಾಗಿಟ್ಟುಕೊಳ್ಳಬೇಕು. ಸದಾ ಭಗವಂತನ ಸ್ಮರಣೆ, ನಾಮ ಧ್ಯಾನ ಮಾಡುತ್ತಿರಬೇಕು.

ಜೊತೆಗೆ ನಮ್ಮ ಮಕ್ಕಳಿಗೆ ನಾವು ಒಳ್ಳೆಯದನ್ನು ತಿಳಿಸಬೇಕು. ಒಳ್ಳೆಯವರಾಗುವಂತೆ ಬೋಧಿಸುತ್ತಿರಬೇಕು. ಎಲ್ಲಿಯವರೆಗೆ ನಾವು ಬೋಧಿಸಬಹುದು ! ಏನೋ ಮಕ್ಕಳು ಐದಾರು ವರ್ಷಗಳಿರುವಾಗ ಬೋಧಿಸುತ್ತಾ ಇರಬೇಕು. ನಮ್ಮ ನಮ್ಮ ಬದುಕಿನಲ್ಲಿ ಸದಾ ಬೋಧನೆ ಮಾಡ್ತಾ ಇರಲು ಸಮಯವೂ ಬೇಕಲ್ಲ. ದಿನದ ದುಡಿಮೆ ಗೈಮೆ ಇದ್ದೇ ಇರುತ್ತಲ್ಲ. ಅಂದಮೇಲೆ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಲು ನೀವು ಕಳಿಸಿದರೆ ವಿದ್ಯಾವಂತರಾಗಿ, ಅವರು ಒಳ್ಳೆಯ ದಾವುದು, ಕೆಟ್ಟದಾವುದು ಎಂದು ತಿಳ್ಕೋತಾರೆ. ಹಾಗೆ ಮುಂದೆ ಅವರು ತಮ್ಮ ಜೀವನದಲ್ಲಿ ನೀತಿವಂತರಾಗಿ ಬಾಳುತ್ತಾರೆ. ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಹೊಣೆಯನ್ನು ನಾವು ನಮ್ಮ ಕೈಲಾದಷ್ಟು ಹೊತ್ತಿದ್ದೇವೆ. ವಿದ್ಯಾರ್ಥಿನಿಲಯಗಳನ್ನು ತೆರೆದಿದ್ದೇವೆ. ಊಟಕ್ಕೆ ವಾಸಕ್ಕೆ ಅನುಕೂಲ ಮಾಡಿಕೊಟ್ಟಿದ್ದೇವೆ. ಇಗೋ ನಿಮ್ಮಂಥ ಉದಾರಿಗಳು ನೀಡಿದ ದವಸ ಧಾನ್ಯಗಳನ್ನು ಅವರಿಗಾಗಿ ಮುಡಿಪಿಡುತ್ತೇವೆ. ಎಲ್ಲರಿಗೂ ಒಳ್ಳೆಯದಾಗಲಿ! ನಿಮ್ಮ ಮಕ್ಕಳು ವಿದ್ಯಾವಂತರಾಗಲಿ, ಬುದ್ಧಿವಂತರಾಗಲಿ, ನಿಮ್ಮ ನಿಮ್ಮ ಊರುಗಳಿಗೆ ಅವರು ಒಳಿತನ್ನು ಮಾಡುವವರಾಗಲಿ, ಶಿವರಾತ್ರೀಶ ನಿಮಗೆಲ್ಲಾ ಒಳ್ಳೆಯದನ್ನು ಮಾಡಲಿ...."

– ಎಂದು ಬೋಧಿಸಿದರು.

ಹೊನ್ನೂರಿನ ಆ ಹಿರಿಯರೆಲ್ಲರೂ ಬಿಟ್ಟ ಕಣ್ಣು ಬಿಟ್ಟವರಾಗಿ, ತೆರೆದ ಬಾಯಿ ತೆರೆದವರಾಗಿ, ಕುಳಿತಿದ್ದರು. ಶ್ರೀಗಳವರ ಮಾತು ಮುಗಿದರೂ, ಅವರಿಗೆ ಎಚ್ಚರವಾಗಲಿಲ್ಲ. ಸ್ವಲ್ಪ ಹೊತ್ತಿನ ನಂತರ ಯಾರೋ ಎಚ್ಚೆತ್ತು –"ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳಿಗೆ ಜಯವಾಗಲಿ!" –ಎನ್ನುತ್ತಲೇ ಎಲ್ಲರೂ ಎಚ್ಚೆತ್ತು ಚಪ್ಪಾಳೆ ತಟ್ಟಿದರು!

## ಹರಕರುಣೆಗಿಂತ ಮಿಗಿಲು ಗುರುಕರುಣೆ

ಒಮ್ಮೆ ಶ್ರೀಗಳವರು ಸಂಸ್ಥೆಯ ಕಾರ್ಯಾರ್ಥ ಬೆಂಗಳೂರಿಗೆ ಪ್ರಯಾಣ ಮಾಡುತ್ತಿದ್ದರು. ಚನ್ನಪಟ್ಟಣ ದಾಟುತ್ತಲೇ, ಮಧ್ಯ ದಾರಿಯಲ್ಲಿ ಕಾರು ಯಾಂತ್ರಿಕ ತೊಂದರೆಗೊಳಗಾಗಿ ನಿಂತುಬಿಟ್ಟಿತು. ಅದನ್ನು ಸರಿಪಡಿಸಲು ಸಾಕಷ್ಟು ಸಮಯ ಬೇಕಾಗಿತ್ತು. ಶ್ರೀಗಳವರು ಕಾರಿನಿಂದ ಇಳಿದು ಕೆಳಗೆ ನಿಲ್ಲಬೇಕಾಯಿತು. ಬಟ್ಟಬಯಲಲ್ಲಿ ಬೀಸುತ್ತಿರುವ

ನಿರ್ಮಲ ಗಾಳಿಯಲ್ಲಿ ಒಂದು ಎರಡು ಹೆಜ್ಜೆ ಓಡಾಡಿದರು. ಅವರ ನೋಟ ಪಕ್ಕಕ್ಕೆ ತಿರುಗಿತು. ಜಮೀನಿನಲ್ಲಿ ನಾಡಹೆಂಚಿನ ಮುರುಕು ಮನೆಯೊಂದು ಕಾಣಿಸಿತು. ಅದರ ಮುಂದೆ ಸಣ್ಣಪುಟ್ಟ ಹೂಗಿಡಗಳ ಕೈತೋಟ. ಅಲ್ಲಿ ಕುಳಿತುಕೊಳ್ಳಲು ಶಿಲಾಸನವೊಂದಿತ್ತು. ಶ್ರೀಗಳವರು ಅಲ್ಲಿಗೆ ದಯಮಾಡಿಸಿ ಶಿಲಾಸನಾಸೀನರಾದರು.

ಆ ಮುರುಕಲು ಮನೆಯಲ್ಲಿ ಒಬ್ಬ ದೈವಭಕ್ತರು, ಧರ್ಮಭೀರುಗಳು ವಾಸಿಸುತ್ತಿದ್ದರು. ಅಲ್ಲದೆ ಅದು ರಾಗಿ ಬೀಸುವ, ಭತ್ತ ಕುಟ್ಟುವ ಯಂತ್ರಾಗಾರ. ಅಸ್ತವ್ಯಸ್ತವಾಗಿತ್ತು. ವಯಸ್ಸಾದ ಮಾಲೀಕ ರೋಗಗ್ರಸ್ತನಾಗಿ ಸಾಲದ ಹೊರೆಯನ್ನು ಹೊರಲಾರದೆ ಮೃತ್ಯುಮಂದಿರದ ಮಹಾದ್ವಾರದತ್ತ ಮುಖಮಾಡಿಕೊಂಡಿದ್ದರು....

ಜಂಗಮರು ತಾವಾಗಿ ತನ್ನ ಬಡ ಕುಟೀರದ ಒಳಗೆ ಬಂದುದನ್ನು ನೋಡಿ ಆತನಿಗೆ ಸಂತೋಷ – ಆಶ್ಚರ್ಯಗಳು ಏಕಕಾಲಕ್ಕಾದುವು. ತನ್ನ ಅಳಲನ್ನು ಕೇಳಿಸಿಕೊಂಡ ಆ ಪರಮಾತ್ಮ ಹೀಗೆ ಈ ರೂಪದಲ್ಲಿ ತನ್ನಲ್ಲಿಗೆ ಬಂದಿರುವನೆಂದು ಭಾವಿಸಿದರು. ಈ ಎಲ್ಲ ಮನಸ್ಸಿನ ಭಾವನೆಗಳನ್ನು – ಜನ್ಮಾಂತರಗಳಿಂದ ಪರಿಚಿತರಾದ ಆತ್ಮೀಯ ಬಂಧುವಿನಲ್ಲಿ – ಆಪದ್ಬಾಂಧವನಲ್ಲಿ ತನ್ನ ಕಷ್ಟವನ್ನು ತೋಡಿಕೊಳ್ಳುವಂತೆ ತನ್ನ ಕರುಣಾಜನಕ ಕಥೆಯನ್ನೆಲ್ಲಾ ಹೇಳಿಕೊಂಡರು. ಆದರೆ ಅವರಿಗೆ ಶ್ರೀಗಳವರಿಂದ ನೆರವು ಪಡೆಯಬೇಕೆಂಬ ಯಾವುದೇ ತೆರನಾದ ಸ್ವಾರ್ಥ ಭಾವನೆಯಿರಲಿಲ್ಲ. ದೈವಾನುಗ್ರಹದಿಂದ ಯಾರೋ ಮಹಾನುಭಾವರು ಬಂದಿದ್ದಾರೆ. ಅವರಲ್ಲಿ ನಿವೇದಿಸಿಕೊಂಡು ವೇದನೆಯ ಭಾರವನ್ನು ಇಳಿಸಿಕೊಳ್ಳಬೇಕೆಂಬುದಷ್ಟೇ ಅವರ ಮನಸ್ಸಿನ ತುಡಿತ....

ಅಲ್ಲದೆ ತನ್ನನ್ನು ಅಂತಹ ಕಠಿಣ ಪರಿಸ್ಥಿತಿಯಿಂದ ಮಾನವಮಾತ್ರರಿಂದ ತನ್ನನ್ನು ಉದ್ಧಾರಮಾಡುವುದು ಅಸಾಧ್ಯ. ಮತ್ತೆ ಕಳೆದುಹೋದ ತಮ್ಮ ಜೀವನದ ಸುಖಮಯ ಸುಂದರ ದಿನಗಳು ಬಂದಾವು ಎಂಬ ಭರವಸೆ ಅವರಲ್ಲಿರಲಿಲ್ಲ.

ತನ್ನ ಕಥೆ ಹೇಳಿ ಮುಗಿಸುವುದರೊಳಗೆ ಕಾರು ಸಿದ್ಧವಾಯಿತು.

ಶ್ರೀಗಳವರು ಮೌನವಾಗಿ ಆತನತ್ತ ಅಭಯ ಹಸ್ತ ತೋರಿ, ಬೆಂಗಳೂರಿಗೆ ಪ್ರಯಾಣ ಮಾಡಿದರು.

ಆ ಕ್ಷಣದಿಂದ ಶ್ರೀಗಳವರ ಅಂತರಾಳದಲ್ಲಿ ಆ ದೀನ ವೃದ್ಧನ ಕರುಣಾಜನಕ ಕಥೆ ತುಂಬಿ ಕಲಕುತ್ತಿತ್ತು....

ಬೆಂಗಳೂರಿನಿಂದ ಹಿಂತಿರುಗಿ ಹೊರಡುವ ದಿನ ಒಂದು ಹೊಸ ವಿಭೂತಿಗಟ್ಟಿಯನ್ನು ಪೂಜಿಸಿ, ಅಭಿಮಂತ್ರಿಸಿ, ತಮ್ಮ ಒಳಜೇಬಿನಲ್ಲಿಟ್ಟುಕೊಂಡರು. ಆದರೆ ತಮ್ಮೊಂದಿಗಿರುವವರಿಗೆ ತಮ್ಮ ಆತ್ಮಸಂವೇದನೆಯನ್ನು ಹೇಳಿಕೊಳ್ಳುವಂತಿರಲಿಲ್ಲ.

ಹಾದಿಯಲ್ಲಿ, ಆ ವೃದ್ಧನ ಕುಟೀರವಿರುವ ಸ್ಥಳ ಕಾಣಿಸುವುದನ್ನೇ ಗಮನಿಸುತ್ತಾ ಕುಳಿತಿದ್ದರು. ಆ ಸ್ಥಳ ಅಷ್ಟು ದೂರದಲ್ಲಿ ಕಂಡುಬಂದು, ಇನ್ನೇನು ಚಾಲಕನಿಗೆ ಕೊಂಚಹೊತ್ತು ಕಾರು ನಿಲ್ಲಿಸು ಎಂದು ಹೇಳಬೇಕೆಂದುಕೊಳ್ಳುತ್ತಿರುವಷ್ಟರಲ್ಲಿ, ಆ ವೃದ್ಧರು ಕೊಂಚ ಲವಲವಿಕೆ ಗೂಡಿದ್ದರೆಂದು ಕಾಣುತ್ತೆ – ಅವರೇ ಆ ಕಡೆಯಿಂದ ಯಾವುದೋ ಕೆಲಸದ ಮೇಲೆ ರೋಡಿನ ಬಳಿಗೆ ಬರುತ್ತಿದ್ದರು. ಶ್ರೀಗಳವರು ಕಾರು ನಿಲ್ಲಿಸಲು ಹೇಳಿ, ಆ ವ್ಯಕ್ತಿ ಹತ್ತಿರ ಹತ್ತಿರವಾಗುತ್ತಿರು ವುದನ್ನು ಕಂಡು ಎಷ್ಟು ಸಂತೋಷಪಟ್ಟರೆಂದರೆ – ತಾವೇ ಸಾಕ್ಷಾತ್ ಶಿವನ ದರ್ಶನ ಪಡೆದಷ್ಟು ಸಂತೋಷಭರಿತರಾದರು !

ಆತನನ್ನು ಕಾರಿನ ಬಳಿಗೆ ಕರೆಯಲು – ಆತ ನಡು ಬಗ್ಗಿಸಿ, ಹಣೆಗೆ ಕೈ ಜೋಡಿಸಿಕೊಂಡು ಅನಿರೀಕ್ಷಿತವಾಗಿ ಮತ್ತೆ ಶ್ರೀಗಳ ದರ್ಶನಭಾಗ್ಯ ಲಭಿಸಿದ ಆನಂದದಿಂದ ಓಡೋಡಿ ಬಂದರು. ಶ್ರೀಗಳವರು ಆತನ ಲಲಾಟದ ಮೇಲೆ ಭಸ್ಮಧಾರಣ ಮಾಡಿ, ಆಶೀರ್ವದಿಸಿ, ಆ ವಿಭೂತಿ ಗಟ್ಟಿಯನ್ನು ಆತನ ಕೈಗೆ ಕೊಟ್ಟು, "ನಿತ್ಯ ಧರಿಸುತ್ತಿರಿ" – ಎಂದು ಹೇಳಿದರು.

ಮೈಸೂರಿಗೆ ಬಂದರು –

ಒಂದು ವರ್ಷ ಕಳೆಯಿತು.

ಅಲ್ಲಿ ಆ ವ್ಯಕ್ತಿಯ ಜೀವನದಲ್ಲಿ ಅನೂಹ್ಯ ಘಟನೆಗಳು ನಡೆದುಬಿಟ್ಟಿವೆ. ನೆರವು ನೀಡಲು ಅವರ ಪರಿಚಿತರು ಕೆಲವರು ತಾವಾಗಿಯೇ ಅವರ ಬಳಿಗೆ ಬಂದರಂತೆ ! ಸಾಲಕ್ಕಾಗಿ ಕಾಡುತ್ತಿದ್ದವರು ತಾವೇ ನೆರವಾಗಲು, ಈ ವ್ಯಕ್ತಿಯನ್ನು ಮತ್ತೆ ಸುಸ್ಥಿತಿಯಲ್ಲಿ ನೆಲೆನಿಲ್ಲಿಸಲು ಉದ್ಯುಕ್ತರಾದರಂತೆ ! ಒಂದೇ ವರ್ಷದಲ್ಲಿ ದೊಡ್ಡ ಅಕ್ಕಿ ಗಿರಣಿಯ ಮಾಲೀಕರಾಗಿದ್ದರು.

"ಅಯ್ಯೋ ! ಎಂಥಾ ಪಾಪಿ ನಾನು ! ಅಂದು ಸಾಕ್ಷಾತ್ ಶಿವನೇ ನನ್ನ ಬಡ ಗುಡಿಸಲಿಗೆ ಬಂದು ಆಶೀರ್ವದಿಸಿ, ಮತ್ತೆ ಹಿಂತಿರುಗಿ ಹೋಗುವಾಗ ಕರುಣಿಸಿ ಹೋದ ಆ ಮಹಾನುಭಾವರ ಬಗ್ಗೆ ಏನೂ ತಿಳಿದುಕೊಳ್ಳಲೇ ಇಲ್ಲವಲ್ಲಾ ! ಅವರು ಮಂಡ್ಯದವರೇ, ಮದ್ದೂರಿನವರೇ, ಮೈಸೂರಿನವರೇ ? ತಿಳಿದುಕೊಳ್ಳಲಿಲ್ಲವಲ್ಲಾ ! ಆಗಲಿ ಅವರು ಮತ್ತೆ ಯಾವ ದಿನವಾದರೂ ಈ ಮಾರ್ಗವಾಗಿ ಬಂದೇ ಬರುತ್ತಾರೆ" –ಎಂದುಕೊಂಡು, ಆ ದಿನ ಯಾವ ಹೊತ್ತಿನಲ್ಲಿ ಶ್ರೀಗಳವರು ಆಗಮಿಸಿದ್ದರೋ ಸರಿಯಾಗಿ ಅದೇ ಹೊತ್ತಿಗೆ ರಸ್ತೆಯಂಚಿಗೆ ಬಂದು ನಿತ್ಯ ನಿಲ್ಲುತ್ತಿದ್ದರಂತೆ, ಕಾಯುತ್ತ !

ಮನಸ್ಸನ್ನು ಕೇಂದ್ರೀಕರಿಸಿ, ಸಾತ್ವಿಕವಾದ ಬಯಕೆ ತೀವ್ರವಾಗಿ ಈಡೇರಲು ನಿರೀಕ್ಷಿಸುತ್ತಿದ್ದರೆ, ಅಂಥಾ ಬಯಕೆ ಈಡೇರಿಯೇ ಈಡೇರುತ್ತದೆ –ಎಂದು ಬಲ್ಲವರು ಹೇಳುತ್ತಾರೆ...

ಹಾಗೆಯೇ ಆಯಿತು –

ಅವರು ಅಕ್ಕಿಗಿರಣಿಯ ಮಾಲೀಕರಾಗಿ, ಅದಕ್ಕೆ ಸಂಬಂಧಿಸಿದ ದಾಖಲಾತಿ ಪತ್ರಗಳನ್ನು ನೋಂದಾಯಿಸಿದ ಮೇಲೂ ಕೂಡಲೇ ಅಕ್ಕಿಗಿರಣಿಯನ್ನು ಪ್ರಾರಂಭಿಸಲಿಲ್ಲವಂತೆ. ಎಷ್ಟೇ

ದಿನಗಳಾಗಲಿ ಆ ಮಹಾತ್ಮರು ಬಂದೇ ಬರುತ್ತಾರೆ. ಅವರ ಪಾದಪೂಜೆ ಮಾಡಿ, ಅವರ ಅಮೃತ ಹಸ್ತದಿಂದಲೇ ಪ್ರಾರಂಭೋತ್ಸವ ಮಾಡಿಸುತ್ತೇನೆ –ಎಂದು ಕಾದಿದ್ದರಂತೆ ! ಅವರೇ ಇದನ್ನೆಲ್ಲಾ ಹೇಳಿಕೊಂಡರು –

ಆ ಸುದಿನ ಅವರ ಬಾಳಿನಲ್ಲಿ ಉದಯವಾಗಿಯೇ ಆಯಿತು –

ಯಥಾರೀತಿ ಶ್ರೀಗಳವರು ತಮ್ಮ ವಿದ್ಯಾರ್ಥಿನಿಲಯ, ಶಾಲಾ-ಕಾಲೇಜುಗಳಿಗೆ ಸಂಬಂಧಿಸಿದ ಕಾರ್ಯದ ಮೇಲೆ ಆ ದಿನ ಬೆಂಗಳೂರಿಗೆ ಹೊರಟರು.

ಅಲ್ಲಿಗೆ ಕಾರು ಬರುತ್ತಿರುವುದು ಅಷ್ಟು ದೂರಕ್ಕೆ ಕಾಣಿಸುತ್ತಲೇ, ಆ ವ್ಯಕ್ತಿ ಹೆಚ್ಚುಕಡಿಮೆ ರಸ್ತೆ ಮಧ್ಯಕ್ಕೇ ಬಂದು ಎರಡೂ ಕೈ ಎತ್ತಿ ಕಾರನ್ನು ನಿಲ್ಲಿಸಿದನಂತೆ. ಅಂತೂ ನನ್ನ ಪುಣ್ಯ ಬುದ್ಧಿ. ನಿಮ್ಮ ಕಾರನ್ನು ಚೆನ್ನಾಗಿ ನೆಪ್ಪಿಟ್ಟುಕೊಂಡಿದ್ದೆ"– ಎಂದು ಅನಂತರ ಆತನೇ ಹೇಳಿದ.

ಶ್ರೀಗಳವರನ್ನು ಬಲು ಸಂಭ್ರಮದಿಂದ ತನ್ನ ಹೊಸ ಅಕ್ಕಿಗಿರಣಿಗೆ ಬಿಜಯಂಗೈಸಿ, ಪಾದಪೂಜೆಮಾಡಿ, ಶ್ರೀಗಳವರ ಅಮೃತ ಹಸ್ತದಿಂದ ಅಕ್ಕಿ ಗಿರಣಿಯ ಪ್ರಾರಂಭೋತ್ಸವವನ್ನು ನೆರವೇರಿಸಿದ.

ಇಂದು ಆ ವ್ಯಕ್ತಿ ಇಲ್ಲ.

ಅವರ ಮಕ್ಕಳು ಶ್ರೀಮಠಕ್ಕೆ ಬಂದು ಶ್ರೀಗಳವರ ದರ್ಶನ ಮಾಡಿದಾಗಲೆಲ್ಲಾ ಹೇಳುತ್ತಿದ್ದರು –

"ನಮ್ಮ ತಂದೆಯವರು ನಿಮ್ಮನ್ನು ನೆನೆಸಿಕೊಳ್ಳದ ದಿನವೇ ಇಲ್ಲ ಬುದ್ದೀ, ನಾವು ನಿಮ್ಮ ಹೆಸರು ಹೇಳಿಯೇ ಮನೆ ದೀಪ ಹಚ್ತೇವಿ. ನಿಮ್ಮ ಹೆಸರು ಹೇಳಿ ಊಟ ಮಾಡ್ತೀವಿ..."

ಇಂದಿಗೂ ಆ ವ್ಯಕ್ತಿಯ ಮನೆಯವರು, ಮಕ್ಕಳು ಭಕ್ತಿಯಿಂದ ಶ್ರೀಮಠಕ್ಕೆ ಬಂದು ಇಂದಿನ ಜಗದ್ಗುರುಗಳವರ ದರ್ಶನಾಶೀರ್ವಾದಗಳನ್ನು ಪಡೆಯುತ್ತಿದ್ದಾರೆ.

ಶ್ರೀಗಳವರನ್ನು – 'ಇಂಥಾ ದೊಡ್ಡ ಜಗದ್ಗುರುಗಳನ್ನು ನಮ್ಮಂಥೋರ ಮನೆಗೆ ಹೇಗಪ್ಪಾ ಕರೆಯೋದು ?' – ಎಂದು ಅಳುಕುತ್ತಿದ್ದ ಬಡವರ ಮನೆಗಳಿಗೂ ಹೋಗಿ ಆಶೀರ್ವದಿಸಿದ್ದಾರೆ, ಅನುಗ್ರಹಿಸಿದ್ದಾರೆ.

ಒಮ್ಮೆ ಊಟಿಗೆ ಪಯಣಿಸಿ, ಅಲ್ಲಿರುವ ಜೆ.ಎಸ್.ಎಸ್. ಆಶ್ರಮವೊಂದರಲ್ಲಿ ತಂಗಿದರು. ಆಗಾಗ ಕಾರ್ಯಾರ್ಥ ಅಲ್ಲಿಗೆ ಬರುತ್ತಿದ್ದುದನ್ನು ಅಲ್ಲೇ ಹತ್ತಿರದಲ್ಲಿದ್ದ ಬಡ ಕುಟುಂಬವೊಂದು ಕಂಡು, ದೂರದಿಂದಲೇ ದರ್ಶನ ಪಡೆದು, ನಮಸ್ಕರಿಸುತ್ತಿದ್ದರು, ಅಷ್ಟು ದೂರದಲ್ಲಿದ್ದುಕೊಂಡೇ. ಶ್ರೀಗಳವರನ್ನು ತಮ್ಮ ಮನೆಗೆ ಬರಮಾಡಿಕೊಳ್ಳಬೇಕೆಂಬ ಹಂಬಲವೇನೋ ಇತ್ತು. ಆದರೆ ಕನಿಷ್ಠ ಹಣ್ಣು-ಹೂ ಅರ್ಪಿಸಲೂ ಅವರ ಆರ್ಥಿಕಸ್ಥಿತಿಯಲ್ಲಿ

ಸಾಧ್ಯವಿರಲಿಲ್ಲ. ಅವರ ಅದಮ್ಯ ಹಂಬಲವನ್ನು ಹೇಗೋ ತಿಳಿದುಕೊಂಡ ಶ್ರೀಗಳವರು ಅವರ ಮನೆಗೆ ತಾವೇ ಪಾದ ಬೆಳೆಸಿದರು. ಆರಾಧ್ಯ ದೈವ ಪ್ರತ್ಯಕ್ಷವಾದಷ್ಟು ಆ ಬಡ ದಂಪತಿಗಳು ಸಡಗರಪಟ್ಟರು. ಅಯ್ಯೋ ಒಂದು ಲೋಟ ಹಾಲಿಗೂ ಗತಿಯಿಲ್ಲವಲ್ಲಾ ಅರ್ಪಿಸಲು –ಎಂದು ಮಿಡಮಿಡನೆ ಮಿಡುಕಿದರು. ಮೌನವಾಗಿ ಆನಂದಾಶ್ರುಗಳನ್ನು ಸುರಿಸುತ್ತಾ ನಿಂತುಬಿಟ್ಟರು. ಶ್ರೀಗಳವರೇ ಮಾತನಾಡಿಸಿ, ಅವರ ಮನಸ್ಸನ್ನು ಅರಳಿಸಿದ ಮೇಲೆ, ಅವರು ತಮ್ಮ ಕೊರಗನ್ನು ನಿವೇದಿಸಿಕೊಂಡರು – 'ನಮಗೆ ಮಕ್ಕಳಿಲ್ಲ ಬುದ್ಧೀ, ಮಕ್ಕಳಿಲ್ಲದೆ ಸತ್ತರೆ ನರಕವಂತೆ, ಹೋದ ಜನ್ಮದಲ್ಲಿ ಯಾವ ಮಕ್ಕಳನ್ನು ಕೊಂದಿದ್ದೆವೋ....'- –ಎಂದು ದುಃಖಿಸಿದರು.

"ದುಃಖಿಸಬೇಡಿ. ಶಿವನಿಚ್ಛೆಯಿದ್ದರೆ ನಿಮ್ಮ ಬಯಕೆ ಈಡೇರುತ್ತದೆ" –ಎಂದು, ಒಂದು ತುಂಡು ಬೆಲ್ಲವನ್ನು ಅವರಿಂದ ತರಿಸಿ, ಕಣ್ಣುಮುಚ್ಚಿ ಏನೋ ಧ್ಯಾನಿಸಿ, ಆ ದಂಪತಿಗಳಿಗೆ ತಲಾ ಒಂದು ತುಂಡು ನೀಡಿದರು.

ಒಂದೆರಡು ವರ್ಷದಲ್ಲಿ ಅವರು ತಂದೆ-ತಾಯಿಗಳಾದರು...

## ಅದು ವ್ಯಾವಹಾರಿಕ ಬಂಧವಲ್ಲ.... ಆತ್ಮಸಂಬಂಧ

ಅದೇ ವರ್ಷ –೧೯೬೭ನೇ ಇಸ್ವಿ –

ಜಗಜ್ಜ್ಯೋತಿ ಬಸವೇಶ್ವರರ ಅಷ್ಟಶತಮಾನೋತ್ಸವ ರಾಷ್ಟ್ರಾದ್ಯಂತ ವೈಭವಯುತವಾಗಿ ಆಚರಿಸಲ್ಪಟ್ಟಿತು. ಆ ಸಮಯದಲ್ಲಿ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಮಾರಂಭವೊಂದರಲ್ಲಿ ಭಾಗವಹಿಸಲು ಮುಂಬೈ ನಗರಕ್ಕೆ ಆಹ್ವಾನಿಸಲ್ಪಟ್ಟರು.

ಸಮಾರಂಭ ಮುಗಿದ ಮೇಲೆ ಕೆಲವು ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕೈಗೊಳ್ಳಲು ಏರ್ಪಾಡಾಯಿತು. ಶ್ರೀ ಚಿನ್ಮಯಾನಂದರ ಸಾಂದೀಪನೀ ಆಶ್ರಮ, ವಜ್ರೇಶ್ವರಿ ಮತ್ತು ಗಣೇಶಪುರಿ ಮುಂತಾದ ಸ್ಥಳಗಳನ್ನು ನೋಡಿ ಬರಲು ಜಗದ್ಗುರುಗಳವರು ಅಪೇಕ್ಷಿಸಿದರು. ಮುಂಬೈ ನಗರದಲ್ಲಿ ಶ್ರೀಗಳವರು ಆತ್ಮೀಯರಾದ ಬ್ರಾಹ್ಮಣ ಮಠಾಧಿಪತಿಗಳ ಸುಕ್ಷೇತ್ರದಲ್ಲಿ ಬಿಡಾರ ಮಾಡಿದ್ದರು. ಅಲ್ಲಿನ ಅಭಿಮಾನಿಗಳಿಗೆಲ್ಲಾ ಶ್ರೀಗಳವರ ಸ್ಥಾನ-ಮಾನಗಳು ಮತ್ತು ಸಂಪ್ರದಾಯಗಳಿಗೆ ಯಾವುದೇ ಎಡರು-ತೊಡರು ಬರಬಾರದೆಂದು ಅಭಿಪ್ರಾಯವಿದ್ದುದರಿಂದ ಗಣೇಶಪುರಕ್ಕೆ ಹೋಗುವ ಅಪೇಕ್ಷೆಯನ್ನು ಕೇಳಿ ಅವರು ಕೆಲವು ಸೂಚನೆಗಳನ್ನಿತ್ತರು –

ಗಣೇಶಪುರಿಯು ಮುಂಬೈ ನಗರದಿಂದ ಸುಮಾರು ಅರವತ್ತು ಮೈಲಿ ದೂರದಲ್ಲಿದೆ. ಅದು ನಿಜಕ್ಕೂ ಒಂದು ಪುಣ್ಯಕ್ಷೇತ್ರ. ಪವಿತ್ರ ಯಾತ್ರಾಸ್ಥಳವಾಗಿದೆ.

ಪೌರಾಣಿಕವಾಗಿ –ಐತಿಹಾಸಿಕವಾಗಿ ನೋಡಿದರೆ ಇದು ಅಗಸ್ತ್ಯರು, ವಸಿಷ್ಠರು, ಪರಶುರಾಮರು, ಅತ್ರಿ ಅನಸೂಯೆಯರ ತಪೋನುಷ್ಠಾನ ಭೂಮಿಯೆಂದು

ಉಲ್ಲೇಖಿತವಾಗಿದೆ. ಹಿಂದೆ ಕ್ರೂರ ಮೃಗಗಳು ಮತ್ತು ವಿಷ ಸರ್ಪಗಳ ಸಂಕುಲದಿಂದ ಕೂಡಿದ ಘೋರಾರಣ್ಯ. ಇಂದು ಸುಂದರ ತಾಣ, ಪವಿತ್ರ ಕ್ಷೇತ್ರವಾಗಿದೆ. ಈ ರೂಪಕ್ಕೆ ತಂದವರು ಮಹಾಮಹಿಮರಾದ ಸ್ವಾಮಿ ನಿತ್ಯಾನಂದರವರು.

ಇವರು ಕೇರಳದಲ್ಲಿ ಜನಿಸಿ, ಕರ್ನಾಟಕದಲ್ಲಿ ಆತ್ಮಶಕ್ತಿಯನ್ನು ಬೆಳೆಸಿಕೊಂಡು, ಮಹಾರಾಷ್ಟ್ರದಲ್ಲಿ ಮುಕ್ತಿಕ್ಷೇತ್ರವನ್ನು ರೂಪಿಸಿದ ಮಹಾತಪಸ್ವಿಗಳು. ನಿತ್ಯವೂ ಅಸಂಖ್ಯಾತ ಭಕ್ತರು ಈ ಕ್ಷೇತ್ರ ದರ್ಶನಕ್ಕೆ ದೇಶವಿದೇಶಗಳಿಂದ ಬರುತ್ತಾರೆ. ಇಲ್ಲಿ ಮೂರು ತೀರ್ಥ ಕುಂಡಗಳಿವೆ. ಒಂದರಲ್ಲಿ ಯಾವಾಗಲೂ ಕುದಿಯುತ್ತಿರುವ ಬಿಸಿನೀರು, ಮತ್ತೊಂದರಲ್ಲಿ ಸರ್ವರೋಗಾಪಹಾರಿ ಬಿಸಿನೀರು, ಮತ್ತೊಂದರಲ್ಲಿ ತಂಪು ನೀರು. ಇವು ಅಕ್ಕಪಕ್ಕದಲ್ಲಿಯೇ ಇವೆ. ಇದು ಪೂಜ್ಯ ಶ್ರೀ ನಿತ್ಯಾನಂದರ ತಪೋಮಹಿಮೆಯಿಂದ ಸುಂದರ ಪುಟಾಣಿ ನಗರವಾಗಿದೆ. ಪೂಜ್ಯರು ೧೯೬೧ರಲ್ಲಿ ನಿರ್ವಾಣಹೊಂದಿದರು. ಅವರ ಸಮಾಧಿ ಇದೆ. ಇದೊಂದು ಬೃಹತ್ ಆಶ್ರಮ. ಜೀವನದಲ್ಲಿ ಒಮ್ಮೆಯಾದರೂ ನೋಡಲೇಬೇಕಾದ ಪುಣ್ಯಕ್ಷೇತ್ರ.

ಸ್ವಾಮಿ ನಿತ್ಯಾನಂದರ ಉತ್ತರಾಧಿಕಾರಿಯಾಗಿ ಸ್ವಾಮಿ ಮುಕ್ತಾನಂದರು ಈ ಕ್ಷೇತ್ರದ ಅಧಿಪತಿಗಳಾಗಿದ್ದಾರೆ. ಇವರು ಘನ ಮಹಿಮರು. ಇವರ ದರ್ಶನ-ಆಶೀರ್ವಾದಕ್ಕೆ ಸಾವಿರಾರು ಜನ ಕಾದಿರುತ್ತಾರೆ. ದೀನದಲಿತರಿಗೆ ಅನ್ನದಾನ ವಸ್ತ್ರದಾನ ನಡೆಯುತ್ತಿರುತ್ತದೆ. ಬಯಸಿ ಬಂದವರಿಗೆ ಜ್ಞಾನದರ್ಶನಾಶೀರ್ವಾದ ಪುಣ್ಯವೂ ಲಭಿಸುತ್ತದೆ.

ಶ್ರೀಗಳವರು ಆತ್ಮಶಕ್ತಿಸಂಪನ್ನರು. ತಮ್ಮ ತಪಶ್ಶಕ್ತಿಯಿಂದ ಸಾವಿರಾರು ಜನರನ್ನು ಉದ್ಧರಿಸಿದ ಮಹಾನುಭಾವರಾಗಿದ್ದಾರೆ. ಶ್ರೀಗಳವರು ತಮ್ಮ ನಿತ್ಯನೈಮಿತ್ತಿಕ ಆಚರಣೆಗಳನ್ನು ಮುಗಿಸಿಕೊಂಡು ಮಧ್ಯಾಹ್ನ ಎರಡು ಘಂಟೆಗೆ ಬಂದು ತಮಗಾಗಿ ಏರ್ಪಡಿಸಿರುವ ಸುಂದರ ಪೀಠದಲ್ಲಿ ಮಂಡಿಸಿ ವಸ್ತ್ರದಾನ, ಜ್ಞಾನದಾನ ಮಾಡುತ್ತಾರೆ. ಬಂದವರೆಲ್ಲಾ ಮುಂದಿರುವ ಜಮಖಾನದ ಮೇಲೆ ಕುಳಿತುಕೊಳ್ಳುತ್ತಾರೆ. ಈ ಕುರಿತು – ಅಂದರೆ, ನೆಲದ ಮೇಲೆ ಹಾಸಿರುವ ಜಮಖಾನದ ಮೇಲೆ ಕುಳಿತುಕೊಳ್ಳಬೇಕಾಗುತ್ತದೆ–ಎಂದು ಮುಂಬೈ ಬಿಡುವಾಗ ಎಚ್ಚರಿಕೆಯ ಸೂಚನೆ ಬಂದಿತ್ತು. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜೊತೆಯಲ್ಲಿ ಕೆಲವು ಜನ ಕಾವಿಧಾರಿಗಳಾದ ಮಠಾಧೀಶ್ವರರೂ ಇದ್ದರು. ಜಗದ್ಗುರುಗಳವರ ಸ್ಥಾನಮಾನಗಳಿಗೆ ಸಂಪ್ರದಾಯಕ್ಕೆ –ಇಲ್ಲಿನ ವ್ಯವಸ್ಥೆಯಿಂದ ಧಕ್ಕೆ ಬರಬಹುದಾದ ಕಾರಣ ಸ್ವಾಮಿ ಮುಕ್ತಾನಂದರು ಹೊರಗೆ ಬರುವ ಮುನ್ನವೇ ಆಶ್ರಮವನ್ನು ವೀಕ್ಷಿಸಿ ಬರುವಂತೆ ಸೂಚಿಸಲಾಗಿತ್ತು. ಆದ್ದರಿಂದ ಅಪರಾಹ್ನ ಒಂದು ಘಂಟೆಗೆ ಮುನ್ನವೇ ಆಶ್ರಮವನ್ನು ಪ್ರವೇಶಿಸಿ, ಅರ್ಧ ಘಂಟೆಯಲ್ಲಿ ನೋಡುವುದನ್ನೆಲ್ಲ ನೋಡಿ ಆ ಸ್ಥಳದಿಂದ ನಿರ್ಗಮಿಸಲು ತೀರ್ಮಾನಿಸಲಾಯಿತು.

ನೂರಾರು ಜನರು ಆಶ್ರಮದ ಗ್ರಂಥಾಲಯ, ಚಿತ್ರಪಟಗಳು ಇತ್ಯಾದಿಗಳನ್ನು ಈಕ್ಷಿಸುತ್ತಾ ನಿಧಾನವಾಗಿ ಮುಂದುವರಿಯುತ್ತಿದ್ದರು. ಜಗದ್ಗುರುಗಳು ತ್ವರೆಯಿಂದ ಮುನ್ನಡೆಯಲೆಂದು ಕಾತರದಿಂದ, ಗಂಗಾಧರನ್‌ರವರು ಮೆಲುವಾಗಿ ಸೂಚಿಸುತ್ತಿದ್ದರು.

ನಿತ್ಯವೂ ಶ್ರೀಗಳವರು ದರ್ಶನ ನೀಡುವ ಸಮಯ ಮಧ್ಯಾಹ್ನ ಎರಡು ಗಂಟೆಗೆ ಎಂದು ನಿಗದಿಯಾಗಿತ್ತು. ಆದರೆ ಆಶ್ಚರ್ಯ ! –

–ಮಧ್ಯಾಹ್ನ ಒಂದೂವರೆ ಘಂಟೆಗೆ ಶ್ರೀಗಳವರ ಬಿಡಾರದ ಕೋಣೆಯ ಬಾಗಿಲು ತೆರೆದ ಶಬ್ದವಾಯಿತು. ಜಗದ್ಗುರುಗಳವರ ಸುತ್ತ ನೂರಾರು ಮಂದಿ ಪ್ರೇಕ್ಷಕರು ನಿಂತಿದ್ದರು. ನಿತ್ಯದಂತೆ ಶ್ರೀಗಳವರು ಹೊರ ಬರುವುದಕ್ಕೆ ಇನ್ನೂ ಕಾಲಾವಕಾಶವಿದ್ದುದರಿಂದ, ಅನುದಿನದಂತೆ ಎಲ್ಲರನ್ನೂ ವ್ಯವಸ್ಥಿತವಾಗಿ ಕುಳ್ಳಿರಿಸುವ ಏರ್ಪಾಡನ್ನು ಕಾರ್ಯಕರ್ತರಿನ್ನೂ ಕೈಗೊಂಡಿರಲಿಲ್ಲ.

ಸ್ವಾಮಿ ಮುಕ್ತಾನಂದರು ಜನರ ಗುಂಪಿನಲ್ಲಿ ನುಗ್ಗಿ ಬಂದರು !

ಭಕ್ತರೆಲ್ಲಾ ಭಯಚಕಿತರಾದರು.

ಗುಂಪಿನ ಜನರನ್ನು ತಾವೇ ಸರಿಸುತ್ತ, ಗುಂಪಿನ ಮಧ್ಯದಲ್ಲಿದ್ದ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರನ್ನು ಆಲಿಂಗಿಸಿಕೊಂಡು ಅತ್ಯಂತ ವಾತ್ಸಲ್ಯದಿಂದ ತಮ್ಮ ಆಸನದತ್ತ ಕರೆದೊಯ್ದು ದೃಶ್ಯ ಎಲ್ಲರನ್ನೂ ಚಕಿತಗೊಳಿಸಿತು ! ಜಗದ್ಗುರುಗಳವರೊಡನೆ ಕಾವಿಧಾರಿಗಳಾಗಿದ್ದ ಇನ್ನಿಬ್ಬರು ಸ್ವಾಮಿಗಳಿದ್ದರೂ ಇವರೇ ಸುತ್ತೂರು ಶ್ರೀಗಳೆಂದು ಗುರುತಿಸಿದುದು ಅಚ್ಚರಿಯ ಸಂಗತಿ. ಅಂದು ಇವರನ್ನು ಬಲ್ಲವರಾಗಲಿ, ಕನ್ನಡವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳುವವರಾಗಲಿ ಅಲ್ಲಿ ಯಾರೂ ಇರಲಿಲ್ಲ. ಇವರು ಆಶ್ರಮಕ್ಕೆ ಬರುವ ವರ್ತಮಾನವನ್ನು ಯಾರೂ ಕಳಿಸಿರಲೂ ಇಲ್ಲ.

ಜಗದ್ಗುರುಗಳನ್ನು ಆತ್ಮೀಯತೆಯಿಂದ ಕಂಡು, ಉತ್ತರೀಯವನ್ನು ಹೊದಿಸಿ ಗೌರವಿಸಿದುದಲ್ಲದೆ ಆಶ್ರಮದಲ್ಲೇ ಒಂದು ದಿನ ತಂಗಬೇಕೆಂದೂ, ತಮ್ಮ ಸಂಪ್ರದಾಯಕ್ಕೆ ಚ್ಯುತಿಬರದಂತಹ ಎಲ್ಲ ವ್ಯವಸ್ಥೆಗಳನ್ನು ಮಾಡುವುದಾಗಿಯೂ ವಿನಂತಿಸಿದರು. ಆದರೆ ಅದಕ್ಕೆ ಸಿದ್ಧತೆಗಳನ್ನು ಇವರು ಮಾಡಿಕೊಂಡಿರಲಿಲ್ಲ.

ಸ್ವಾಮಿ ಮುಕ್ತಾನಂದಜೀಯವರು ಭಕ್ತರ ಕೋರಿಕೆಯ ಮೇರೆಗೆ ಮತ್ತೊಂದು ಸಮಾರಂಭದಲ್ಲಿ ಪಾಲ್ಗೊಳ್ಳಲು ಮುಂಬೈಗೆ ಜರೂರಾಗಿ ದಯಮಾಡಿಸಬೇಕಾಗಿದ್ದಿತು. ತಮ್ಮ ನಿತ್ಯಕ್ರಿಯೆಗಳನ್ನೆಲ್ಲಾ ಮುಗಿಸಿ ಹೊರಡಲುದ್ಯುಕ್ತರಾಗಿದ್ದರು. ಹೊರಡುವ ಮುನ್ನ ಆಶ್ರಮದ ಎಲ್ಲಾ ವಿಭಾಗಗಳನ್ನು ತೋರಿಸುವಂತೆ ತಮ್ಮ ಶಿಷ್ಯರಿಗೆ ಅಪ್ಪಣೆ ಮಾಡಿದರು. ಆ ಕ್ಷೇತ್ರದ ಸುತ್ತಮುತ್ತ ಎಲ್ಲಿಯೂ ತೆಂಗು ಬೆಳೆಯುವುದಿಲ್ಲವಂತೆ ! ಆದರೆ ಮುಕ್ತಾನಂದಜೀಯವರ ಮಹಿಮೆಯಿಂದ ಇಲ್ಲಿ ಕೈ ಎತ್ತರದ ಮರಗಳಲ್ಲಿ ದೊಡ್ಡ ದೊಡ್ಡ ಗಾತ್ರದ ಪಚ್ಚೆಗಳ

ಗೊಂಚಲಿ ನಂಥ ತೆಂಗಿನಕಾಯಿ ಗೊಂಚಲುಗಳನ್ನು ಕಾಣಬಹುದಾಗಿದೆ. ಆಶ್ರಮದ ಪರವಾಗಿ ನಾಲ್ಕು ಎಳನೀರನ್ನು ಪೂಜಾ ಸಮಯದಲ್ಲಿ ಸ್ವೀಕರಿಸುವಂತೆ ವಿನಂತಿಸಿದರು. ಸ್ವಾಮಿಗಳವರು ತಪಃಸಿದ್ಧರು. ಆದರೆ ಅಲ್ಲಿ ನಡೆದ ಘಟನೆ ಅವರ್ಣನೀಯ. ಚಿರಸ್ಮರಣೀಯ. ಪವಿತ್ರಾತ್ಮಗಳು ಒಂದನ್ನೊಂದು ಹೇಗೆ ಗುರುತಿಸಿಕೊಂಡುವು ಮತ್ತು ಎಷ್ಟು ಆತ್ಮೀಯತೆಯಿಂದ ವರ್ತಿಸಿದುವೆಂಬು ದನ್ನು ವರ್ಣಿಸಲಸಾಧ್ಯ. ನೋಡಿದ್ದನ್ನು ನೆನೆದರೆ ಮೈನವಿರೇಳುತ್ತದೆ. ಅಲ್ಲಿಂದ ಒಬ್ಬರನ್ನೊಬ್ಬರು ಅಗಲುವುದು ಅತ್ಯಂತ ಕಠಿಣಕಾರ್ಯವೆನಿಸುವಂತೆ ಈರ್ವರ ಭಾವನೆಗಳಲ್ಲಿ ಅಭಿವ್ಯಕ್ತವಾಗುತ್ತಿತ್ತು.

## ವಿಭೂತಿಪುರುಷರ ವಿಶ್ವಪರ್ಯಟನ

ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಂಸ್ಥಾಪಿಸಿದ ವಿದ್ಯಾರ್ಥಿನಿಲಯಗಳಲ್ಲಿದ್ದು, ವಿದ್ಯಾಭ್ಯಾಸ ಮುಗಿಸಿ, ಪದವೀಧರರಾದ ಅನೇಕರು ಅಮೆರಿಕಾದಲ್ಲಿ ಉನ್ನತ ಉದ್ಯೋಗಗಳಲ್ಲಿ ಪ್ರತಿಷ್ಠಿತ ಸ್ಥಾನಗಳಲ್ಲಿ ನೆಲಗೊಂಡಿದ್ದಾರೆ.

ಶ್ರೀಗಳವರು ತಮ್ಮ ಮನೆ-ಮನಗಳನ್ನು ಬೆಳಗಲು ದಯಮಾಡಿಸುತ್ತಿರುವುದು ಅವರಲ್ಲಿ ಉತ್ಸಾಹ, ಸಂತೋಷಗಳನ್ನು ಉಕ್ಕಿಸಿತ್ತು. ಜಗದ್ಗುರುಗಳು ತಮ್ಮಲ್ಲಿಗೆ ಬರಬೇಕು, ತಮ್ಮ ಭಕ್ತಿಪೂರ್ವಕವಾದ ಆತಿಥ್ಯವನ್ನು ಸ್ವೀಕರಿಸಬೇಕು, ನಮ್ಮನ್ನು ಆಶೀರ್ವದಿಸಬೇಕು – ಎಂದು ಬಹು ದಿನಗಳಿಂದ ಕಾಣುತ್ತಿದ್ದ ಕನಸು ಅಂದು ನನಸಾಗಿತ್ತು. ಅದು ಅವರ ಜೀವನದಲ್ಲಿ ಅವಿಸ್ಮರಣೀಯ ಘಟನೆಯಾಯಿತು. ಎಲ್ಲರೂ ಒಟ್ಟಾಗಿ ಸೇರಿ ಶ್ರೀಗಳವರನ್ನು ಗೌರವಾದರ ಗಳಿಂದ ಹಾರ್ದಿಕವಾಗಿ ಸ್ವಾಗತಿಸಿದರು. ಯಾವ ಕೊರತೆಯೂ ಇಲ್ಲದ ಏರ್ಪಾಡು ಅವರಿಗಾಗಿ ಸಿದ್ಧಗೊಳಿಸಿದ್ದರು. ಭಾರತೀಯ ಸಂಸ್ಕೃತಿಯನ್ನು ಅವರು ಮರೆತಿರಲಿಲ್ಲ. ಅವರ ಅಪಾರ ಪ್ರೀತಿಪೂರ್ವಕ ಆತಿಥ್ಯದಲ್ಲಿ ಜಗದ್ಗುರುಗಳವರ ಪೂಜಾದಿಗಳಿಗೆ ಒಂದಿನಿತೂ ಕೊರತೆ – ಅರಕೆಯುಂಟಾಗದಂತೆ ಬಲು ಎಚ್ಚರಿಕೆ ವಹಿಸಿದ್ದರು. ಎಲ್ಲರನ್ನೂ ಆನಂದಸಾಗರದಲ್ಲಿ ಓಲಾಡಿಸಿ, ಮರುದಿನ ಸಂಜೆ ಅಲ್ಲಿಂದ ಲಾಸ್ ಏಂಜಲೀಸ್‌ಗೆ ತಲುಪಿದರು.

ಲಾಸ್ ಏಂಜಲೀಸ್‌ನಲ್ಲಿ –ಉತ್ತರ ಅಮೆರಿಕಾದಲ್ಲಿ ನೆಲಸಿದ ವೀರಶೈವ ಸಮಾಜದ ಒಂಬತ್ತನೇ ಅಧಿವೇಶನವನ್ನು ಹಮ್ಮಿಕೊಳ್ಳಲಾಗಿತ್ತು. ಆ ಅಧಿವೇಶನಕ್ಕೆ ಪೂಜ್ಯರನ್ನು ಆಹ್ವಾನಿಸಲಾಗಿತ್ತು. ಡಾ || ಎಂ. ಸಿ. ಮೋದಿಯವರು ಆ ಅಧಿವೇಶನಕ್ಕೆ ಇನ್ನೊಬ್ಬ ಆಹ್ವಾನಿತರು. ಬಹಳ ಉತ್ಸಾಹ ಸಂಭ್ರಮಗಳಿಂದ ಕೂಡಿದ ಮತ್ತು ಸಂಪೂರ್ಣವಾಗಿ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ, ವೀರಶೈವ ಪರಿಸರದಲ್ಲಿ ಅಧಿವೇಶನ ಪ್ರಾರಂಭವಾಯಿತು.

ಪ್ರಾರಂಭದ ಸಮಾರಂಭದಲ್ಲಿ ಜಗದ್ಗುರುಗಳು ಅಲ್ಲಿನ ವೀರಶೈವರಿಗೆ ಮನನೀಯವಾದ ಅನೇಕ ಅಂಶಗಳನ್ನು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿ, ಅವರಿಗೆ ಮಾರ್ಗದರ್ಶಕವಾದ ಮತ್ತು ಉದ್ಬೋಧಕವಾದ ಆಶೀರ್ವಚನವನ್ನಿತ್ತು ಎಲ್ಲರಿಗೂ ಕಲ್ಯಾಣದ ಅನುಭವ ಮಂಟಪ ದಲ್ಲಿದ್ದೇವೆಯೋ ಎಂಬ ಭಾವವನ್ನು ಉಂಟುಮಾಡಿದರು.

ಅನಂತರ ಮಧ್ಯಾಹ್ನದ ಮೇಲೆ ಒಂದು ಚರ್ಚಾಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮ ಗಳು ಯಶಸ್ವಿಯಾಗಿ ನಡೆದು ಆ ಅಧಿವೇಶನ ಮುಕ್ತಾಯಗೊಂಡಿತು.

ಲಾಸ್ ಏಂಜಲೀಸನ್ನು ಕೇಂದ್ರವಾಗಿಟ್ಟುಕೊಂಡು ಅಮೆರಿಕಾದ ಪ್ರಮುಖ ಸ್ಥಳಗಳನ್ನು ನೋಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜಗತ್ತಿನ ವಿಸ್ಮಯಕಾರೀ ಪ್ರೇಕ್ಷಣೀಯ ಸ್ಥಳವೆಂದು ಹೆಸರಾದ "ಡಿಸ್ನಿ ಲ್ಯಾಂಡ್"ಅನ್ನು ನೋಡಿದರು. "ಹರೇ ಕೃಷ್ಣ ಮಂದಿರ"ಕ್ಕೆ ಭೇಟಿ ನೀಡಿದರು.

ಒಂದೊಂದು ದಿನ ಒಬ್ಬೊಬ್ಬ ಭಕ್ತರ ಮನೆಯಲ್ಲಿ ಜಗದ್ಗುರುಗಳವರ ಪೂಜೆಯ ಏರ್ಪಾಡು ನಡೆದಿರುತ್ತಿತ್ತು. ಶ್ರೀಗಳವರಿಗೆ ಅದೇ ಅತ್ಯಂತ ಪ್ರಿಯವಾದ ಕಾರ್ಯಕ್ರಮವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪೂಜೆಯಲ್ಲಿ ಮಗ್ನರಾಗಿ ಕುಳಿತುಬಿಟ್ಟರೆ ತಲ್ಲೀನರಾಗಿ ಬಿಡುತ್ತಿದ್ದರು. ಪೂರ್ವ ನಿಯೋಜನೆಯಂತೆ ಹಮ್ಮಿಕೊಳ್ಳಲಾದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಡುವುದಕ್ಕೆ ಅದು ತೊಂದರೆಯಾಗುತ್ತಿತ್ತು. ಅದನ್ನು ಹೇಳುವಂತಿಲ್ಲ, ಬಿಡುವಂತಿಲ್ಲ. ಒಮ್ಮೆ ಸಂಗಡಿಗರೊಬ್ಬರು ಕೊಂಚ ಧೈರ್ಯವಹಿಸಿ ಆ ವಿಚಾರವನ್ನು ಸೂಕ್ಷ್ಮವಾಗಿ ತಿಳಿಸಿದರಂತೆ. ಅದಕ್ಕೆ ತಟ್ಟನೆ ಶ್ರೀಗಳವರು ಕೊಟ್ಟ ಉತ್ತರ –

"ನಿಜ ನಾವು ನೋಡುವುದಕ್ಕೆ ಬಂದಿದ್ದೇವೆ. ಆದರೆ ಪೂಜೆಯನ್ನು ಮೊಟಕುಗೊಳಿಸಿ ನೋಡುವಂತಹದು ಏನೂ ಇಲ್ಲ ! ಇಷ್ಟು ಅನುಕೂಲಗಳು ಪೂಜೆಗೆ ಇಲ್ಲಿ ಒದಗಿದಾಗ ಅದೇ ನನ್ನ ಮೊದಲ ನೋಟ. ಇದಕ್ಕೆ ಹೊಂದಿಕೊಂಡಂತೆ ಉಳಿದ ನೋಟವೆಲ್ಲಾ ..... ನಾವು ನೋಡಲು ಹೋಗುವುದೆಲ್ಲ ಭಗವಂತನ ವ್ಯಕ್ತರೂಪ....ಆದರೆ ನಾನು ಲಿಂಗಪೂಜೆ ಯಲ್ಲಿ ಈ ವ್ಯಕ್ತ ಜಗತ್ ಸೃಷ್ಟಿಕರ್ತನನ್ನು ಕಾಣುತ್ತೇನೆ. ಅದೇ ದಿವ್ಯ ನೋಟ ...."

ಆದರೂ ಜೊತೆಗೆ ಬಂದವರ ಮನಸ್ಸು ಖಿನ್ನವಾಗಲು ಅವಕಾಶ ಕೊಡುತ್ತಿರಲಿಲ್ಲ. ಪೂಜೆ ಮುಗಿಸಿ, ನಗುತ್ತ, ನಗಿಸುತ್ತ ಸ್ಥಳ ಸಂದರ್ಶನಕ್ಕೆ ಹೋಗಿಯೇ ಹೋಗುತ್ತಿದ್ದರು.

ಲಾಸ್ ಏಂಜಲೀಸ್‌ನ ಖಾಸಗಿ ವೈದ್ಯಕೇಂದ್ರವೊಂದಕ್ಕೆ ಜಗದ್ಗುರುಗಳವರು ಭೇಟಿ ಕೊಟ್ಟದ್ದು ಬಹಳ ಪ್ರಮುಖವಾದ ಘಟನೆ. ಮೈಸೂರಲ್ಲಿ ತಾವೇ ಒಂದು ಆಸ್ಪತ್ರೆಯನ್ನು ರೂಪುಗೊಳಿಸುತ್ತಿದ್ದ ಆ ಕಾಲದಲ್ಲಿ, ಅಲ್ಲಿನ ಆ ಆಸ್ಪತ್ರೆಯನ್ನು ನೋಡಲು ತುಂಬ ಕುತೂಹಲ ಗೊಂಡಿದ್ದರು. ಅದು ಮುನ್ನೂರು ಹಾಸಿಗೆಗಳುಳ್ಳ ಚಿಕ್ಕ ಚೊಕ್ಕ ಆಸ್ಪತ್ರೆಯಾದರೂ ಅಲ್ಲಿನ ಅತ್ಯಾಧುನಿಕ ವ್ಯವಸ್ಥೆ ಅಚ್ಚರಿಯನ್ನುಂಟುಮಾಡುವಂತಿತ್ತು. ಅಲ್ಲಿನ ಸುಸಜ್ಜಿತ

ಚಿಕಿತ್ಸಾ ಕ್ರಮ ವೈದ್ಯವಿಜ್ಞಾನದ ಮಹತ್ತರ ಸಾಧನೆಯನ್ನು ಮನದಟ್ಟು ಮಾಡುವಂತಿತ್ತು. ಅಲ್ಲಿ ಹೃದಯ ರೋಗಿಯೊಬ್ಬನಿಗೆ ಚಿಕಿತ್ಸೆ ಮಾಡುತ್ತಿರುವುದನ್ನು ಶ್ರೀಗಳವರು ಹತ್ತಿರದಿಂದ ವೀಕ್ಷಿಸಿದರು. ತಾವು ಕಟ್ಟಲಿರುವ ಆಸ್ಪತ್ರೆ ಇಷ್ಟು ಅತ್ಯಾಧುನಿಕವಾಗಿರಬೇಕು –ಎಂಬ ಅಪೇಕ್ಷೆ ತಲೆ ಎತ್ತಿ ನಿರ್ಧಾರದ ರೂಪ ತಳೆಯಲಾರಂಭಿಸಿತು....

ಅಂದು ನ್ಯೂಯಾರ್ಕ್ ನಗರದಲ್ಲಿ ಶ್ರೀಗಳವರು ತಮ್ಮ ಬೆಳಗಿನ ಸ್ನಾನ ಮುಗಿಸಿದಾಗ ಹೇಗಿದ್ದರೆಂದರೆ –ಸರಿಯಾಗಿ ನಿಲ್ಲಲೂ ಆಗುತ್ತಿರಲಿಲ್ಲ. ಎಲ್ಲರಿಗೂ ಗಾಬರಿ. ಶ್ರೀಗಳವರ ಕರಕಮಲ ಸಂಜಾತರಾದ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರರೇ ಅವರನ್ನು ಅಗಲದೆ, ಸದಾ ಪಕ್ಕದಲ್ಲಿಯೇ ಇರುತ್ತಿದ್ದರು.

ಒಮ್ಮೆ ಅವರು ಸ್ನಾನ ಮುಗಿಸಿದ ಬಳಿಕ ಅವರ ಕರಕಮಲ ಸಂಜಾತರು ತಾವೇ ಮೈ ಒರೆಸಿ ಪೂಜೆಗೆ ಕರೆದೊಯ್ಯುತ್ತಿರುವಾಗ, ಹಿಂದೆಯೇ ಬರುತ್ತಿದ್ದ ಸಂಗಡಿಗರಿಗೆ –

"ಬಿದ್ದುಹೋಗೋ ಈ – body – ದೇಹಕ್ಕೆ ಏನೆಲ್ಲ ಉಪಚಾರ! ಎಂದು ಏನೋ ಎಂತೋ! ಇದಕ್ಕೆ ಇಷ್ಟೆಲ್ಲ ಪ್ರಾಮುಖ್ಯತೆ !....ಅದಿರಲಿ....ಇದರಿಂದಾಗಿ – ಈ ದೇಹದಿಂದಾಗಿ ನನಗೆಷ್ಟು ತೊಂದರೆ"

–ಎಂದು ಶ್ರೀಗಳವರು ನುಡಿದಾಗ, ಹೀಗೆ ನುಡಿದವರು ದೇಹಧಾರಿ ಶಿವರಾತ್ರಿ ರಾಜೇಂದ್ರರೋ ಅಥವಾ ಒಳಗಿರುವ ಇನ್ನಾರೋ ಎಂಬುದು ಯಾರಿಗೂ ಹೊಳೆಯದಾಯಿತು!

ಅಂದು ಬೆಳಗಿನ ಪೂಜೆ - ಪ್ರಸಾದಗಳ ಬಳಿಕ ಬರತೊಡಗಿದ ದರ್ಶನಾರ್ಥಿಗಳೊಂದಿಗೆ ಒಂದೆರಡು ಗಂಟೆಗಳು ಕಳೆದಿರಬಹುದು. ಇದ್ದಕ್ಕಿದ್ದಂತೆ ಶ್ರೀಗಳವರು –

"ಸ್ವಾಮಿ ರಾಮಾ ಅವರ ಆಶ್ರಮಕ್ಕೆ ಈ ದಿನವೇ ಹೋಗೋಣ"

–ಎಂದು ಹೇಳಿ, ಕೂಡಲೇ ಇಲ್ಲಿಂದ ಸ್ವಾಮೀ ರಾಮಾ ಅವರು ಇರುವ ಪೆನ್ಸಿಲ್‌ವೇನಿಯಾ ಎಷ್ಟು ದೂರವಿದೆ ಮುಂತಾದ್ದನ್ನೆಲ್ಲಾ ತಿಳಿದುಕೊಳ್ಳುವಂತೆ ಹೇಳಿಬಿಟ್ಟರು!

ಒಂದು ದಿನವಾದರೂ ವಿಶ್ರಾಂತಿ ಪಡೆಯುವ ಅಗತ್ಯ ಎದ್ದುಕಾಣುತ್ತಿತ್ತು. ಆದರೆ ಶ್ರೀಗಳವರು ತೀರ್ಮಾನಿಸಿಯೇಬಿಟ್ಟರು, ಅಂದೇ ಹೋಗೋಣ – ಎಂದು.

ಅಲ್ಲಿ ನಡೆದುದನ್ನು ಶ್ರೀಗಳವರ ಜೊತೆಗೆ ವಿದೇಶಕ್ಕೆ ತೆರಳಿದ್ದ ಕುಂದೂರು ಮಠಾಧ್ಯಕ್ಷರಾದ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮೀಜಿಯವರು ಹೇಳುತ್ತಾರೆ –

ನ್ಯೂಯಾರ್ಕ್‌ನಿಂದ ಪೆನ್ಸಿಲ್‌ವೇನಿಯಾ ಸುಮಾರು ನಾಲ್ಕುನೂರು ಕಿ.ಮೀ. ದೂರ. ಮುಖ್ಯ ತೊಡಕು ಏನೆಂದರೆ –ಸ್ವಾಮೀ ರಾಮಾ ಅವರನ್ನು ನೇರವಾಗಿ ಹೋಗಿ ನೋಡುವಂತಿಲ್ಲ. ಒಂದೆರಡು ತಿಂಗಳು ಮುಂಚೆಯೇ ಅವರ ಸಮಯವನ್ನು ಕಾದಿರಿಸುವ

ಪದ್ಧತಿ ! ಹಾಗಿಲ್ಲದೆ ಅವರನ್ನು ನೋಡಲು ಸಾಧ್ಯವೇ ಇಲ್ಲವೆಂದು ಅವರ ಕಾರ್ಯದರ್ಶಿ ಹೇಳಿದರೂ ಅವರನ್ನು ನೋಡಲು ಬರುವವರು ಯಾರೆಂದು ತಿಳಿಸಿದ ಮೇಲೆ –ಆಯಿತು, ಬನ್ನಿ ನೋಡೋಣ ಎಂದರು.

ಅವರ ಸೂಚನೆಯ ಮೇರೆಗೆ ಸಂಜೆ ಐದು ಗಂಟೆಗೆಲ್ಲಾ ಪೆನ್ಸಿಲ್‌ವೇನಿಯಾದಲ್ಲಿರಬೇಕು.

ಇಷ್ಟಾದರೂ ಸ್ವಾಮಿ ರಾಮಾ ಅವರ ಸಂದರ್ಶನ ಸಾಧ್ಯವೇ ಎಂಬ ಅನುಮಾನ. ಆದರೆ ಶ್ರೀಗಳವರ ಮುಖದಲ್ಲಿ ವಿಶಿಷ್ಟ ಭರವಸೆ ತುಂಬಿತ್ತು. ಒಂದು ಅಧ್ಯಾತ್ಮ ಚೇತನ ಮತ್ತೊಂದು ಅಂಥದೇ ಚೇತನವನ್ನು ಸಂದರ್ಶಿಸುವ ತವಕ ಅವರ ಮಾತು ಮಾತಿನಲ್ಲಿಯೂ ಒಡೆದು ಕಾಣುತ್ತಿತ್ತು.

ಆದರೆ ಮಾರ್ಗಮಧ್ಯದಲ್ಲಿ ಅರ್ಧಗಂಟೆ ವಿಳಂಬವಾಗುವ ಘಟನೆಯೊಂದು ನಡೆಯಿತು –

ಕೆಲವರು ಅಮೇರಿಕಾದ ಮಹಿಳೆಯರು ಅಲ್ಲಿ ಒಂದು ಕಡೆ ದೇವೀ ಆರಾಧನೆಯ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು. ಆ ಸ್ಥಳಕ್ಕೆ ಸಮೀಪದಲ್ಲಿಯೇ ಶ್ರೀಗಳವರಿರುವ ಕಾರು ನಿಲ್ಲಬೇಕಾಗಿಬಂದಿತು. ಅಷ್ಟರಲ್ಲಾಗಲೆ ಇಂತಹ ಒಬ್ಬರು ಸ್ವಾಮಿಗಳು ಭಾರತದಿಂದ ಅಮೇರಿಕಾಕ್ಕೆ ಬಂದಿದ್ದಾರೆಂಬ ವಿಷಯವನ್ನು ಪತ್ರಿಕೆಗಳ ಮೂಲಕ ತಿಳಿದಿದ್ದ ಅಲ್ಲಿನ ಮಹಿಳೆಯರು ಆ ಸ್ವಾಮಿಗಳು ಇವರೇ ಎಂದು ತಿಳಿದು, ಶ್ರೀಗಳವರ ಕಾರು ನಿಂತಿದ್ದಲ್ಲಿಗೆ ಬಂದುಬಿಟ್ಟರು !

ಶ್ರೀಗಳವರು ಅಲ್ಲಿನ ಪೂಜಾ ಸ್ಥಳಕ್ಕೆ ಹೋಗಲೇಬೇಕಾಯಿತು.

ಅಲ್ಲಿನವರೊಂದಿಗೆ ಅರ್ಧಗಂಟೆ ಕಳೆಯಲೇಬೇಕಾಯಿತು. ಸಂಗಡಿಗರಿಗೆಲ್ಲಾ ವಿಳಂಬವಾಗುತ್ತಿದೆಯಲ್ಲಾ ಎಂಬ ಕಾತರ ....

ಸ್ವಾಮಿ ರಾಮಾ ಅವರ ಆಶ್ರಮವನ್ನು ತಲುಪಿದಾಗ ಸಂಜೆ ಐದೂವರೆ ಗಂಟೆ !

ಆದರೆ ಅಲ್ಲಿ ದಂಗುಬಡಿಸಿದ ವಿಷಯವೆಂದರೆ –

–ಸ್ವಾಮಿ ರಾಮಾ ಅವರೇ ಶ್ರೀಗಳವರ ಆಗಮನವನ್ನು ನಿರೀಕ್ಷಿಸುತ್ತ ಅವರನ್ನು ಸಮೀಪಿಸಿದುದು ! ಎಲ್ಲರಿಗೆ –ಅಂದರೆ ಜಗದ್ಗುರುಗಳ ಜೊತೆಗೆ ಬಂದಿದ್ದವರಿಗೆಲ್ಲಾ ಕಣ್ಣಮುಂದೆ ಒಂದು ಅಘಟಿತ ಘಟನೆ ಜರುಗಿತು !

ಸ್ವಾಮಿ ರಾಮಾ ಅವರು ಶ್ರೀಗಳವರನ್ನು ಅದೆಷ್ಟೋ ವರ್ಷಗಳಿಂದ ಬಲ್ಲವರಂತೆ ಅಕ್ಕರೆಯಿಂದ ಚಾಚಿ ತಬ್ಬಿಕೊಂಡರು !

ಕ್ಷಣಾರ್ಧದಲ್ಲಿ ಯಾರ ಮಧ್ಯಸ್ಥಿಕೆಯೂ ಇಲ್ಲದೆ ಹಳೆಯ ಗೆಳೆಯರಂತೆ ಈರ್ವರೂ ವರ್ತಿಸಿದ ಪರಿಯನ್ನು ಕಂಡು ಉಳಿದವರ ಕಣ್ಣುಗಳಲ್ಲಿ ಅಪ್ರಯತ್ನಪೂರ್ವಕವಾಗಿಯೇ

ಆನಂದಾಶ್ರುಗಳು.

ಇಬ್ಬರೂ ಕೈ ಕೈ ಹಿಡಿದುಕೊಂಡು ಒಳಹೋದರು. ಎಲ್ಲರೂ ಮೌನವಾಗಿ ಹಿಂಬಾಲಿಸಿದರು.

ಶ್ರೀಗಳೀರ್ವರೂ ಅಕ್ಕಪಕ್ಕ ಕುಳಿತುಕೊಂಡರು. ಹತ್ತಿರದಲ್ಲೇ ಉಳಿದವರೆಲ್ಲ ಕುಳಿತರು. ಎಲ್ಲರಿಗೂ 'ಶ್ರೀಗಳವರು ಸ್ವಾಮಿ ರಾಮಾ ಅವರನ್ನು ಏನು ಕೇಳುತ್ತಾರೆ' –ಎಂದು ಕುತೂಹಲ ತಕಪಕಿಸುತ್ತಿತ್ತು. ಯಾರೂ ಊಹಿಸದೇ ಇದ್ದುದನ್ನು ಶ್ರೀಗಳವರು ಕೇಳಿದರು –

"How  to realise God ? Kindly enlighten me...."

(ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು ಹೇಗೆ ? ದಯವಿಟ್ಟು ತಿಳಿಸಿ....)

ಅದಕ್ಕೆ ಸ್ವಾಮಿ ರಾಮಾ ಅವರು ನಸುನಗುತ್ತ –

"You have already known it ".

(ನಮಗೆ ಈಗಾಗಲೇ ಅದು ಮನವರಿಕೆಯಾಗಿದೆಯಲ್ಲಾ !)

– ಎಂದರು. ಅತ್ಯಂತ ಆತ್ಮೀಯತೆಯಿಂದ ಶ್ರೀಗಳವರನ್ನು ಅಪ್ಪಿಕೊಂಡರು. ಸ್ವಲ್ಪ ಹೊತ್ತಾದ ಮೇಲೆ ಶ್ರೀಗಳವರು ಹೇಳಿದರು –

"I am tired and exhausted. This body and the spirit that lives in it need rest."

(ನಾನು ಈಗ ಆಯಾಸಗೊಂಡಿದ್ದೇನೆ. ಶಕ್ತಿ ಕುಂದಿದೆ. ಈ ದೇಹಕ್ಕೆ ಇನ್ನು ವಿಶ್ರಾಂತಿ ಬೇಕು).

ಆಗ ತುಂಬ ಮುಕ್ತವಾಗಿ ನಕ್ಕ ಸ್ವಾಮಿ ರಾಮಾ ಅವರು ಒಂದೆರಡು ಕ್ಷಣದವರೆಗೆ ಮೌನವಾಗಿದ್ದು, ನಂತರ –

"All right. You  will know when you need my help. You just remember me. I will establish contact with you."

(ಆಗಲಿ, ನಿಮಗೆ ನನ್ನ ಅಗತ್ಯ ಯಾವಾಗ ಬೇಕಾಗುತ್ತದೆಂದು ನಿಮಗೇ ಹೊಳೆಯುತ್ತದೆ. ಆಗ ನೆನಪಿಸಿಕೊಳ್ಳಿ. ನಿಮ್ಮೊಂದಿಗೆ ನಾನು ಸಂಪರ್ಕಿಸುತ್ತೇನೆ.)

ಇಷ್ಟು ಮಾತುಕತೆಯಾದರೆ, ಉಳಿದವರನ್ನು ಬಿಟ್ಟು, ಅವರಿಬ್ಬರೇ ಸ್ವಲ್ಪ ಹೊತ್ತು ಏಕಾಂತದಲ್ಲಿದ್ದರು. ಆಗ ಅವರೀರ್ವರ ನಡುವೆ ಏನು ನಡೆಯಿತೋ ಅದು ಅವರಿಗೇ ಗೊತ್ತು ! ....

* * *

ಲಂಡನ್ ನಗರದಲ್ಲಿ ಶ್ರೀಗಳವರು ತಮ್ಮ ಶಿಷ್ಯರಲ್ಲೊಬ್ಬರಾದ ಡಾಕ್ಟರ್ ಶಿವಮೂರ್ತಿ ಎಂಬುವರ ಮನೆಯಲ್ಲಿ ವಾಸ್ತವ್ಯ ಮಾಡಿದರು. ಶಿವಮೂರ್ತಿಯವರು ಸ್ವತಃ ವೈದ್ಯರೇ ಆದರೂ ಅದೇಕೊ ಅವರು ಶ್ರೀಗಳವರನ್ನು ನೋಡಿದ ಬಳಿಕ ತಮ್ಮ ವೈದ್ಯಮಿತ್ರರೊಬ್ಬರಿಗೆ ತೋರಿಸಬೇಕು ಎಂದು ತಮ್ಮಲ್ಲಿಯೇ ತೀರ್ಮಾನ ಮಾಡಿಕೊಂಡು ಆ ವಿಷಯವಾಗಿ ಉಳಿದವ ರೊಂದಿಗೆ ಪ್ರಸ್ತಾಪ ಮಾಡಿದರು. ಅದಕ್ಕೆ ಎಲ್ಲರೂ ಒಕ್ಕೊರಲಿನಿಂದ ಒಪ್ಪಿದರು.

ಶಿವಮೂರ್ತಿಯವರ ಆ ವೈದ್ಯಮಿತ್ರರೂ ಭಾರತೀಯರೇ.

ಅವರ ಹೆಸರು ಡಾ. ಸಿಂಗ್ ಎಂದು. ಸೈನ್ಯದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸಿ ಆಗಷ್ಟೇ ನಿವೃತ್ತರಾಗಿದ್ದರು. ಶಿವಮೂರ್ತಿಯವರು ಅವರನ್ನು ಕೇಳಿಕೊಂಡುದೇ ತಡ. ಅವರು ಬಹಳ ಸಂತೋಷದಿಂದಲೇ ಒಪ್ಪಿ ಬಂದರು.

ಶ್ರೀಗಳವರೊಂದಿಗೆ ಸ್ವಲ್ಪ ಹೊತ್ತು ಔಪಚಾರಿಕವಾಗಿ ಮಾತನಾಡಿದರು.

ಅನಂತರ ಒಂದೆರಡು ದಿನಗಳವರೆಗೆ ಡಾ. ಸಿಂಗ್ ಅವರು ಶ್ರೀಗಳವರನ್ನು ತಮ್ಮ ಹಲವು ಬಗೆಯ ಪರೀಕ್ಷೆಗಳಿಗೆ ಒಳಪಡಿಸಿದರು.

ಡಾ. ಸಿಂಗ್ ಅವರು ಒಂದಾದಮೇಲೊಂದರಂತೆ ತಮ್ಮ ಪರೀಕ್ಷೆಗಳನ್ನು ಮುಂದುವರಿಸಿಯೇ ಮುಂದುವರಿಸಿದರು. ಆದರೆ ಆರಂಭದಲ್ಲಿದ್ದ ಅವರ ಮುಖದ ಮೇಲಿನ ಗೆಲುವು ಅಂದು ತಮ್ಮ ಪರೀಕ್ಷೆಯ ಫಲಿತಾಂಶವನ್ನು ತಿಳಿಸುವಾಗ ಮಾಯವಾಗಿ ಅಲ್ಲಿ ಪ್ರಶ್ನೆ ಮತ್ತೆ ಆಶ್ಚರ್ಯಸೂಚಕಗಳೆರಡೂ ಮೂಡಿದ್ದುವು !

ಏಕೆಂದರೆ ಅಷ್ಟು ದೀರ್ಘ ಪರೀಕ್ಷೆಯ ನಂತರವೂ ಅವರು ಯಾವ ಒಂದು ತೀರ್ಮಾನಕ್ಕೂ ಬರಲಾಗಿರಲಿಲ್ಲ !

ಎರಡು ದಿನಗಳಪರ್ಯಂತ ಅವರು ಏನೊಂದೂ ಮಾತನಾಡದಿದ್ದುದರಿಂದ ಎಲ್ಲರ ಕುತೂಹಲಭರಿತ ಚಿಂತೆ, ಗಾಬರಿಗಳನ್ನು ಹೇಳಲಾಸಲ್ಲ.

ಅಂದು ಶ್ರೀಗಳವರು ತಮ್ಮ ಆಸನದಲ್ಲಿ ಬಂದು ಕುಳಿತರು. ಎದುರಿಗೆ ಡಾ. ಸಿಂಗ್ ಅವರೂ ಕುಳಿತುಕೊಂಡರು. ಮಿಕ್ಕವರೆಲ್ಲ ಅನತಿದೂರದಲ್ಲಿ ಕುಳಿತುಕೊಂಡರು.

ಡಾ. ಸಿಂಗ್ ಹೇಳತೊಡಗಿದರು –

"I am one of the wellknown physicions here. And you have seen that I examined the Swamiji for over two days. Well, I am not convinced as to how the Swamiji is still alive inspite of the fact that not a single vital organ of his body is functioning normally ! For the first time in my life I am encountering a case of this nature ! It is a wonder ! I should say it is something against natural laws that govern human body !"

[ನಾನು ಇಲ್ಲಿ ಒಬ್ಬ ಹೆಸರಾಂತ ವೈದ್ಯ. ನೀವೇ ನೋಡಿದಿರಿ ನಾನು ಸ್ವಾಮೀಜಿಯವರನ್ನು ಈ ಎರಡು ದಿನಗಳ ಪರ್ಯಂತ ತಪಾಸಣೆ ಮಾಡಿದೆ. ಆದರೆ ಈಗ ನನ್ನನ್ನು ನಾನೇ ನಂಬಲಾಗುತ್ತಿಲ್ಲ ! ಅಂದರೆ ಇವರ ದೇಹದ ಯಾವುದೇ ಒಂದು ಪ್ರಮುಖ ಅಂಗವೂ ಸಾಮಾನ್ಯ ಸುಸ್ಥಿತಿಯಲ್ಲಿ ಕೆಲಸ ಮಾಡುತ್ತಿಲ್ಲವಾದರೂ ಇವರು ಜೀವಂತವಾಗಿದ್ದಾರೆ. ಇದೊಂದು ಆಶ್ಚರ್ಯ ! ಈ ರೀತಿಯ ವ್ಯಕ್ತಿಯೊಬ್ಬರನ್ನು ನಾನು ಭೇಟಿ ಮಾಡಿದ್ದು ನನ್ನ ಜೀವನದಲ್ಲಿ ಇದೇ ಮೊದಲು!]

ಶ್ರೀಗಳವರು ಈ ಮಾತುಗಳಿಂದ ಎಳ್ಳಷ್ಟೂ ವಿಚಲಿತರಾಗದೆ ಸುಮ್ಮನೆ ನಸುನಗುತ್ತಿದ್ದರು!

ಅಂದು –

ಮೈಸೂರಿನ ಇಟ್ಟಿಗೆಗೂಡಿನಲ್ಲಿ ವಾಸಿಸುತ್ತಿದ್ದ ಆಸ್ಥಾನ ಜ್ಯೋತಿಷಿ ಶ್ರೀ ಗಂಗಾಧರಶಾಸ್ತ್ರಿಯವರು ಇಪ್ಪತ್ತ ಎರಡನೆಯ ಜಗದ್ಗುರು ಪರಮ ಪೂಜ್ಯ ಲಿಂಗೈಕ್ಯ ಶ್ರೀ ಶ್ರೀ ಶಿವರಾತ್ರಿ ಮಹಾಸ್ವಾಮಿಗಳವರ ಜಾತಕ ಪರಿಶೀಲಿಸಿ ಹೀಗೆಯೇ ನುಡಿದಿದ್ದರು –

"ಏನಾಶ್ಚರ್ಯ! ಈ ಜಾತಕದ ಪ್ರಕಾರ ಅವರು ಕಾಲವಾಗಿ ಹತ್ತು ವರ್ಷಗಳೇ ಆಗಿರಬೇಕಲ್ಲಾ !!! ಅವರಿನ್ನೂ ಜೀವಂತವಾಗಿದ್ದಾರೆಂದರೆ ಯಾವುದೋ ದೈವೀಶಕ್ತಿ ಅವರನ್ನು ಎಂಥದೋ ಮಹತ್ತರ ಕಾರ್ಯಕ್ಕಾಗಿ ಉಳಿಸಿದೆ – ಶಿವನಿಚ್ಛೆ !"

ಈಗ ಲಂಡನ್‌ನಲ್ಲಿ, ಇಪ್ಪತ್ತುಮೂರನೆಯ ಜಗದ್ಗುರು ಪರಮ ಪೂಜ್ಯ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಬಗ್ಗೆ, ಸುಪ್ರಸಿದ್ಧ ವೈದ್ಯ ಡಾ. ಸಿಂಗ್ ಹೀಗೆಯೇ ನುಡಿದರು !

ಏನಾಶ್ಚರ್ಯ !!

## ಏಕಾಂತದಲ್ಲಿನ ಲೋಕಾಂತ

ವಿದೇಶದಿಂದ ಹಿಂದಿರುಗಿ ಬಂದ ಮೇಲೆ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಆರೋಗ್ಯ ದಿನದಿಂದ ದಿನಕ್ಕೆ ಸಾಯಂಕಾಲದ ಸೂರ್ಯನಂತೆ ಇಳಿಮುಖವಾಗುತ್ತಿತ್ತು. ಆದರೆ ಇದರ ಕಡೆಗೆ ಗಮನವನ್ನೇ ಹರಿಸದೆ, ಮಹಾಸಂಸ್ಥೆಯ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಲು, ಅನೇಕರ ಸಮಸ್ಯೆಗಳನ್ನು ಪರಿಹರಿಸಲು ಸದಾ ಮಗ್ನರಾಗಿಬಿಡುತ್ತಿದ್ದರು.

ಏಕಾಂತ ದೊರೆಯುವುದೇ ಅಪರೂಪ.

ಅಕಸ್ಮಾತ್ ಏಕಾಂತ ದೊರೆತಾಗ, ಶ್ರೀಗಳವರು ಅಂತರ್ಮುಖಿಗಳಾಗುತ್ತಿದ್ದರು – ಬೃಹತ್ ಸಂಸ್ಥೆಯಾಗಿ ವಿದ್ಯಾಪೀಠ ಬೆಳೆದಿದೆ. ವಿದ್ಯಾಪ್ರಸಾರಕ್ಕೆ ನಾಲ್ಕು ದಶಕಗಳಿಂದ

ತೊಡಗಿದ್ದುದು ಫಲ ನೀಡುತ್ತಿದೆ. ಅನೇಕ ತರುಣ ತರುಣಿಯರು ವಿದ್ಯಾವಂತರಾಗಿದ್ದಾರೆ. ಪ್ರತಿಭಾವಂತರು ಉನ್ನತ ಉದ್ಯೋಗಗಳಲ್ಲಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲೂ ಜನಜಾಗೃತಿ ಮೂಡಿದೆ ಎಂಬುದು ನಿಜ.

ಸಮಷ್ಟಿ ಜೀವ ಎತ್ತ ಸಾಗುತ್ತಿದೆ ?

ಲೌಕಿಕ ಸುಖಾಪೇಕ್ಷೆಯಿಂದ, ಸ್ವಾರ್ಥದಿಂದ, ಮನಸ್ಸುಗಳು ಸಂಕುಚಿತಗೊಳ್ಳುತ್ತಿವೆ. ಮಾನವ ಸಂಬಂಧಗಳಲ್ಲಿ ಬಿರುಕು ಬಿಡುತ್ತಿದೆ. ಅವಿಭಕ್ತ ಕುಟುಂಬಗಳು ಛಿದ್ರಛಿದ್ರವಾಗುತ್ತಿವೆ. ಸಹ ಮಾನವರ ಕಷ್ಟಗಳಿಗೆ ಮರುಗುವ ಮನಸ್ಸುಗಳಿಲ್ಲ, ಎಲ್ಲ ಬಂಜರು ಭೂಮಿಗಳಂತಾಗಿವೆ. ಪುರುಷಾರ್ಥಗಳಲ್ಲಿ ಪ್ರಥಮ ಸ್ಥಾನವನ್ನಾಕ್ರಮಿಸಿದ್ದ ಧರ್ಮ ಇಂದು ಒಂಟಿ ಕಾಲಿನ ಮೇಲೆ ನಿಂತಿದೆ. ಅದೂ ಕುಂಟುಕಾಲಾಗುತ್ತಿದೆ. ಜಗತ್ತು ಧರ್ಮವನ್ನು ಧಿಕ್ಕರಿಸಿ, ಎರಡು ಮಹಾಯುದ್ಧ ಗಳಲ್ಲಿ ಸರ್ವನಾಶದ ಅಂಚಿಗೆ ಬಂದಿದೆ. ವಿಜ್ಞಾನವೇನೋ ಅದ್ಭುತ ಪ್ರಗತಿ ಸಾಧಿಸಿದೆ. ಮಾನವಕುಲಕ್ಕೆ ಶ್ರೇಯಸ್ಸನ್ನುಂಟುಮಾಡುವ ದಾರಿಯಲ್ಲಿ ವಿಜ್ಞಾನ ಸಂಶೋಧನೆಗಳನ್ನು ಆವಿಷ್ಕಾರಗೊಳಿಸು ವಾಗ, ಅನಪೇಕ್ಷಿತವಾಗಿ, ಅನೂಹ್ಯ ಮಾರಕ ಸಂಶೋಧನೆಗಳೂ ಆವಿಷ್ಕಾರ ಗೊಂಡಿವೆ. ಇಡೀ ಮಾನವಕುಲ – ಅಷ್ಟೇಕೆ ಜೀವ ಸಂಕುಲವನ್ನೇ ನಾಮಾವಶೇಷಮಾಡುವ, ಇಡೀ ಜಗತ್ತು ಶೂನ್ಯವಾಗಿಬಿಡುವಂಥ ಮಾರಕಾಸ್ತ್ರಗಳು ರೂಪುಗೊಂಡಿವೆ. ಪ್ರತಿಯೊಬ್ಬನ ತಲೆಯ ಮೇಲೆ ಒಂಟಿ ಕೂದಲಿಗೆ ಕಟ್ಟಿದ ಹರಿತವಾದ ಕತ್ತಿ ತೂಗಾಡುತ್ತಿದೆ..... ಯಾವ ಕ್ಷಣದಲ್ಲಿ ನಡುನೆತ್ತಿ ಯನ್ನು ಸೀಳಿಕೊಂಡು ಹೋಗುತ್ತದೋ....

ಜ್ಞಾನರಹಿತ ವಿಜ್ಞಾನದಿಂದ ಐಹಿಕ ಸೌಖ್ಯಗಳು ವಿಪುಲವಾಗಿ ದೊರೆಯಬಹುದು. ಆದರೆ ಮನಸ್ಸಿನಲ್ಲಿ ಶಾಂತಿ, ಮಾನವ ಪ್ರೀತಿ, ಭೂತದಯೆಗಳು ಈ ವಿಜ್ಞಾನದಿಂದ ದೊರೆಯಲು ಸಾಧ್ಯವೇ ?

ಶಾಂತಿಗಿಂತ ಸಂಪತ್ತು ಬೇಕೆ ?

ಮನಶ್ಶಾಂತಿಯಿಲ್ಲದ ಸಂಪತ್ತು ವಿಪತ್ಕಾರಿ, ವಿನಾಶಕಾರಿ.

ಜನರ ಮನಸ್ಸಿನಲ್ಲಿ, ಅಂತರಾಳದ ಆಳದಲ್ಲಿ ಆರ್ತಧ್ವನಿ ಶಾಂತಿ ಶಾಂತಿ ಎಂದು ಚೀರುತ್ತಲೇ ಇದೆ. ಆದರೆ ಅದು ಅವರಿಗೇ ಕೇಳಿಸುತ್ತಿಲ್ಲ.

ಧರ್ಮ ಎಂದರೆ ದಾನ ಮಾಡುವುದು ಎಂದು ಎಷ್ಟೋ ಜನ ಸಾಮಾನ್ಯರು ಭಾವಿಸಿದ್ದಾರೆ. ಇನ್ನೂ ಕೆಲವರು ಧರ್ಮ ಎಂದರೆ ಮತಾಚರಣೆ, ಪೂಜೆ, ಪುನಸ್ಕಾರ, ಮಡಿ-ಮೈಲಿಗೆ ಎಂದು ಸೀಮಿತ ಅರ್ಥವಲಯದಲ್ಲಿ ಬಂದಿಗಳಾಗಿದ್ದಾರೆ.

ಧರ್ಮ ಎಂದರೆ ನಮ್ಮ ನಮ್ಮ ಮತಾಚಾರ್ಯರು ಬೋಧಿಸಿದ ಧರ್ಮವೇ ಶ್ರೇಷ್ಠ–

ಎಂದು ಧರ್ಮದ ತಿರುಳನ್ನು ಅನುಭವಿಸಿ, ಜೀವನದಲ್ಲಿ ಅಳವಡಿಸಿಕೊಳ್ಳದೆ, ಅನುಷ್ಠಾನಕ್ಕೆ ತಂದುಕೊಳ್ಳದೆ ಕೆಲವರು ತಿಳಿದವರೆಂದುಕೊಳ್ಳುವವರು ಅನ್ಯಮತದ್ವೇಷಿಗಳಾಗಿ ರಕ್ತಪಾತ ನಡೆಸಿರುವುದು, ಇನ್ನೂ ರಕ್ತ ಹರಿಸುತ್ತಿರುವುದು ಪ್ರಪಂಚದ ಚರಿತ್ರೆಯ ಪುಟಗಳಲ್ಲಿ ರಕ್ತಾಕ್ಷರಗಳಲ್ಲಿ ಲಿಖಿತಗೊಂಡಿದೆ.

ಧರ್ಮದ ನಿಜವಾದ ಅರ್ಥವನ್ನು ಕಾಲಕಾಲಕ್ಕೆ ಮಹಾತ್ಮರು, ಮಠಾಚಾರ್ಯರೂ, ಸಾಧು-ಸಂತರು, ಅನುಭವಿಗಳು, ಶರಣರು, ದಾಸಶ್ರೇಷ್ಠರು, ಸಂತ ಕವಿಗಳು, ಶಿವಕವಿಗಳು ಬೋಧಿಸುತ್ತಲೇ ಬಂದಿದ್ದಾರೆ. ಆದರೆ ಅವರು ಜಗತ್ತಿನ ರಂಗದಿಂದ ಮರೆಯಾಗುತ್ತಲೆ – ಸೂರ್ಯ ಮುಳುಗಿದ ಮೇಲೆಯೂ, ಪ್ರಕಾಶ ಸ್ವಲ್ಪ ಕಾಲ ಇರುವ ಹಾಗೆ, ಅಂಥವರು ಕಾಲವಾದ ಮೇಲೆ ಸ್ವಲ್ಪಕಾಲ ಆ ಬೋಧನೆಯ ಪ್ರಭಾವ ಜನಮನಸ್ಸಿನಲ್ಲಿರುತ್ತದೆ. ಆದರೆ –ತಿಳಿಗೊಂಡ ಕೊಳದಲ್ಲಿ ಮತ್ತೆ ನಿಧಾನವಾಗಿ ಪಾಚಿ ಹರಡುವಂತೆ, ಮಾನವರ ಮನಸ್ಸು ಲೌಕಿಕದ ಬರಡು ಸುಖಗಳತ್ತ ಹೊರಳಿ, ಅರಿಷಡ್ವರ್ಗದ ವಿಜೃಂಭಣೆಗೆ ಮನಸ್ಸನ್ನು ವೇದಿಕೆಯನ್ನಾಗಿ, ರಣಭೂಮಿಯನ್ನಾಗಿ ಮಾಡಿಕೊಂಡುಬಿಡುತ್ತಾರೆ....

ಕಗ್ಗಲ್ಲಿನಿಂದ ಕಮನೀಯವಾದ ಪ್ರತಿಮೆ, ಅದರಲ್ಲೂ ದೇವತಾ ವಿಗ್ರಹ ಮೂಡ ಬೇಕಾದರೆ ಮೇಲಿಂದ ಮೇಲೆ, ಮೇಲಿಂದ ಮೇಲೆ ಉಳಿಯಿಂದ ಚಾಣದಿಂದ ಪೆಟ್ಟು ಕೊಡುತ್ತಲೇ ಇರಬೇಕು, ಕೆತ್ತುತ್ತಲೇ ಇರಬೇಕು. ಆದರೆ ಅತ್ಯಂತ ಏಕಾಗ್ರತೆಯಿಂದ ಕೆತ್ತನೆ ಕೆಲಸ ನಡೆಯಬೇಕು...

ಹೀಗೆ ಮಾನವನ ಮನಸ್ಸು ಧರ್ಮಭೂಯಿಷ್ಠವಾಗಬೇಕಾದರೆ, ಅರಿಷಡ್ವರ್ಗವನ್ನು ಸಂಪೂರ್ಣ ಮೂಲೋತ್ಪಾಟನೆ ಮಾಡಲಾಗದಿದ್ದರೂ, ಆ ಆರು ಶತ್ರುಗಳನ್ನು ನಿಯಂತ್ರಣ ದಲ್ಲಿಟ್ಟುಕೊಳ್ಳುವ ಕಲೆ - ಧರ್ಮ ಚಿಂತನೆಯಿಂದ ಸಾಧ್ಯ.

ಅದಕ್ಕಾಗಿ ಆಗಿಂದಾಗ್ಗೆ, ಮೇಲಿಂದಮೇಲೆ ಧರ್ಮದ ಬಗ್ಗೆ ಪ್ರಚಾರ, ಪ್ರವಚನ, ಧರ್ಮ ತತ್ವಗಳ ವಿವೇಚನೆ, ಗೋಷ್ಠಿಗಳು ನಡೆಯುತ್ತಲೇ ಇರಬೇಕು....

ಈ ಸದುದ್ದೇಶದಿಂದ ೧೯೭೪ರಷ್ಟು ಹಿಂದೆಯೂ ತಾವು 'ಶರಣ ತತ್ವ ಪ್ರಚಾರ ಸಮಿತಿ' ಸ್ಥಾಪಿಸಿ ಯತ್‌ಕಿಂಚಿತ್ ಸೇವೆ ಸಲ್ಲಿಸುತ್ತಿರುವುದು ನೆನಪಿಗೆ ಬಂದಿತು. ಆದರೆ ಇನ್ನೂ ವ್ಯಾಪಕವಾಗಿ ಹಳ್ಳಿ ಹಳ್ಳಿಗಳಲ್ಲಿ ಶರಣ ತತ್ವ ಪ್ರಚಾರವಾಗಬೇಕೆಂಬ ಮತ್ತು ಆ ಮೂಲಕ ಮಾನವಧರ್ಮದ ಮೌಲ್ಯಗಳು ಅನುಷ್ಠಾನಗೊಳ್ಳಬೇಕೆಂಬ ಅದಮ್ಯ ಅಭೀಪ್ಸೆಯಿಂದ ಶ್ರೀಗಳವರು ಹತ್ತು ಲಕ್ಷ ರೂಪಾಯಿಗಳ ಪುದುವಟ್ಟನ್ನಿಟ್ಟು "ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ" ಯೋಜನೆ ರೂಪಿಸಿದರು. ಅಷ್ಟೇ ಅಲ್ಲ ಇದರ ವಿಸ್ತೃತರೂಪವೋ ಎಂಬಂತೆ ಹೆಚ್ಚಿನ ಧಾರ್ಮಿಕ ಕಾರ್ಯಬಾಹುಳ್ಯವನ್ನು ಹಮ್ಮಿಕೊಳ್ಳಲು "ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು" ಎಂಬ ಸಂಸ್ಥೆಯ ಸ್ವರೂಪವನ್ನು ನಿರ್ಧರಿಸಿದರು.

'ಜೆ.ಎಸ್.ಎಸ್. ಕಲಾಮಂಟಪ'ದ ಮೂಲಕ ಶ್ರೇಷ್ಠ ಶರಣರ ಜೀವನಾಧಾರಿತ ನಾಟಕಗಳನ್ನು ಸುತ್ತಮುತ್ತ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರದರ್ಶನ ಮಾಡುತ್ತಿದೆ. ಧಾರ್ಮಿಕ ವಿಷಯಗಳ ಪ್ರಚಾರವನ್ನೇ ಪ್ರಧಾನ ಆಶಯವನ್ನಾಗುಳ್ಳ "ಪ್ರಸಾದ" ದ್ವೈಮಾಸಿಕ ಪತ್ರಿಕೆಯನ್ನೂ ನಡೆಸಿಕೊಂಡು ಬರಲಾಗುತ್ತಿದೆ.

ಈಗ ಪ್ರಾರಂಭ ಅಷ್ಟೆ. ಇದು ಏನೇನೂ ಸಾಲದು, ಇನ್ನೂ ವ್ಯಾಪಕವಾಗಿ, ನಿರಂತರವಾಗಿ ನಡೆದುಕೊಂಡು ಬರಬೇಕು. ಜನಜೀವನ ಹಸನಾಗಬೇಕು, ಶಿವಮುಖ ವಾಗಬೇಕು – ಎಂದು ಹೀಗೆಲ್ಲಾ ಏಕಾಂತದಲ್ಲಿರುವಾಗ ಯೋಚನಾಲಹರಿಗಳ ಮೇಲೆ ವಿಹರಿಸುತ್ತಿದ್ದರು.

## ಋಷಿ ಸದೃಶ ರಾಜೇಂದ್ರ ಶ್ರೀಗಳು ಹಾಗೂ ರಸಋಷಿಗಳ ಮಹಾಸಂಗಮ

ಇನ್ನು ಕೆಲವೇ ದಿನಗಳಲ್ಲಿ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಎಪ್ಪತ್ತು ವರ್ಷಗಳು ತುಂಬುತ್ತವೆ. ಮಹಾ ವೈಭವದಿಂದ, 'ನ ಭೂತೋ ನ ಭವಿಷ್ಯತಿ' – ಎಂಬ ಹಾಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಯಿತು. 'ಅರ್ಚನ' – ಎಂಬ ಬೃಹತ್ ಅಭಿನಂದನ ಗ್ರಂಥವನ್ನು ಪ್ರಕಟಿಸಲಾಯಿತು.

ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಅವರ ಅಮೃತ ಮಹೋತ್ಸವ ಮತ್ತು ಪಟ್ಟಾಧಿಕಾರ ಸುವರ್ಣ ಮಹೋತ್ಸವವನ್ನು ಪೂಜ್ಯರ ಜನ್ಮದಿನವಾದ ೨೯-೮-೧೯೮೬ರಂದು ಆಚರಿಸಿದ ಶುಭ ಸಂದರ್ಭದಲ್ಲಿ ರಾಷ್ಟ್ರಕವಿ, ನಾಡಿನ ಮಹಾಕವಿ ಶ್ರೀ ಕುವೆಂಪು ಅವರು ಯಾವುದೇ ಇಂಥ ಸಮಾರಂಭಕ್ಕೆ ಆಗಮಿಸಲು ಒಪ್ಪದವರು, ಅತ್ಯಂತ ಸಂತಸದಿಂದ, ಪೂಜ್ಯರ ಈ ಮಹಾನ್ ಸಮಾರಂಭಕ್ಕೆ ಆಗಮಿಸಿ, "ಅರ್ಚನ" ಅಭಿನಂದನ ಗ್ರಂಥವನ್ನು ಬಿಡುಗಡೆ ಮಾಡಿ, ಮಾಡಿದ ಭಾಷಣ –

"ಎಲ್ಲರಿಗೂ ನಮಸ್ಕಾರ.

ಸುತ್ತೂರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರ ಎಪ್ಪತ್ತನೆಯ ವರ್ಷದ ವರ್ಧಂತಿ ಸಮಾರಂಭಕ್ಕೆ ನಾನು ಬಂದಿರುವುದು ನಿಮ್ಮಲ್ಲಿ ಅನೇಕರಿಗೆ ಹೇಗೋ ಹಾಗೆ ಸ್ವತಃ ನನಗೇ ಆಶ್ಚರ್ಯವನ್ನುಂಟುಮಾಡಿದೆ ! ಅದಕ್ಕೆ ಕಾರಣ, ಶ್ರೀ ರಾಮಕೃಷ್ಣ ಮಹಾ ಸಂಘ ವನ್ನುಳಿದು ಬೇರೆ ಯಾವುದೇ ಮಠ, ದೇವಸ್ಥಾನಗಳಿಗೆ ಎಂದೆಂದೂ ಹೋಗಿ ಅಲ್ಲಿನ ಯಾವುದೇ ಕಾರ್ಯಕ್ರಮಗಳಲ್ಲಿ ನಾನು ಇದುವರೆಗೂ ಭಾಗವಹಿಸದೇ ಇದ್ದದ್ದು !

ಇಂದಾದರೂ ಈ ಸಭೆಗೆ ನಾನು ಬಂದದ್ದಕ್ಕೆ ಎರಡು ಕಾರಣಗಳಿವೆ.

ಒಂದು, ಕಳೆದ ಎಪ್ಪತ್ತು-ಎಂಬತ್ತು ವರ್ಷಗಳಿಂದ ಕರ್ನಾಟಕದ ನಾನಾ ಭಾಗಗಳಲ್ಲಿ ವೀರಶೈವಧರ್ಮದ ವಿವಿಧ ಸಂಪ್ರದಾಯಗಳ ಸಾಧು ಸಂತರು ಭರತಖಂಡದಲ್ಲಿಯೇ ಅಭೂತ

ಪೂರ್ವವಾದ ಪ್ರಮಾಣದಲ್ಲಿ, ವಿಧಿವಿಧಾನಗಳಲ್ಲಿ ಶಾಲಾ ಕಾಲೇಜುಗಳನ್ನೂ, ಅವುಗಳಲ್ಲಿ ಓದುವ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಜಾತಿ ಮತ ಭೇದವಿಲ್ಲದೆ ಊಟ ವಸತಿಗಳನ್ನೂ ಏರ್ಪಡಿಸಿ ಲಕ್ಷ ಲಕ್ಷ ಜನರನ್ನು ವಿದ್ಯಾವಂತರನ್ನಾಗಿ ಮಾಡಿರುವುದಕ್ಕಾಗಿ ಅವರೆಲ್ಲರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುವುದು.

ಈ ಅನ್ನದಾನ, ವಿದ್ಯಾದಾನಗಳನ್ನು ತಪಸ್ಸಿನಂತೆ ಕೈಗೊಂಡಿರುವ ಸ್ವಾಮಿಗಳ ಅಗ್ರಪಂಕ್ತಿಯಲ್ಲಿದ್ದಾರೆ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಯವರು. ಆದುದರಿಂದ ಅವರೂ ಅತ್ಯಂತ ಅಭಿನಂದನೀಯರು ಎಂಬುದು ಸ್ವಯಂ ವೇದ್ಯವಾಗಿದೆ.

ಸ್ವಾಮಿ ವಿವೇಕಾನಂದರು, ತಮ್ಮ ಗುರುದೇವ, ಸರ್ವಧರ್ಮ ಸಮನ್ವಯಾಚಾರ್ಯ ಶ್ರೀ ರಾಮಕೃಷ್ಣ ಪರಮಹಂಸರಿಂದ ಪಡೆದು, ತಮ್ಮ ತಪಸ್ಸರ್ವಸ್ವವನ್ನೂ ಧಾರೆಯೆರೆದು ಜ್ವಲಂತಗೊಳಿಸಿದ ಮಹಾಮಂತ್ರ "ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ" – ಎಂಬುದು. ಅದರ ಅರ್ಥ "ಸ್ವಂತ ಮೋಕ್ಷಕ್ಕಾಗಿಯೂ, ಜಗತ್ತಿನ ಹಿತಕ್ಕಾಗಿಯೂ" – ಎಂದು.

ಸನ್ಯಾಸ ಧರ್ಮಕ್ಕೆ ಹೊಸ ವ್ಯಾಖ್ಯಾನವನ್ನು ನೀಡಿದ ವಿವೇಕಾನಂದರು ಈ ಮಂತ್ರವನ್ನು ಪುನರುಚ್ಚರಿಸಿ ಭಾರತದ ಅನೇಕ ಸನ್ಯಾಸ ಪಂಥಗಳೂ, ಗೃಹೀಭಕ್ತ ಸಂಘಗಳೂ ಅದರ ಅನುಷ್ಠಾನಕ್ಕೆ ತೊಡಗುವಂತೆ ಮಾಡಿದರು. ಕರ್ನಾಟಕದಲ್ಲಿ ವೀರಶೈವ ಮಠಾಧಿಪತಿಗಳು ಸ್ವಾಮಿ ವಿವೇಕಾನಂದರ ಮಂತ್ರಮಯ ಸಂದೇಶವನ್ನು ಶ್ರದ್ಧೆಯಿಂದ ಸ್ವೀಕರಿಸಿ ಅನುಷ್ಠಾನಕ್ಕೆ ತಂದಿರುವುದು ಈ ನೆಲದ ಭಾಗ್ಯವಿಶೇಷಗಳಲ್ಲೊಂದು ಎಂದು ನಾನು ನಂಬಿದ್ದೇನೆ.

ನಾನು ಇಲ್ಲಿಗೆ ಬರಲು ಒಪ್ಪಿದ್ದಕ್ಕೆ ಎರಡನೆಯ ಕಾರಣ –

–ನನಗೆ ಅತ್ಯಂತ ಪ್ರಿಯವಾಗಿರುವ ನನ್ನ 'ವಿಶ್ವಮಾನವ ಸಂದೇಶ'ದ ಪ್ರತಿಗಳನ್ನು ಮುದ್ರಿಸಿ ಇಲ್ಲಿಗೆ ಆಗಮಿಸುವವರೆಲ್ಲರಿಗೂ ಅದನ್ನು ಹಂಚುವ ಭರವಸೆಯನ್ನು ಈ ಸಮಾರಂಭದ ವ್ಯವಸ್ಥಾಪಕರು ನನಗೆ ನೀಡಿದ್ದು.

"ವಿಶ್ವಮಾನವ ಸಂದೇಶ"ವು ನನಗೆ ಪ್ರಿಯವಾಗಿರುವುದಕ್ಕೆ ಕಾರಣ –

ಕರ್ನಾಟಕದ, ಭರತಖಂಡದ, ಇಡೀ ವಿಶ್ವದ ಉದ್ಧಾರವು ಈ ಸಂದೇಶದಲ್ಲಿ ನಿರೂಪಿಸಿರುವ ಪಂಚ ಮಂತ್ರಗಳನ್ನೂ ಸಪ್ತ ಸೂತ್ರಗಳನ್ನೂ ಆಚರಣೆಗೆ ತಂದಾಗಲೇ ಎಂಬ ನನ್ನ ಹೃತ್ಪೂರ್ವಕವಾದ ಶ್ರದ್ಧೆ.

ಜನರ ಹೃದಯದಲ್ಲಿ ಮನೆಮಾಡಿರುವ ಮೂಢ ನಂಬಿಕೆಗಳನ್ನೂ, ಜಾತೀಯತೆಯನ್ನೂ ನಿರ್ಮೂಲ ಮಾಡುವವರೆಗೆ ಮಾನವ ಜನಾಂಗದ ಉದ್ಧಾರ ಸಾಧ್ಯವೇ ಇಲ್ಲ ಎಂಬುದು ಎಲ್ಲರಿಗೂ ಮನವರಿಕೆಯಾಗಬೇಕು. ಮಹತ್ಪ್ರಮಾಣದ ಸಾಮಾಜಿಕ

ಕ್ರಾಂತಿಯೊಂದು ವಿಚಾರಕ್ರಾಂತಿಯ ರೂಪದಲ್ಲಿ ನಡೆದು ಮಾನವನ ಮತಿಯಲ್ಲಿ ವಿವೇಕವನ್ನು ಸ್ಥಾಪಿಸಲೇ ಬೇಕಾಗಿದೆ.

ಎರಡು ಸಾವಿರದ ಐದುನೂರು ವರ್ಷಗಳ ಹಿಂದೆ ಭರತಖಂಡದಲ್ಲಿ ಗೌತಮಬುದ್ಧನು ಅಂಥದೊಂದು ಕ್ರಾಂತಿಯನ್ನು ನಡೆಸಿದ. ಆದರೆ ಪುರೋಹಿತಷಾಹಿಯು ಅದನ್ನು ವಿಫಲಗೊಳಿಸಿ ಬೌದ್ಧಧರ್ಮವು ಈ ದೇಶದಿಂದ ಕಣ್ಮರೆಯಾಗುವಂತೆ ಮಾಡಿತು. ಅನಂತರ ಮಹಾವೀರನು ಆರಂಭಿಸಿದ ಕ್ರಾಂತಿಯೂ ಪುರೋಹಿತಷಾಹಿಯ ಚಾಕಚಕ್ಯತೆಯಿಂದ ಮತ್ತೆ ವಿಫಲವಾಯಿತು.

ಭರತಖಂಡವು ಕಂಡ ಮತ್ತೊಬ್ಬ ಮಹಾಕ್ರಾಂತಿಕಾರಿಯೆಂದರೆ ಬಸವಣ್ಣನವರು. ಎಂಟುನೂರು ವರ್ಷಗಳ ಹಿಂದೆ ಜಾತಿ, ಮತ, ಲಿಂಗ, ವೃತ್ತಿ ಭೇದಗಳನ್ನೆಲ್ಲ ನಿರ್ಮೂಲನಗೊಳಿಸಲು ಮಹತ್ಪ್ರಮಾಣದಲ್ಲಿ ಸಾಧನೆ ನಡೆಸಿದ ಮಹಾಪುರುಷರು ಅವರು. ಅವರ ಸಾಧನೆಯ ಮಹತ್ತನ್ನೂ, ಅದಕ್ಕಾಗಿ ಅವರು ಮಾಡಿದ ತ್ಯಾಗದ ವೈಭವವನ್ನೂ ಕಂಡ ನನ್ನಲ್ಲಿನ ಕವಿಚೇತನ ಅವರಿಗೆ ಈ ಮಾತುಗಳಲ್ಲಿ ಕಾವ್ಯ ನಮನವನ್ನು ಸಲ್ಲಿಸಿತು –

ಕಾರ್ತಿಕದ ಕತ್ತಲಲಿ ಆಕಾಶದೀಪವಾಗಿ
ನೀ ಬಂದೆ,
ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ
ಎಂಟು ಶತಮಾನಗಳ ಹಿಂದೆ,
ಅಗ್ನಿ ಖಡ್ಗವನಾಂತ ಓ ಆಧ್ಯಾತ್ಮ ಕ್ರಾಂತಿವೀರ
ದೇವದಯೆಯೊಂದು ಹೇ ಧೀರಾವತಾರ
ಶ್ರೀ ಬಸವೇಶ್ವರಾ !

ಜಾತಿಪದ್ಧತಿಯ ಹೋಮಕೂಪಕ್ಕೆ
ಬಿದ್ದು, ವೈದಿಕರ ಯಜ್ಞತಾಪಕ್ಕೆ
ಬಲಿಪೋದ ದಲಿತಜೀವರನೆತ್ತಿ ಮತಿ ವಿಚಾರಕ್ಕೆ
ಕಾಯಕದ ದಿವ್ಯತತ್ತ್ವದಾ ಸುಕ್ಷೇಮ ಧರ್ಮನಾಕಕ್ಕೆ
ನಡೆಸಿದ ಮಹಾತ್ಮನೆ ನಿನಗೆ ನಮೋ ನಮಃ

ಇಂದಿಗೂ ನಾವು ನಿನ್ನೆತ್ತರಕೆ ಏರಲಾರದೆ ಅಯ್ಯೊ
ಮತದ ಉಸುಬಿಗೆ ಸಿಲುಕಿ ತತ್ತರಿಸುತಿಹೆನಯ್ಯ !
ಬಾರಯ್ಯ ಕೈ ಹಿಡಿದೆತ್ತಿ ಬದುಕಿಸು ನಮ್ಮನೆಳೆದು
ವರ್ಣಾಶ್ರಮದ ಹೆಸರ ಹೊಲೆಗೆಸರ ವಂಚನೆಯ ಹೊಂಡದಿಂದೆ !
ಭಕ್ತಿಗಂಗೆಯನೆರೆದು
ಭಾಗವತ ಶಕ್ತಿಯಿಂ ಕರೆದು
ಮತಮೌಢ್ಯದಜ್ಞಾನಪಂಕವನು ತೊಳೆದು
ಶುಚಿಗೊಳಿಸು ವಿಜ್ಞಾನ ವೇದಾಂತ ತೀರ್ಥದಿಂದೆ !

ಭರತಖಂಡದ ಜನಜೀವನದ ದುರಂತವೆಂದರೆ ಪ್ರತಿಯೊಬ್ಬ ವಿಚಾರಕ್ರಾಂತಿಪುರುಷನನ್ನೂ, ಉದ್ಧಾರಪರವಾದ ಅವನ ಸಮಸ್ತ ಸಾಧನೆ - ಬೋಧನೆಗಳನ್ನೂ ಪುರೋಹಿತಷಾಹಿಯು ನುಂಗಿ ನಿರ್ನಾಮಗೊಳಿಸುವುದು. ಬಸವೇಶ್ವರರು ಇದಕ್ಕೆ ಹೊರತಾಗಲಿಲ್ಲ. ಮಾತ್ರವಲ್ಲ, ಅವರ ಸಂದೇಶದ ಮಹತ್ತನ್ನು ಅರಿಯದೇ ಹೋದದ್ದು, ಅಂದು ಮಾತ್ರವಿರಲಿ, ಇಂದೂ ಜಾತೀಯತೆಯು ಈ ದೇಶದ, ಏಕೆ ಮಾನವತೆಯ ವಿಷಮ ಸಾಂಕ್ರಾಮಿಕ, ಕ್ಯಾನ್ಸರ್, ಏಯ್ಡ್ಸ್ ಎಂದು ನಿರ್ವಿವಾದವಾಗಿ ತೀರ್ಮಾನ ಮಾಡುವ ಈ ವಿಜ್ಞಾನ ಯುಗದಲ್ಲೂ, ಜಾತೀಯತೆಯನ್ನು ನಿರಾಕರಿಸಿದ ಬಸವೇಶ್ವರರ ಅನುಯಾಯಿಗಳೇ ಒಳಜಾತಿಗಳನ್ನು ಸೃಷ್ಟಿಸಿಕೊಂಡು ಒಬ್ಬರು ಮತ್ತೊಬ್ಬರಿಗಿಂತ ಶ್ರೇಷ್ಠ ಎಂದು ಭಾವಿಸಿ ವಿಚಾರಪರರ ಕಣ್ಣಿನಲ್ಲಿ ನಗೆಪಾಟಲಾಗಿರುವುದು!

ಇದು ಸಹಸ್ರ ವರ್ಷಗಳ ಭರತಖಂಡದ, ಏಕೆ ಇಡೀ ಜಗತ್ತಿನ ಮಾನವ ಜನಾಂಗದ ಧರ್ಮ, ಸಂಸ್ಕೃತಿ, ವಿಚಾರ, ವಿಜ್ಞಾನಗಳೆಲ್ಲ ಕಳೆದ ಶತಮಾನದ ಮಧ್ಯಭಾಗದಲ್ಲಿ, ಗಂಗಾತೀರದ ದಕ್ಷಿಣೇಶ್ವರದಲ್ಲಿ ಮಾನವ ರೂಪವನ್ನು ಧರಿಸಿ ಘೋರವಾದ ತಪಸ್ಸನ್ನು ನಡೆಸಿ, ಸರ್ವಧರ್ಮ ಸಮನ್ವಯ ಮಂಗಳಮಂತ್ರವನ್ನು ಸಾಕ್ಷಾತ್ಕರಿಸಿಕೊಂಡಿತು – ಶ್ರೀ ರಾಮಕೃಷ್ಣ ಪರಮಹಂಸರ ರೂಪದಲ್ಲಿ. ಅವರ ವ್ಯಕ್ತಿತ್ವ ಮತ್ತು ಸಾಕ್ಷಾತ್ಕಾರಗಳ ಸ್ವರೂಪವು ನನ್ನ "ಶ್ರೀ ಗುರು" ಎಂಬ ಕವನದಲ್ಲಿ ಹೀಗೆ ವ್ಯಕ್ತವಾಗಿದೆ –

ಕ್ರಿಸ್ತ ಮಹಮದ ರಾಮಕೃಷ್ಣ ಜೊರಾಸ್ತ ಗೌತಮರು
ದಿವ್ಯ ವೇದ ಕೊರಾನು ಬೈಬಲು ತಲ್ಮಡಾದಿಗಳು
ಗುಡಿಯು ಚರ್ಚು ಮಸೀದಿ ಆಶ್ರಮ ಅಗ್ನಿಪೂಜೆಗಳು
ಕಾಶಿ ಮೆಕ್ಕಗಳೆಲ್ಲ ನಿನ್ನೊಳಗೈಕ್ಯವಾ'ಗಿಹವು'!

ಮತ್ತೆ ಕವಿವಾಣಿ ಹಾಡಿತು –

ತ್ರೇತೆಯೊಳ್ ಶ್ರೀರಾಮನೋಲವತರಿಸಿ ಬಂದೆ ;
ದ್ವಾಪರದೊಳು ಕೃಷ್ಣ ಶ್ರೀರೂಪದಲಿ ನಿಂದೆ ;
ಸರ್ವಧರ್ಮಾವತಾರಂ ಕಲಿಯುಗದಿ ಸಂದೆ ;
ಶ್ರೀ ರಾಮಕೃಷ್ಣ ಪ್ರಭೋ ತವ ಸುಪ್ರಭಾತಂ !
ನಜರೇತಿನಲ್ಲಿ ಯೇಸು ಸ್ವಾಮಿಯಾಗಿದ್ದೆ ;
ನದಿಯದೊಳ್ ಶ್ರೀಕೃಷ್ಣ ಚೈತನ್ಯನಾಗಿದ್ದೆ ;
ಮತ್ತೆ ಭಾರತದಲ್ಲಿ ನೀ ಮೈದೋರುತೆದ್ದೆ ;
ಶ್ರೀ ರಾಮಕೃಷ್ಣ ಪ್ರಭೋ ತವ ಸುಪ್ರಭಾತಂ ||

ಆ ದೇವಮಾನವನ ಸರ್ವಧರ್ಮ ಸಮನ್ವಯದ, ಶುದ್ಧ ಅಧ್ಯಾತ್ಮದ ದಿವ್ಯ ಸಂದೇಶವು ಮಾತ್ರವೇ ಸಮಸ್ತ ಮಾನವತೆಗೆ ತಾರಕಮಂತ್ರವಾಗಬಲ್ಲದು. ನಿಮ್ಮೆಲ್ಲರಿಗೂ ಈಗಾಗಲೇ

ಹಂಚಿರುವ ನನ್ನ "ವಿಶ್ವಮಾನವ ಸಂದೇಶ"ವು ಅವರ ಮತ್ತು ಅವರ ಶಿಷ್ಯರಾದ ಸ್ವಾಮಿ ವಿವೇಕಾನಂದರ ಉಪದೇಶದ ಸಾರವನ್ನೆಲ್ಲ ಒಳಗೊಂಡಿದೆ. ಅದರ ಪಠನ ಮತ್ತು ಅನುಷ್ಠಾನದಿಂದ ತಮಗೆಲ್ಲ ಶ್ರೇಯಸ್ಸಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಸುತ್ತೂರು ಸ್ವಾಮಿಯವರ ಸಾಧನೆಗಳ ಮಹತ್ತು – ಬೃಹತ್ತುಗಳನ್ನು ಸೂಚಿಸುವ ಈ ಬೃಹದ್ಗ್ರಂಥವನ್ನು ನಾನು ಸಂತೋಷದಿಂದ ಬಿಡುಗಡೆಮಾಡುತ್ತೇನೆ. ಇಷ್ಟೊಂದು ಅಮೂಲ್ಯ ಲೇಖನಗಳುಳ್ಳ ಈ ಪ್ರಮಾಣದ ಗ್ರಂಥಸಂಪಾದನೆ ಎಷ್ಟು ಕಷ್ಟದ, ಹೊಣೆಗಾರಿಕೆಯ ಕೆಲಸ ಎಂಬುದನ್ನು ಬಲ್ಲೆ. ಇದರ ಸಂಪಾದನ ಸಲಹಾಮಂಡಲಿಯ ಸದಸ್ಯರನ್ನೂ ಮುಖ್ಯ ಸಂಪಾದಕರಾದ ಡಾ. ಎಚ್. ಪಿ. ಮಲ್ಲೇದೇವರು ಅವರನ್ನೂ ನಾನು ಅಭಿನಂದಿಸುತ್ತೇನೆ.

ಶ್ರೀ ಸ್ವಾಮಿಯವರು ಆಯುರಾರೋಗ್ಯಾದಿಭಾಗ್ಯದಿಂದ ಕೂಡಿದ್ದು, ಹೀಗೆಯೇ ಮಂದಹಾಸದ ಬೆಳುದಿಂಗಳನ್ನು ಸೂಸುತ್ತಾ ಸಮಾಜ ಸೇವೆ, ಸಮಾಜ ಸುಧಾರಣೆಗಳನ್ನು ನಡೆಸುತ್ತಾ ಈ ಬಗೆಯ ಸೇವಾಕಾರ್ಯಗಳಲ್ಲಿ ತೊಡಗಿರುವವರಿಗೆಲ್ಲ ಆದರ್ಶಪ್ರಾಯರಾಗಿ ಮುಂದುವರೆಯಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಮತ್ತೊಮ್ಮೆ ಎಲ್ಲರಿಗೂ ನಮಸ್ಕಾರ."

## ಅಮೃತ ಮಹೋತ್ಸವದ ಅಮೃತವಾಣಿ

ಸುತ್ತೂರು ವೀರಸಿಂಹಾಸನಾಧೀಶ್ವರ ಶ್ರೀಮನ್ಮಹಾರಾಜ ರಾಜಗುರುತಿಲಕ ಜಗದ್ಗುರು ಪರಮಪೂಜ್ಯ ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಅಮೃತ ಮಹೋತ್ಸವದ ಮತ್ತು ಪಟ್ಟಾಧಿಕಾರ ಸುವರ್ಣ ಮಹೋತ್ಸವದ ಶುಭದಿನ ೨೯-೮-೧೯೮೬ ರಂದು ಮೈಸೂರು ನಗರಕ್ಕೆ ನಗರವೇ ಸಂಭ್ರಮದ ಹೊನಲಿನಲ್ಲಿ ಮೀಯುತ್ತಿದೆ.

ಹಿಂದೆ ಸಮಾವೇಶಗೊಂಡಿರಲಿಲ್ಲ, ಮುಂದೆ ಸಾಧ್ಯವಿಲ್ಲವೇನೋ – ಏಳುನೂರಾ ಎಪ್ಪತ್ತು ಜನ ಹರಗುರುಚರಮೂರ್ತಿಗಳು ಕರ್ನಾಟಕದ ವಿವಿಧೆಡೆಗಳಿಂದ ಆಗಮಿಸಿ, ಸಭೆ – ಶಿವನ ಒಡ್ಡೋಲಗದಲ್ಲಿ ನಡೆವ ಸಭೆಯೋ ಎಂಬ ಭಾವನೆ ಸಂಜನಿಸಲು ಕಾರಣರಾದರು.

ವಿಶಾಲ ವೇದಿಕೆಯ ಮೇಲೆ ಸರ್ವಧರ್ಮ ಸಮ್ಮೇಳನವೇ ನಡೆದಿತ್ತು – ಕಾರಣ ಸಿದ್ಧಗಂಗಾ ಮಠಾಧೀಶರಾದ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು, ಸಿರಿಗೆರೆಯ ಶ್ರೀಗಳವರು, ಮೂರು ಸಾವಿರ ಮಠದ ಜಗದ್ಗುರುಗಳವರು, ಶ್ರೀರಾಮಕೃಷ್ಣಾಶ್ರಮದ ಸುರೇಶಾನಂದಜೀ ಅವರೂ, ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆ ಯವರೂ, ಶ್ರೀರಾಮಾನುಜರ ಪರಂಪರಾನುಗತ ಪರಕಾಲಮಠದ ಶ್ರೀಪಾದಂಗಳವರೂ, ಆದಿಚುಂಚನಗಿರಿಯ ಜಗದ್ಗುರು ಶ್ರೀ ಶ್ರೀ ಗಂಗಾಧರನಾಥ ಸ್ವಾಮೀಜಿಯವರೂ,

ವಿಶ್ವಭ್ರಾತೃತ್ವವನ್ನು ಸಾರಿದ ಪೈಗಂಬರರ ಅನುಯಾಯಿ ಮಫ್ತಿ ಬಷೀರ್ ಅಹ್ಮದ್ ಅವರೂ, ಏಸುಕ್ರಿಸ್ತಾನುಯಾಯಿ ಮೈಸೂರಿನ ಕ್ರಿಶ್ಚಿಯನ್ ಧರ್ಮಗುರುಗಳೂ ಉನ್ನತಾಸನಗಳಲ್ಲಿ ಆಸೀನರಾಗಿದ್ದಾರೆ – ಮಧ್ಯದಲ್ಲಿ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ವಿರಾಜಮಾನರಾಗಿದ್ದಾರೆ. ಅಲ್ಲದೆ ಕರ್ನಾಟಕದ ಮುಖ್ಯಮಂತ್ರಿ ಆದಿಯಾಗಿ ಇಡೀ ಮಂತ್ರಿಮಂಡಲವೇ ಮಂಡಿಸಿದೆ ಎನ್ನಬಹುದು – ಅನೇಕ ಜನ ಮುತ್ಸದ್ದಿಗಳು, ರಾಜಕೀಯ ನಾಯಕರು, ಅವರ ಅನುಯಾಯಿಗಳು ; ಅಸಂಖ್ಯಾತ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಅಗಣಿತ ಮಹಿಳೆಯರು, ನಾಗರಿಕರು, ಪುರಪ್ರಮುಖರು, ಅಧ್ಯಾಪಕ ವೃಂದ, ಆರಕ್ಷಕರು, ಇಂಥವರು ಅಲ್ಲಿರಲಿಲ್ಲ ಎಂದು ಹೇಳುವಂತಿಲ್ಲ ! ಮಹಾಕವಿ ಕುವೆಂಪು ಅವರು ಸಾರ್ವಜನಿಕವಾಗಿ ಅಪರೂಪವಾಗಿ ಕಾಣಿಸಿಕೊಂಡಿದ್ದಾರೆ !

ಈ ಅಭೂತಪೂರ್ವ ಸಮಾರಂಭದ ಅಂತ್ಯದಲ್ಲಿ – ಪರಮಪೂಜ್ಯರು ಆಶೀರ್ವಚನವನ್ನು ಅನುಗ್ರಹಿಸಿದರು –

ಯತ್ರೈವ ಯತ್ರೈವ ಮನೋ ಮದೀಯಂ
ತತ್ರೈವ ತತ್ರೈವ ತವ ಸ್ವರೂಪಂ |
ಯತ್ರೈವ ಯತ್ರೈವ ಶಿರೋ ಮದೀಯಂ
ತತ್ರೈವ ತತ್ರೈವ ಪದದ್ವಯಂ ತೇ ||

"ಹರಗುರು ಚರಮೂರ್ತಿಗಳೇ, ಭಕ್ತಮಹಾಶಯರೇ,

ನಮ್ಮ ಪೀಠಾರೋಹಣದ ಸುವರ್ಣ ಮಹೋತ್ಸವ ಮತ್ತು ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ನೀವುಗಳು ಪ್ರೀತಿವಾತ್ಸಲ್ಯಗಳ ಅಮೃತಧಾರೆಯನ್ನೇ ನಮ್ಮ ಮೇಲೆ ಹರಿಸಿದ್ದೀರಿ. ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರರಿಂದ ಸಂಸ್ಥಾಪಿತವಾದ ಸುತ್ತೂರು ವೀರ ಸಿಂಹಾಸನದ ಗುರುಪರಂಪರೆಯಲ್ಲಿ ನಿಮಗಿರುವ ಪ್ರೀತಿ ಗೌರವಗಳ ಸಂಕೇತವೇ ಈ ಸಮಾರಂಭ.

ಮಂತ್ರಮಹರ್ಷಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾಸ್ವಾಮಿಗಳಿಂದ ಐವತ್ತು ವರ್ಷಗಳ ಹಿಂದೆ ನಮಗೆ ದೊರೆತ ಗುರುದೀಕ್ಷೆ ನಮ್ಮನ್ನು ಅರ್ಪಣಭಾವದಿಂದ ಗುರು ಸೇವೆ ಮತ್ತು ಸಮಾಜ ಸೇವೆಯಲ್ಲಿ ತೊಡಗುವಂತೆ ಪ್ರೇರೇಪಿಸಿತು. ಮಠಾಧಿಪತಿಗಳು ಮಾಡಬೇಕಾದ ಧಾರ್ಮಿಕ ಕರ್ತವ್ಯಗಳು ಮತ್ತು ಅವರು ನಿರ್ವಹಿಸಬೇಕಾದ ಸಾಮಾಜಿಕ ಹೊಣೆಗಾರಿಕೆಗಳ ವಿಚಾರದಲ್ಲಿ ಇರಬೇಕಾದ ಅರಿವು ನಮ್ಮ ಪೂಜ್ಯ ಗುರುಗಳಿಂದ ನಮಗೆ ದೊರೆಯಿತು. ನಮ್ಮ ಈ ಎಲ್ಲ ಕಾರ್ಯಕ್ರಮಗಳಲ್ಲಿ ಮಹಾಜನತೆಯಿಂದ ಲಭಿಸಿದ ಸಹಕಾರ ಮತ್ತು ಸಹಾಯ ಸ್ಮರಣೀಯ. ಸಮಾಜದ ಕೆಲಸಕಾರ್ಯಗಳಲ್ಲಿ ತೊಡಗಿದವರು, ಸಮಷ್ಟಿಯ ಹಿತವನ್ನು ಗಮನಿಸಿ ಕೆಲಸ ಮಾಡಲು ಕಲಿತರೆ, ಆಗ ಭಗವಂತನ ಕೃಪೆ ನಾನಾ

ರೂಪದಲ್ಲಿ ದೊರೆಯುತ್ತದೆ ಎಂಬುದು ನಮ್ಮ ಅನುಭವ. ದೇವರನ್ನು ಸಂಪೂರ್ಣವಾಗಿ ನಂಬಿದರೆ ಬೆಟ್ಟದಂತೆ ಬಂದ ಕಷ್ಟಗಳು ಕೇವಲ ಮಂಜಿನಂತೆ ಕರಗಿ ಹೋಗುತ್ತವೆ. ನಮ್ಮ ಈ ಪ್ರಯತ್ನಗಳಲ್ಲಿ ನಾವು ಎಂದೂ ಕಂಡರಿಯದ ಅನೇಕ ಜನ ಹಳ್ಳಿಗಳಿಂದ ಮತ್ತು ನಗರಗಳಿಂದ ತಾವಾಗಿಯೇ ಮುಂದೆ ಬಂದು ನಾನಾ ರೀತಿಯಲ್ಲಿ ಸಹಕಾರವಿತ್ತು ಪ್ರೋತ್ಸಾಹಿಸಿದ್ದಾರೆ. ಆದ್ದರಿಂದ ಈ ಮಹಾಸಾಧನೆಯಲ್ಲಿ ಮಾಡಿದೆನೆಂಬ ಮಮಕಾರವಾಗಲಿ, ನೀಡಿದೆನೆಂಬ ಅಹಂಕಾರವಾಗಲಿ ಇಲ್ಲ.

> ಮಾಡುವಾತ ನಾನಲ್ಲಯ್ಯಾ, ನೀಡುವಾತ ನಾನಲ್ಲಯ್ಯಾ,
> ಬೇಡುವಾತ ನಾನಲ್ಲಯ್ಯಾ, ನಿಮ್ಮ ಕಾರುಣ್ಯವಿಲ್ಲದೆ ಎಲೆ ದೇವಾ !
> ಮನೆಯ ತೊತ್ತಲಸಿದರೆ ಒಡತಿ ಮಾಡಿಕೊಂಬಂತೆ
> ನಿನಗೆ ನೀ ಮಾಡಿಕೋ ಕೂಡಲ ಸಂಗಮದೇವಾ.

–ಎಂಬ ಅಣ್ಣನವರ ವಾಣಿಯಂತೆ – ಭಗವಂತನ ಉದ್ದೇಶದ ಸಾಧನೆಯಲ್ಲಿ ನಾವುಗಳೆಲ್ಲಾ ನಿಮಿತ್ತಮಾತ್ರರು.

ಇಂದಿನ ನಮ್ಮ ಸಾಮಾಜಿಕ ಮತ್ತು ಧಾರ್ಮಿಕ ಜೀವನ ತುಂಬಾ ಜಟಿಲವಾಗಿದೆ. ಸನಾತನತೆ ಮತ್ತು ವಿನೂತನತೆ ಇವುಗಳ ಸಂಧಿಕಾಲದಲ್ಲಿ ಈಗ ನಾವಿದ್ದೇವೆ. ಅದರಿಂದಾಗಿ ನಾವು ಅವುಗಳ ಸಂಘರ್ಷವನ್ನು ಎದುರಿಸಬೇಕಾಗಿದೆ. ಶತಮಾನಗಳಿಂದ ನಮ್ಮ ಹಿರಿಯರು ಮತ್ತು ನಾವು ನಂಬಿ ಬಂದ ಅನೇಕ ಮೌಲ್ಯಗಳು ಸವಕಲು ನಾಣ್ಯಗಳಂತೆ ತಮ್ಮ ಚಲಾವಣೆಯನ್ನೇ ಕಳೆದುಕೊಳ್ಳುತ್ತಿವೆ. ಅವುಗಳ ಜಾಗದಲ್ಲಿ ಹೊಸ ಮೌಲ್ಯಗಳು ಪ್ರಬುದ್ಧಗೊಂಡು ಬೆಳೆದು ನಿಂತಿಲ್ಲ. ವಿಜ್ಞಾನ ಮತ್ತು ವೈಚಾರಿಕತೆಯ ಹೆಸರಿನಲ್ಲಿ ಧರ್ಮ ಮತ್ತು ದೇವರಲ್ಲಿ ನಮಗಿದ್ದ ಶ್ರದ್ಧೆ ಸಡಿಲಗೊಳ್ಳುತ್ತಿದೆ. ಆಧುನಿಕತೆಯ ಹೆಸರಿನಲ್ಲಿ ನಮ್ಮ ಯುವಜನ ಸಂಯಮ ರಹಿತವಾದ ಭೋಗ ಜೀವನದ ಕಡೆ ವ್ಯಾಮೋಹಿತರಾಗುತ್ತಿದ್ದಾರೆ ಎನ್ನುವುದು ಒಂದು ಕಟು ಸತ್ಯ. ಈ ವಿಚಾರದಲ್ಲಿ ತಂದೆತಾಯಿಯರ ಹೊಣೆಗಾರಿಕೆಯೂ ಇಲ್ಲದಿಲ್ಲ. ಮಕ್ಕಳಿಂದ ಆದರ್ಶ ಜೀವನವನ್ನು ಬಯಸುವ ತಂದೆತಾಯಿಯರು ತಮ್ಮ ಬದುಕಿನಲ್ಲಿ ದೈವಭಕ್ತಿ, ಪ್ರೀತಿ, ವಾತ್ಸಲ್ಯ, ಪ್ರಾಮಾಣಿಕತೆ ಮುಂತಾದ ಈ ಗುಣಗಳನ್ನು ರೂಢಿಸಿಕೊಳ್ಳುವುದನ್ನು ಮರೆಯುತ್ತಿರುವುದು ಶೋಚನೀಯ ಸಂಗತಿ.

ಮಾತೃದೇವೋ ಭವ, ಪಿತೃದೇವೋ ಭವ, ಅತಿಥಿದೇವೋ ಭವ ಎಂದು ಹಾಡಿದ ಈ ನಾಡಿನಲ್ಲಿ– ಮುಪ್ಪಿನ ತಂದೆತಾಯಿಯರು ಅನಾಥ'ರಂತೆ 'ಕರುಣಾಗೃಹ'ಗಳಲ್ಲಿ ವಾಸಿಸುವಂತಾಗಿದೆ. ಇಂಥ ಸ್ಥಿತಿ ನಿರ್ಮಾಣವಾಗುತ್ತಿರುವುದು ನಮ್ಮ ಸಂಸ್ಕೃತಿಗೆ ಗೌರವ ತರುತ್ತದೆಯೇ ಎಂಬುದನ್ನು ನೀವೇ ಯೋಚಿಸಿ.

ಈ ವಿಚಾರದಲ್ಲಿ ಒಂದು ಮಾತನ್ನು ಅವಶ್ಯಕವಾಗಿ ಗಮನಿಸಬೇಕು. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಅದೆಷ್ಟೇ ದೋಷವಿದ್ದರೂ ನಮ್ಮ ಕುಟುಂಬದ ವ್ಯವಸ್ಥೆ ಮತ್ತು

ಅದರ ಪವಿತ್ರತೆಯ ವಿಚಾರದಲ್ಲಿ ನಮಗೆ ಪಾಶ್ಚಾತ್ಯ ಜೀವನ ಎಂದಿಗೂ ಆದರ್ಶವಾಗಲಾರದು.

ಪ್ರಜಾಪ್ರಭುತ್ವದ ಫಲವಾಗಿ ನಮ್ಮ ನಾಡಿನಲ್ಲಿ ಶಿಕ್ಷಣದ ಸೌಲಭ್ಯಗಳು ಹೆಚ್ಚು ಹೆಚ್ಚು ವ್ಯಾಪಕವಾಗುತ್ತಿವೆ. ಸಮಾಜದಲ್ಲಿ ಸ್ತ್ರೀಯರ ಶಿಕ್ಷಣ ಮತ್ತು ಅವರ ಸ್ಥಾನಮಾನಗಳ ವಿಚಾರದಲ್ಲಿ ಹೊಸ ದೃಷ್ಟಿ ಈಗ ಮೂಡುತ್ತಿದೆ. ಈ ನಾಡಿನ ಹೆಣ್ಣುಮಕ್ಕಳು ಶಿಕ್ಷಣದ ಪ್ರಭಾವದಿಂದ ಈಗ ಜಾಗೃತರಾಗಿದ್ದಾರೆ. ಗ್ರಾಮಾಂತರ ಜನರಲ್ಲಿಯೂ ಈಗ ಜಾಗೃತಿ ಯುಂಟಾಗಬೇಕಾಗಿದೆ. ನಿಜವಾದ ನೈತಿಕ ಧಾರ್ಮಿಕ ಶಿಕ್ಷಣ ಜನರಿಗೆ ದೊರೆತರೆ ಈ ರೀತಿಯ ಸಾಮಾಜಿಕ ಪರಿವರ್ತನೆ ಸುಲಭವಾಗುತ್ತದೆ.

ಇದಕ್ಕೆ ಪೂರಕವಾಗಿ ಮತ್ತೊಂದು ಅಂಶವನ್ನು ಕುರಿತು ಹೇಳಲೇಬೇಕಾಗಿದೆ – ಕಾಯಕ ಅಥವಾ ಶ್ರಮಸಾಧ್ಯವಾದ ದುಡಿಮೆಯ ವಿಚಾರದಲ್ಲಿ ಅನೇಕರಿಗೆ ಸರಿಯಾದ ಗೌರವ ಭಾವನೆ ಇನ್ನೂ ಬೆಳೆದಿಲ್ಲ. ಹೊಲದಲ್ಲಿ ದುಡಿಯುವ ರೈತರು ಮತ್ತು ಕಾರ್ಖಾನೆಯಲ್ಲಿ ದುಡಿಯುವ ಕಾರ್ಮಿಕರು ಇನ್ನೂ ಸಮಾಜದ ದೃಷ್ಟಿಯಲ್ಲಿ ಎರಡನೇ ವರ್ಗದ ಜನ. ಆದರೆ ಈ ವಿಚಾರದಲ್ಲಿ ಪಾಶ್ಚಾತ್ಯ ದೇಶಗಳು ನಮಗಿಂತಲೂ ಮೇಲು. "ಕಾಯಕವೇ ಕೈಲಾಸ" ಎನ್ನುವ ಶರಣರ ಮಾತು ಮೇಲ್ನೋಟಕ್ಕೆ ಕೇವಲ ಧಾರ್ಮಿಕ ಸಿದ್ಧಾಂತದಂತೆ ಕಂಡರೂ, ಇದು ಆರ್ಥಿಕ ಪ್ರಗತಿ ಮತ್ತು ಸಾಮಾಜಿಕ ಸಮಾನತೆಯ ಒಂದು ಮೂಲ ಮಂತ್ರ. ಈಗ ಈ ಮಾತು ಭಾರತೀಯ ರೆಲ್ಲರಿಗೂ ಆದರ್ಶವಾಗಬೇಕಾಗಿದೆ. ದುಡಿಮೆಯನ್ನು ಗೌರವಿಸಲು ಕಲಿತರೆ ಆಗ ದುಡಿಯು ವವರನ್ನು ಗೌರವಿಸಲು ಕಲಿಯುತ್ತೇವೆ. ಕಾಯಕದ ಘನತೆ ಹೆಚ್ಚಿದಂತೆಲ್ಲಾ ಆರ್ಥಿಕ ಶೋಷಣೆ ಕಡಿಮೆಯಾಗಿ ಅಸ್ಪೃಶ್ಯತೆ, ಜಾತೀಯತೆ ಮೊದಲಾದ ಸಾಮಾಜಿಕ ದೋಷಗಳು ತಾವಾಗಿಯೇ ಪರಿಹಾರವಾಗುತ್ತವೆ.

ಜನಸಾಮಾನ್ಯರಲ್ಲಿ, ಅದರಲ್ಲಿಯೂ ಹಳ್ಳಿಗಾಡಿನಲ್ಲಿ ವಾಸಿಸುವ ಜನರಲ್ಲಿ ಈ ರೀತಿಯ ವೈಚಾರಿಕತೆ ಮತ್ತು ಧಾರ್ಮಿಕ ಪ್ರಜ್ಞೆ ಬೆಳೆಯಬೇಕೆಂಬ ಉದ್ದೇಶದಿಂದ ಈ ಸಮಾರಂಭದ ನೆನಪಿಗಾಗಿ ಹತ್ತು ಲಕ್ಷ ರೂಪಾಯಿಯ "ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ" ಎಂಬ ಒಂದು ಹೆಸರಿನ ಪುದುವಟ್ಟನ್ನೂ ಈಗ ಸ್ಥಾಪಿಸಲಾಗಿದೆ. ಇದರ ಜೊತೆಗೆ "ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್" ಎಂಬ ಮತ್ತೊಂದು ದತ್ತಿಯನ್ನು ಯೋಜಿಸಲಾಗಿದೆ. ಈ ಯೋಜನೆ ಗಳಿಂದ ಜನರಲ್ಲಿ ಜಾಗೃತಿಯುಂಟಾಗಿ ಸಮಾಜದ ಬದುಕು ಹಸನಾಗಬೇಕೆಂಬುದೇ ನಮ್ಮ ಆಶಯ.

ನೀವುಗಳು ನಮ್ಮ ಮಠದ ಮತ್ತು ಎಲ್ಲ ಸಂಸ್ಥೆಗಳ ಪ್ರಗತಿಯ ವಿಚಾರದಲ್ಲಿ ಹಿಂದಿ ನಿಂದಲೂ ಪ್ರೀತಿ ವಾತ್ಸಲ್ಯವನ್ನು ತೋರಿಸುತ್ತಾ ಬಂದಿದ್ದೀರಿ. ಇದೇ ರೀತಿಯಲ್ಲಿ ಇನ್ನು ಮುಂದೆಯೂ ನೀವುಗಳು ಇದರ ಶ್ರೇಯಸ್ಸಿನಲ್ಲಿ ಭಾಗಿಗಳಾಗಬೇಕೆಂದು ಬಯಸುತ್ತೇವೆ.

ಸರ್ವಶಕ್ತನಾದ ಪರಶಿವನ ಕೃಪೆ ಮತ್ತು ಆದಿಗುರು ಶ್ರೀ ಶಿವರಾತ್ರೀಶ್ವರರ ಆಶೀರ್ವಾದಗಳು ತಮಗೆಲ್ಲಾ ಸದಾ ಲಭಿಸಲೆಂದು ಪ್ರಾರ್ಥಿಸಿ ನಮ್ಮ ಮಾತನ್ನು ಮುಗಿಸುತ್ತೇವೆ."

|| ಶಿವಂ ಭೂಯಾತ್ ||

## ಕೂಡಲಸಂಗಮದೇವ ತನಗೆಬೇಕೆಂದು ಎತ್ತಿಕೊಂಡ

ದೇವರ ಮುಂದೆ ಬೆಳಗಿಸಿದ ದೀಪ ಸಂಜೆಯ ಹೊತ್ತಿಗೆ ಎಣ್ಣೆ ಕಡಿಮೆಯಾಗುತ್ತಾ ಹೋದಂತೆ ಮಂಕಾಯಿತು.

ಸೂರ್ಯನ ಕಿರಣಗಳಲ್ಲಿ ಅರಳಿನಿಂತ ಹೂವು ಸಂಜೆಯಾದಂತೆಲ್ಲಾ, ತನ್ನಲ್ಲಿನ ಸುಗಂಧವನ್ನು ಸುತ್ತಲೂ ಬೀರಿ, ಅದರ ಪಕಳೆಗಳು ಬಾಡಿಹೋದುವು.

ಬೆಳಗಿನಿಂದ ನಿರ್ವಿರಾಮವಾಗಿ ಲೋಕಕ್ಕೆ ಬೆಳಕು ಕೊಟ್ಟು, ತನ್ನ ಚೈತನ್ಯದಾಯಿನಿ, ಜೀವಶಕ್ತಿದಾಯಕ ಕರಗಳಿಂದ ಸಮಸ್ತ ಸೃಷ್ಟಿಯನ್ನು, ಸರ್ವ ಜೀವಜಾಲವನ್ನು ನೇವರಿಸಿದ ಸೂರ್ಯ ಸಂಜೆಯಾಗುತ್ತ ಸಂಜೆಯಾಗುತ್ತ, ನಿಧಾನವಾಗಿ ಗಗನಾಂಗಣದಿಂದ ಅವರೋಹಣೋದ್ಯುಕ್ತನಾಗಿ, ಪಡುಕಡಲಿಗೆ ಧುಮುಕಲಿದ್ದಾನೆ....

ದಿನಾಂಕ ೫-೧೨-೧೯೮೬ರ ಸಂಜೆ, ಶರಣ ಸಾಹಿತ್ಯ ಸಮ್ಮೇಳನದ ಪೂರ್ವಭಾವೀ ಸಿದ್ಧತೆಯಲ್ಲಿ ತೊಡಗಿದ್ದ ಕಾರ್ಯಕರ್ತರು ಪೂಜ್ಯ ಜಗದ್ಗುರುಗಳವರನ್ನು ಭೇಟಿಯಾಗಿ ಸಮ್ಮೇಳನದ ಸಿದ್ಧತೆಗಳ ವರದಿಯೊಪ್ಪಿಸಲು ಬಂದರು. ಆದರೆ ಶ್ರೀಗಳವರು ಅಂದು ಬೆಳಗಿನಿಂದಲೇ ಅಸ್ವಸ್ಥರಾಗಿ ಮಲಗಿರುವ ವಿಷಯ ತಿಳಿಯಿತು. ಎಲ್ಲರೂ ಮೌನವಾಗಿ, ಸದ್ದುಮಾಡದೆ ಒಳಗೆ ಹೋದರು. ನಿತ್ಯ ಕುಳಿತುಕೊಳ್ಳುವ ಆಸನದಲ್ಲಿ ಅವರು ಇರಲಿಲ್ಲ. ಅದರ ಪಕ್ಕದ ಕೋಣೆಯಲ್ಲಿ ಮಂಚದ ಮೇಲೆ ಮಲಗಿದ್ದರು. ಮುಖದಲ್ಲಿ ತುಂಬಾ ಆಯಾಸ ಅಡರಿತ್ತು. ಬಂದವರನ್ನು ಕಂಡು ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದರು. "ಬೇಡಿ ಬುದ್ದೀ, ನೀವು ವಿಶ್ರಾಂತಿ ತಗೊಳ್ಳಿ. ಏಳುವ ಆಯಾಸ ಮಾಡಿಕೋಬೇಡಿ" – ಎಂದು ಪ್ರಾರ್ಥಿಸಿ, ಆ ಬಂದವರು ವಂದಿಸಿದರು. ಒಬ್ಬರು ಸಮ್ಮೇಳನದ ಬಗೆಗೆ ಅದುವರೆಗೆ ಆಗಿರುವ ಪ್ರಗತಿಯನ್ನು ಸಂಕ್ಷೇಪವಾಗಿ ಜಗದ್ಗುರುಗಳವರಲ್ಲಿ ಅರಿಕೆ ಮಾಡಿಕೊಂಡರು. "ಈಗ ಸ್ವಾಗತ ಸಮಿತಿಯ ಸದಸ್ಯರನ್ನು ಮಾಡಿಸುವುದಕ್ಕಾಗಿ ಸಂತೆಪೇಟೆಯ ಪ್ರಮುಖರ ಬಳಿಗೆ ಹೋಗ್ತೀವಿ ಬುದ್ದೀ"– ಎಂದು ತಿಳಿಸಿದರು. ಅದಕ್ಕೆ ಒಪ್ಪಿಗೆಯ ಸೂಚನೆ ಅವರಿಂದ ದೊರೆಯಿತು. ಇನ್ನು ಹೆಚ್ಚುಕಾಲ ಅಲ್ಲಿರುವುದು ಬೇಡವೆಂದು ಬಂದವರು ಮತ್ತೊಮ್ಮೆ ವಂದಿಸಿ ಹಾಗೇ ಹಿಂದಕ್ಕೆ ಸರಿದು ಹೊರಬಂದರು. ಅದೇ ವೇಳೆಗೆ ತಜ್ಞ ವೈದ್ಯರು ಒಳಗೆ ಹೋಗುತ್ತಿರುವುದನ್ನು ಕಂಡು – ಶ್ರೀಗಳವರು ಶೀಘ್ರವಾಗಿ ಮತ್ತೆ ಚೇತರಿಸಿಕೊಳ್ಳುತ್ತಾರೆಂಬ

ಧೈರ್ಯ ಇವರಿಗೆ ಉಂಟಾಯಿತು. ಸಂತೇಪೇಟೆಗೆ ಹೋಗಿ ಸಾಕಷ್ಟು ಜನ ಸದಸ್ಯರನ್ನು ಮಾಡಿಸಿದ ತೃಪ್ತಿ ಆ ಕಾರ್ಯಕರ್ತರಿಗೆ ಉಂಟಾಯಿತು. ರಾತ್ರಿ ತಮ್ಮ ತಮ್ಮ ಮನೆಗಳಿಗೆ ಸೇರಿಕೊಂಡರು.

ಶ್ರೀಮಠದಲ್ಲಿ ಆ ರಾತ್ರಿ – ಮಧ್ಯರಾತ್ರಿ ಮೀರಿದೆ.

ಎಲ್ಲೂ ಶಬ್ದವಿಲ್ಲ. ಎಲ್ಲೆಲ್ಲೂ ಒಂದು ರೀತಿಯ ವಿಚಿತ್ರ ನೀರವ !

ಜಗದ್ಗುರು ಪರಮ ಪೂಜ್ಯ ಡಾ. ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ನಿದ್ರಿಸುತ್ತಿದ್ದಾರೆ, ಮತ್ತು ನಿದ್ರಿಸುತ್ತಿಲ್ಲ !

ಹೊರಗಣ್ಣುಗಳು ನಿದ್ರಿಸುತ್ತಿವೆ.

ಒಳಗಣ್ಣುಗಳು ನಿಚ್ಚಳವಾಗಿವೆ...

ಎಪ್ಪತ್ತು ವರ್ಷಗಳ ಜಗದ್ಗುರುಗಳು – ಒಳಗೆ ಬಾಲಕರಾದ ತಮ್ಮನ್ನೇ ಕಾಣುತ್ತಿದ್ದಾರೆ. ಊರುಮಠದಲ್ಲಿ, ಆ ಕಂಬದ ಮರೆಯಲ್ಲಿ ಪಾಠ ಓದುವುದರಲ್ಲಿ ಮಗ್ನರಾಗಿದ್ದಾರೆ... ಮುಂದೆ ಮಂತ್ರಮಹರ್ಷಿಗಳು ಮಂತ್ರಲೇಖನ ಮಣಿಹದಲ್ಲಿ ತೊಡಗಿದ್ದಾರೆ...

ಸುತ್ತೂರಿನ ಶಾಲೆಯಲ್ಲಿ ಬಾಲ್ಯದ ವಿದ್ಯಾಗುರುಗಳು 'ಪುಣ್ಯಕೋಟಿ'ಯ ಕಥೆಯನ್ನು ವಿವರಿಸುತ್ತಿದ್ದಾರೆ. ಪುಣ್ಯಕೋಟಿಯ ಕಥೆ ಕೇಳುತ್ತ ತಾವು ಬಿಕ್ಕಿ ಬಿಕ್ಕಿ ಅಳುತ್ತಿರುವುದನ್ನು ತಾವೇ ಕಾಣುತ್ತಿದ್ದಾರೆ. ಅವರ ಹೊರಗಣ್ಣುಗಳಿಂದ, ಕಣ್ಣೀರು ಹರಿಯುತ್ತಿರುವುದು ಅವರ ಅರಿವಿಗೆ ಎಟುಕದಾಯಿತು.....

ಕಾಡುಮಠದ ಮೂಲ ಕರ್ತೃಗದ್ದಿಗೆಯ ದೃಶ್ಯ ಚಿತ್ರಿತವಾಯಿತು.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಭಗವತ್ಪಾದರು ವರ್ಣಚಿತ್ರದಿಂದ ಎದ್ದು ತಮ್ಮತ್ತ ಬರುತ್ತಿದ್ದಾರೆ.... ತಾವು ಶಿರಸಾಷ್ಟಾಂಗ ನಮಸ್ಕಾರ ಮಾಡುತ್ತಿದ್ದಾರೆ. ಭಗವತ್ಪಾದರ ಬೆಳಕಿನ ಶೀತಲ ಹಸ್ತ ತಮ್ಮ ಮಸ್ತಕವನ್ನು ನೇವರಿಸುತ್ತಿದೆ....

ಮೈಸೂರಿನಲ್ಲಿ ವಿದ್ವಾನ್ ಬಸವರಾಜ ಶಾಸ್ತ್ರಿಗಳವರು ಮುಗುಳ್ನಗುತ್ತಿದ್ದಾರೆ..

ಓಂ ನಮಃ ಶಿವಾಯ ಮಠದ ಶ್ರೀ ನಿ. ಪ್ರ. ಸ್ವ. ಸೋಮಶೇಖರ ಸ್ವಾಮಿಗಳವರು ಗಂಭೀರವಾಗಿ ಕುಳಿತಿರುವುದು ಕಾಣಿಸುತ್ತಿದೆ....

ಕುಂದೂರು ಮಠದ ಶ್ರೀ ನಿರ್ವಾಣ ಸ್ವಾಮಿಗಳವರು ಸುಮ್ಮನೇ ದಾರಿ ನೋಡುತ್ತ ಕಾಯುತ್ತ ನಿಂತಿದ್ದಾರೆ....

ಕಾಶಿಯಲ್ಲಿ ತಾವೀಗ ಶ್ರೀ ಗೌರೀಶಂಕರ ಸ್ವಾಮಿಗಳವರ ಸನ್ನಿಧಿಯಲ್ಲಿ ಬಿಟ್ಟ ಕಣ್ಣು ಬಿಟ್ಟಂತೆ ಅವರನ್ನೇ ನೋಡುತ್ತಿದ್ದಾರೆ....

ಕ್ಷಣ ಕ್ಷಣಕ್ಕೆ ದೃಶ್ಯಗಳು ಮಾಯವಾಗುತ್ತಿವೆ.... ಮೂಡುತ್ತಿವೆ....

ತಮ್ಮ ಕರಕಮಲಸಂಜಾತರು, ಭಾವೀ ಜಗದ್ಗುರುಗಳು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ನೋಡು ನೋಡುತ್ತಿರುವಂತೆ ಎತ್ತರಕ್ಕೆ ಬೆಳೆದು ನಿಂತಿದ್ದಾರೆ....

ಎಚ್ಚರವಾದಂತಾಯಿತು –

ಎದುರಿಗೆ ತಮ್ಮ ಕರಕಮಲಸಂಜಾತರು ತಮ್ಮ ಪಾದಗಳಿಗೆ ಅಂಜನ ಲೇಪಿಸುತ್ತ ಮೃದುವಾಗಿ ಮೆಲುವಾಗಿ ಮರ್ದನ ಮಾಡುತ್ತ ಯಾಕೋ ಕಣ್ಣೀರು ಸುರಿಸುತ್ತಿದ್ದಾರೆ !

ತಟ್ಟನೆ ಕಣ್ಣುಗಳನ್ನು ತೆರೆದು ದಿಟ್ಟಿಸಿ ನೋಡಿದರು.

ಹೌದು ಅವರೇ !

'ಸ್ವಾಮೀ, ಇನ್ನೂ ಮಲಗಿಲ್ಲವೇ ? ಹೋಗಿ ಮಲಗಿ, ವಿಶ್ರಾಂತಿ ತಗೊಳ್ಳಿ, ಬೆಳಿಗ್ಗೆ ಮಾತನಾಡೋಣ...' ಎಂದರು ....

ಮತ್ತೆ ಅದೆಲ್ಲಿತ್ತೋ ನಿದ್ರೆ ಒತ್ತಿಕೊಂಡು ಬರತೊಡಗಿತು.

ಜಗದ್ಗುರುಗಳ ಅಂತರಂಗದಲ್ಲಿ ಅಪೂರ್ವ ಭವಿಷತ್ ಚಿತ್ರ ಸುಸ್ಪಷ್ಟವಾಗಿ ರಚನೆಗೊಂಡಿತು –

ಇಪ್ಪತ್ತನಾಲ್ಕನೆಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಲೋಕಕಲ್ಯಾಣ ಗುಣಗಳನ್ನು, ಸೇವಾಮನೋಭಾವವನ್ನು, ನೂತನ ಯೋಜನೆಗಳ ಸೃಜನಾತ್ಮಕ ಶೀಲವನ್ನು, ಮಿಗಿಲಾಗಿ ಅಪಾರ ಕರುಣಾಂತರಂಗವನ್ನು ಮೇಳವಿಸಿಕೊಂಡು ಇಡೀ ನಾಡಿಗೇ ದಾರಿದೀಪವಾಗಿ ಬೆಳಗುತ್ತಿದ್ದಾರೆ....

ಇಪ್ಪತ್ತೊಂದನೆಯ ಶತಮಾನ ನಿರೀಕ್ಷಿಸುವ ಎಲ್ಲ ಸಾಧನೆಗಳನ್ನು ಮುಂಗಾಣುವ ದೂರದೃಷ್ಟಿಯುಳ್ಳವರೂ, ಆ ಸಾಧನೆಗಳ ಸಿದ್ಧಿಗಾಗಿ ಈಗಾಗಲೇ ಕಾರ್ಯನಿರತರಾಗಿರುವುದೂ ಕಾಣಿಸುತ್ತಿದೆ.... ತಮ್ಮ ಕರಕಮಲಸಂಜಾತರ ಅಂತರಂಗ ಆಧ್ಯಾತ್ಮಿಕ ಸೂರ್ಯಪ್ರಕಾಶದಿಂದ ತುಂಬಿದೆ. ಅವರ ಬಹಿರಂಗ ಜೀವನ ಲೋಕಕ್ಕೆ ತಂಪೆರೆವ ಚಂದ್ರಪ್ರಭೆಯಿಂದ ಬೆಳಗುತ್ತಿರುವುದು ಜಾಜ್ವಲ್ಯಮಾನವಾಗಿ ಕಾಣಿಸಿತು...!

ಶ್ರೀಗಳವರ ಮುಖ ಮಂದಹಾಸದಿಂದ, ತೃಪ್ತಿಯ ಬೆಳಕಿನಿಂದ ಬೆಳಗತೊಡಗಿತು.

– ಇದ್ದಕ್ಕಿದ್ದಂತೆ ಅಪಾರ ನೋವು ಹೃದಯವನ್ನು ಕಿತ್ತುಕೊಂಡಂತಾಯಿತು, ಅಷ್ಟೇ...!

..... ಕ್ಯಾತನಹಳ್ಳಿ ಶ್ರೀಗಳು ಶ್ರೀ ಶಿವಪ್ರಭುಸ್ವಾಮಿಗಳವರ ದುಗುಡ ಆತಂಕ ಗಾಬರಿಯ ಧ್ವನಿಯಲ್ಲಿನ ದುಃಖೋದ್ವೇಗವನ್ನು ದೂರವಾಣಿಯಲ್ಲಿ ಕೇಳಿದವರೇ ಕುಂದೂರು ಮಠಾಧ್ಯಕ್ಷರು, ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಅಂತರಂಗದ ಆತ್ಮೀಯರಾದ ಡಾ. ಶ್ರೀ ಇಮ್ಮಡಿ ಶಿವಬಸವ ಸ್ವಾಮಿಗಳವರು ನಿಂತನಿಲವಿನಲ್ಲೇ ಶ್ರೀಮಠಕ್ಕೆ ಧಾವಿಸಿ ಬಂದರು–

ಇಬ್ಬರು ನಿಷ್ಣಾತ ವೈದ್ಯರು ಶ್ರೀ ಶ್ರೀಗಳವರನ್ನು ನಾನಾ ಬಗೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಗುರಿಪಡಿಸಿದ್ದಾರೆ.... ಹೃದಯದ ಸರಾಗ ಕ್ರಿಯೆಗಾಗಿ ಪ್ರಯತ್ನಿಸುತ್ತಿದ್ದಾರೆ...

ಡಾ. ಪಿ. ಶಂಭುಲಿಂಗಪ್ಪನವರು –

"ಬುದ್ದೀ ದಯವಿಟ್ಟು ಎಡಮಗ್ಗುಲಾಗಿ ಮಲಗಿಕೊಳ್ಳಿ"

– ಎಂದು ವಿನಂತಿಸಿ, ತಾವೂ ಸಹಕರಿಸಿದರು.

ಶ್ರೀಗಳವರು ಎಡಮಗ್ಗುಲಾಗುತ್ತ –

"ಶಿವರಾತ್ರೀಶಾ..." ಎಂದು ಉದ್ಗರಿಸಿದರು ! ಅಷ್ಟೇ –

ಬಯಲು ಬಯಲಲಿ ನಿರ್ವಯಲಾಯಿತು !

ವೈದ್ಯರು ಕೈಚೆಲ್ಲಿದರು... ದುಃಖಿತರಾದರು.

ಕ್ಯಾತನಹಳ್ಳಿ ಶ್ರೀಗಳವರು, ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರರು, ಹೊಸಮಠದ ಶ್ರೀಗಳವರು, ಪಡಗೂರು ಶ್ರೀಗಳವರು ಮತ್ತಿತರ ಮಠಾಧೀಶರು ಹಾಗೂ ಗಂಗಾಧರನ್, ಶಿವರಾಮು ಎಲ್ಲರೂ ಹೌಹಾರಿದರು ! ಶೋಕಾರ್ತರಾದರು.

ಕೂಡಲೇ ಡಾ. ಶ್ರೀ ಇಮ್ಮಡಿ ಶಿವಬಸವಸ್ವಾಮಿಗಳವರು ಉಕ್ಕಿಬರುತ್ತಿದ್ದ ದುಃಖೋದ್ವೇಗವನ್ನು ನಿಗ್ರಹಿಸಿಕೊಂಡು –

"ಶರಣರನ್ನು ಮರಣದಲ್ಲಿ ಕಾಣು ಎಂದಿದ್ದಾರೆ ಅನುಭಾವಿಗಳು ! ಈ ಹೊತ್ತು ನಾವೆಲ್ಲ ಪ್ರತ್ಯಕ್ಷ ದರ್ಶಿಸಿದೆವು"

– ಎಂದು ಉದ್ಗರಿಸಿ, ಗೀತೆಯ ಈ ಶ್ಲೋಕವನ್ನು ಉಚ್ಚರಿಸಿದರು –

*"ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಳೇವರಮ್*
*ತಂ ತಮೇವೇತಿ ಕೌಂತೇಯ ಸದಾ ತದ್ಭಾವ ಭಾವಿತಃ"*

(ಗೀತೆ ೮-೬)

೬-೧೨-೧೯೮೬ರ ಮುಂಜಾನೆ ಹೃದಯ ಸಿಡಿದೊಡೆಯುವಂತಹ ಸಿಡಿಲಿನ ವಾರ್ತೆ ಮೈಸೂರು ನಗರದ ಮೇಲೆ ಅಪ್ಪಳಿಸಿತು.

"ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು ಲಿಂಗೈಕ್ಯರಾದರು !" – ಎಂಬ ದಾರುಣ ವಾರ್ತೆ ದುಃಖಜ್ವಾಲೆಯನ್ನು ಕ್ಷಣಮಾತ್ರದಲ್ಲಿ ಹರಡುತ್ತ ಎಲ್ಲರನ್ನೂ ತಲ್ಲಣಗೊಳಿಸಿತು. ದುಃಖಿಸುತ್ತ, ಸಾವಿರಾರು ಜನ ಸಾಲುಸಾಲಾಗಿ ಅಂತಿಮ ಪ್ರಣಾಮ ಸಲ್ಲಿಸಲು ಶ್ರೀಮಠದತ್ತ ಸಾಗಿ ಬಂದರು.

ಸುದ್ದಿಮಾಧ್ಯಮಗಳು ಈ ದಾರುಣ ವಾರ್ತೆಯನ್ನು ಪ್ರಸಾರ ಮಾಡಿದುವು.

ನಾನಾ ಭಾಗಗಳಿಂದ ಜನಪ್ರವಾಹ ನುಗ್ಗಿ ಬರತೊಡಗಿತು.

ಭಾವೀ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರೂ, ಬಾಲ್ಯಕಾಲದಿಂದಲೂ ಪೂಜ್ಯರ ಒಡನಾಡಿಗಳಾಗಿ ನೆರಳಿನಂತೆ ಸದಾ ಅನುಸರಿಸುತ್ತ ಪೂಜ್ಯರ ಎಲ್ಲ ಕಾರ್ಯಗಳಲ್ಲೂ ಸಹಭಾಗಿಯಾಗಿದ್ದ ಕ್ಯಾತನಹಳ್ಳಿ ಬುದ್ದಿಯವರು – ಶ್ರೀ ಶಿವಪ್ರಭು ಸ್ವಾಮಿಗಳವರೂ ಕಂಗಾಲಾಗಿ ಕುಳಿತಿದ್ದಾರೆ. ಶೋಕತಪ್ತರಾಗಿದ್ದಾರೆ.

ಕುಂದೂರು ಮಠದ ಶ್ರೀಗಳು, ಹೊಸಮಠದ ಶ್ರೀಗಳು, ಪಡಗೂರು ಶ್ರೀಗಳು ಮತ್ತಿತರ ಮಠಾಧೀಶರು ಉಕ್ಕಿ ಬರುತ್ತಿದ್ದ ತಮ್ಮ ದುಃಖವನ್ನು ನುಂಗಿಕೊಂಡು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳವರನ್ನು ಸಂತೈಸುತ್ತಿದ್ದಾರೆ. ಮುಂದಿನ ಕಾರ್ಯಕ್ಕೆ ಸೂಚನೆ ಕೊಡುತ್ತಿದ್ದಾರೆ. ಮಠದ ಭಕ್ತರೂ ಪ್ರಮುಖ ಕಾರ್ಯಕರ್ತರೂ ಕಣ್ಣೀರುಗರೆಯುತ್ತ ಮುಂದಿನ ಸಿದ್ಧತೆಯಲ್ಲಿ ತೊಡಗಿದ್ದಾರೆ.

ಮೈಸೂರು ನಗರದ ಶಾಲೆ – ಕಾಲೇಜುಗಳಿಗೆ ರಜಾ ಘೋಷಿಸಲಾಯಿತು. ವಿದ್ಯಾರ್ಥಿಗಳು, ಉಪಾಧ್ಯಾಯರು, ಅಧ್ಯಾಪಕರು, ಪ್ರೊಫೆಸರುಗಳು ಧಾವಿಸಿ ಬಂದರು.

ಬಂದವರೆಲ್ಲ ಪುಷ್ಪಗುಚ್ಛಗಳಿಂದ, ಹೂಹಾರಗಳಿಂದ ಜಗದ್ಗುರುಗಳವರ ಪಾರ್ಥಿವ ಶರೀರವನ್ನು ಮುಳುಗಿಸಿದರು.

ನಗರದಲ್ಲಿನ ಸಂತೇಪೇಟೆಯಲ್ಲಿನ ಎಲ್ಲ ಅಂಗಡಿಗಳನ್ನು ಮುಚ್ಚಿ, ವ್ಯಾಪಾರಸ್ಥರು ದುಃಖಿಸುತ್ತ ಓಡೋಡಿ ಬಂದರು.

ನಗರದ ಎಲ್ಲ ಅಂಗಡಿಗಳೂ ಮುಚ್ಚಿದುವು.

ನಗರದಲ್ಲಿರುವ ಇನ್ನಿತರ ಧಾರ್ಮಿಕ ಗುರುಗಳು ತಮ್ಮ ಅಂತಿಮ ಪ್ರಣಾಮ ಸಲ್ಲಿಸಲು ಐತಂದರು.

ಅರಮನೆಯವರೂ ಆಗಮಿಸಿದರು – ರಾಜಗುರುತಿಲಕರಿಗೆ ತಮ್ಮ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸಿದರು.

ಜೆ.ಎಸ್.ಎಸ್. ಮಹಾವಿದ್ಯಾಪೀಠದ ಎಲ್ಲ ಊರುಗಳಲ್ಲಿನ ಶಿಕ್ಷಣ ಸಂಸ್ಥೆಗಳಿಂದ ವಿದ್ಯಾರ್ಥಿನಿಲಯಗಳಿಂದ ಸಿಕ್ಕ ಸಿಕ್ಕ ವಾಹನಗಳಲ್ಲಿ ಶೋಕಿಸುತ್ತ ಬಂದಿಳಿದರು.

ಹಳೇ ಅಗ್ರಹಾರದಲ್ಲಿ ಹೂ ಮಾರುವ ಹೆಂಗಸರು, 'ಅಯ್ಯೋ ನಮ್ಮಪ್ಪಾ!' – ಎಂದು ಕಣ್ಣೀರು ಸುರಿಸುತ್ತ ಬಂದು, ತಾವು ತಂದ ಹೂಗಳನ್ನು ಶ್ರೀಗಳವರ ಪಾದಗಳಿಗೇರಿಸಿದರು. ತಳ್ಳು ಗಾಡಿಯವರು, ಸಣ್ಣಪುಟ್ಟ ವ್ಯಾಪಾರಿಗಳು ಓಡೋಡಿ ಬಂದರು ! ಹಳೇ ಅಗ್ರಹಾರದಲ್ಲಿ ವ್ಯಾಪಾರ – ವಹಿವಾಟುಗಳೆಲ್ಲ ಸ್ತಬ್ಧವಾದುವು. ಹೋಟಲುಗಳು ಮುಚ್ಚಿದುವು. ಸಿನಿಮಾ ಮಂದಿರಗಳು ಮೌನತಾಳಿದುವು.

ಇಡೀ ರಾಮಾನುಜ ರಸ್ತೆ, ಅರಮನೆಯ ದಕ್ಷಿಣ ದ್ವಾರದ ಮುಂದಿನ ಎಲ್ಲ ರಸ್ತೆಗಳಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತು. ಮನೆಯೊಳಗಿನ ಜನರೆಲ್ಲ, ಜಾತಿಭೇದ ಭಾವವಿಲ್ಲದೆ ಹೆಂಗಸರು, ಮಕ್ಕಳು-ಮರಿಗಳು ಸಾಲು ಸಾಲಾಗಿ ಬಂದು ಅಂತಿಮ ದರ್ಶನ ಪಡೆದರು.

ಮಧ್ಯಾಹ್ನದ ಹೊತ್ತಿಗೆ ಲಾರಿಯ ಮೇಲೆ ವಿಶೇಷವಾಗಿ ನಿರ್ಮಿಸಿದ ಎತ್ತರದ ವಿಶಾಲ ವೇದಿಕೆಯ ಮೇಲಿಟ್ಟ 'ವಿಮಾನ'ದಲ್ಲಿ ಪರಿಮಳಿತ ಪುಷ್ಪಗಳಲ್ಲಿ ಅಡಗಿದ್ದ ಮುಚ್ಚಿ ಹೋದಂತಿದ್ದ ಪೂಜ್ಯ ಜಗದ್ಗುರುಗಳ ಪಾರ್ಥಿವಶರೀರದ ಮೆರವಣಿಗೆ ಪ್ರಾರಂಭವಾಯಿತು.

ಮೈಸೂರು ನಗರದ ಪ್ರಮುಖ ಬೀದಿಗಳಲ್ಲಿ ದುಃಖತಪ್ತರಾದ ಅಸಂಖ್ಯಾತ ಭಕ್ತ ಸಮುದಾಯದ ಮಧ್ಯದಲ್ಲಿ ನಡೆದ ಆ ಮೆರವಣಿಗೆಯಲ್ಲಿ ಮೈಸೂರಿನ ನಾಗರಿಕರು ಭಾಗಿಗಳಾಗಿ ತಮ್ಮ ಶ್ರದ್ಧಾಂಜಲಿಯನ್ನರ್ಪಿಸಿದರು.

ಮೆರವಣಿಗೆಯ ಪ್ರಾರಂಭದಿಂದಲೂ, ವಾಹನದ ಬಲಪಕ್ಕದಲ್ಲಿ ವೃದ್ಧ ಸ್ತ್ರೀಯೊಬ್ಬಾಕೆ ಆರ್ತನಾದದಿಂದ ಏನೇನೋ ಉಗ್ಗಡಿಸುತ್ತಿದ್ದರು ! ಆಕೆ ತೀರಾ ಬಡವಿ ! ಆಕೆ ಶ್ರೀಗಳವರಿಗೆ ಯಾವುದೇ ರೀತಿಯ ಪೂರ್ವಾಶ್ರಮದ ಸಂಬಂಧೀಕಳೂ ಅಲ್ಲ. ಆಕೆ ಯಾರೋ ಏನೋ ! ಹ್ಹಾ.....ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪಟ್ಟಾಧಿಕಾರದ ಶುಭ ಸಂದರ್ಭದಲ್ಲಿ ಏರ್ಪಡಿಸಿದ ಸಮಾರಂಭದಲ್ಲಿ ಹೀಗೆಯೇ ಒಬ್ಬ ವೃದ್ಧೆ ಸ್ತ್ರೀಯರ ಮಧ್ಯದಿಂದ, ಕೋಲೂರಿಕೊಂಡು, ನಡೆಯಲಾರದೆ ನಡೆದು ಬಂದು ವೇದಿಕೆ ಹತ್ತಿ –

"ಮೂಡಲಾ ಗಿರಿ ಸ್ವಾಮಿ ಮೂಡವನೆ ನೋಡಿರೋ
ಬೇಡಿರೋ ಬೇಕಾದ್ದ...."

–ಎಂದು ಹಾಡಿ ಕುಣಿದ ವೃದ್ಧೆ, ಮತ್ತೆ ಭೂತಾಯ ಮಡಿಲನ್ನು ಸೇರ ಹೊರಟಿರುವ ಜಗದ್ಗುರು ಗಳ ಪಾರ್ಥಿವಶರೀರ ಹೊತ್ತ ವಾಹನದ ಬಲಪಕ್ಕದಲ್ಲಿ ಏನನ್ನೋ ಉದ್ಗರಿಸುತ್ತ ಉಗ್ಗಡಿಸುತ್ತ, 'ಹಾಡ್ಯಾಡಿ ಅಳುತ್ತ' ಸಾಗಿಬರುತ್ತಿರುವ ಈ ವೃದ್ಧೆ – ಯಾರಿವರು ?

'ಎತ್ತಣ ಮಾಮರ ಎತ್ತಣ ಕೋಗಿಲೆ
ಎತ್ತಣಿಂದೆತ್ತ ಸಂಬಂಧವಯ್ಯಾ..!?

ಜೀವನದ ಯಾವುದೋ ನಿಗೂಢ ಅಡಗಿದೆ ! ಬಿಡಿಸುವರಾರು?....

ಮೈಸೂರಿನ ಕಿಕ್ಕಿರಿದ ಬೀದಿಗಳನ್ನು ದಾಟಿ ಮೆರವಣಿಗೆ ಊರ ಹೊರಗೆ ಬಂದಾಗ ಆಗಲೇ ರಾತ್ರಿಯಾಗಿತ್ತು. ಅಲ್ಲಿಂದ ಸುತ್ತೂರಿಗೆ ಸಾಗಿಹೋಯಿತು...

ಮರುದಿನ ಮುಂಜಾನೆಯ ವೇಳೆಗೆ ಸುತ್ತೂರು ಜನಸಾಗರ ದುಃಖದ ಅಲೆಗಳಿಂದ ಮುಚ್ಚಿಹೋಗಿತ್ತು. ಸುದ್ದಿಮಾಧ್ಯಮಗಳಿಂದ ಬಿತ್ತರಿಸಿದ ವಾರ್ತೆ ನಾಡಿನ ನಾನಾ ಭಾಗ ಗಳಿಂದ ಜನಪ್ರವಾಹವನ್ನು ಸುತ್ತೂರಿನ ಕಡೆಗೆ ಧಾವಿಸುವಂತೆ ಮಾಡಿತ್ತು...

ಮೈಸೂರು ಜಿಲ್ಲೆಯ ನೂರಾರು ಮಠದ ಸ್ವಾಮಿಗಳಲ್ಲದೆ ಕರ್ನಾಟಕದ ಪ್ರಮುಖ ಮಠಗಳ ಮಹಾಸ್ವಾಮಿಗಳೂ, ಜಗದ್ಗುರುಗಳೂ ಆಗಮಿಸಿದ್ದರು.

ಸುತ್ತೂರು ಶ್ರೀಮಠದಿಂದ ಮುಂಜಾನೆ ಹೊರಟ ಮೆರವಣಿಗೆ ಊರ ಹೊರಗಿನ ಕಾಡುಮಠವನ್ನು ಸೇರುವ ವೇಳೆಗೆ ಮಧ್ಯಾಹ್ನವೇ ಆಯಿತು. ಹಿರಿಯ ಜಗದ್ಗುರುಗಳು ಮಂತ್ರಮಹರ್ಷಿ ಶ್ರೀ ಶ್ರೀ ಶ್ರೀ ಪಟ್ಟದ ಶಿವರಾತ್ರಿ ಮಹಾಸ್ವಾಮಿಗಳವರ ಗದ್ದುಗೆಯ ಪಕ್ಕದಲ್ಲಿಯೇ ಸಿದ್ಧವಾಗಿದ್ದ ಸಮಾಧಿಯಲ್ಲಿ – ನೂರಾರು ಸ್ವಾಮಿಗಳ, ಜಗದ್ಗುರುಗಳ, ಹರಗುರು ಚರಮೂರ್ತಿಗಳ ಸಮ್ಮುಖದಲ್ಲಿ ವಿಧ್ಯುಕ್ತವಾಗಿ ಸಮಾಧಿಕ್ರಿಯೆ ಮುಕ್ತಾಯ ಗೊಂಡು ಮಹಾ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭೌತಿಕದೇಹ ಇನ್ನೆಂದೂ ಕಾಣದಂತೆ ಕಣ್ಮರೆಯಾಗಿ ಪ್ರಕೃತಿ ಗರ್ಭದಲ್ಲಿ ಐಕ್ಯವಾದಾಗ, ಪಡುವಲಲ್ಲಿ ಸೂರ್ಯ ಅಸ್ತಮಿಸಿದ !

ಭಕ್ತಿಯೆಂಬ ಪೃಥ್ವಿಯ ಮೇಲೆ
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು
ನಿಷ್ಪತ್ತಿಯೆಂಬ ಹಣ್ಣಾಯಿತ್ತು
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲ ಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ !

□